42nd Year of Publication. Phone: 3728.

ದೀಪಾವಳಿ ಅಂಕ 1976

ಪ್ರಭಾತ

ಬೆಲೆ 75 ಪೈಸೆ.

ಸಂಪುಟ: ೪೨. ಸಂಚಿಕೆ: ೩೯. | ಸಂಪಾದಕ: ಕುಡ್ವಿ ವಾಸುದೇವ ಶೆಣೈ. ರವಿವಾರ ತಾ. 31—10—1976 | VOL. 42. No. 39.

ಜನಕೆ ಜಾಗ್ರತಿಯುದಯ
ವಿದುವೆ ತಾಮಸ ಜಡತೆ
ಗಳೆನ ವಿಜಯವ ಸಾರ್ವ
ಮೊದಲ ತೂರ್ಯಂ



ಬಗೆಗೆ ಬಾಹ್ಯಜ್ಞಾನ
ವೀವಾದ್ಯ ಶಕ್ತಿಯಿದು
ಸದಮಲಾಂತಃಕರಣ
ತರುಣ ಪ್ರಭಾತಂ

ದೀಪಾವಳಿ ಅಂಕ | 24—10—1976 | DEEPAVALI NUMBER

★ ಶರತ್‌ಚಂದ್ರ ಚಟರ್ಜಿ (ನೂರನೆ ವರ್ಷದ ನೆನಪಿಗಾಗಿ) ★

—ಕೇಶವ ಉಚ್ಚಿಲ, ಎಂ. ಎ.

ಬಂಗಾಲೀ ಸಾಹಿತ್ಯದ ಅವಿಸ್ಮರಣೀಯವಾದ ಹೆಸರುಗಳಲ್ಲಿ ಶರತ್‌ಚಂದ್ರ ಚಟರ್ಜಿಯವರು ಪ್ರಮುಖರು. ಬಂಗಾಳದ ಬದುಕಿನ ವಿವಿಧ ಚಿತ್ರಗಳನ್ನು ಅವರಷ್ಟು ಸುಂದರವಾಗಿ ಚಿತ್ರಿಸಿದ ಸಾಹಿತಿಗಳು ವಿರಳ. ಸ್ವತಃ ಒಳ್ಳೆಯ ಕಾದಂಬರಿಕಾರರಾಗಿದ್ದ ವಿಶ್ವಕವಿ ರವೀಂದ್ರರೇ ಶರತ್ ಬಾಬುಗಳ ಕಾದಂಬರಿಗಳನ್ನು ಓದಿ ಮುಗ್ಧರಾಗಿದ್ದರು. ಶರತ್‌ಚಂದ್ರರ ಹೆಸರು ಕೇಳಿದೊಡನೆಯೆ ನೆನಪಿಗೆ ಬರುವುದು ಸದಾ ಆರ್ದ್ರವಾಗಿದ್ದ ಅವರ ಸದಯಾಂತಃಕರಣ; ಮಾನವೀಯ ಅನುಕಂಪ. ಹೆಸರು ಶರತ್ ಚಂದ್ರನೆಂದಿದ್ದರೂ ಅನ್ಯಾಯದ ಘಟನೆಗಳಿಗೆ ಪ್ರತಿಕ್ರಿಯಿಸುವಾಗ ಅವರು ಉರಿಯುವ ರವಿಯಾಗುತ್ತಿದ್ದರು; ಅವರ ಬರಹಗಳು ಬೆಂಕಿಯನ್ನು ಕಾರುತ್ತಿದ್ದುವು. ಆದರೆ ಆ ಪ್ರಖರ ತೇಜದ ಹಿನ್ನೆಲೆಯಲ್ಲಿ ಎಲ್ಲ ನೊಂದ ಜೀವಿಗಳಿಗಾಗಿ ಎಂದೆಂದೂ ಮುಗಿಯದ ಸಹಾನುಭೂತಿಯ ಕಂಬನಿಯು ಕಡಲೇ ತುಂಬಿತ್ತೆಂದು ಅವರ ಕೃತಿಗಳನ್ನು ಓದಿದ ಯಾರಿಗಾದರೂ ಅನುಭವಕ್ಕೆ ಬರುವ ವಿಚಾರ. ಹಾಗೆ ನೋಡಿದರೆ, ರವೀಂದ್ರರ ಕಾದಂಬರಿಗಳಲ್ಲೂ—ಮುಖ್ಯವಾಗಿ ಸ್ತ್ರೀ ಪಾತ್ರಗಳ ಚಿತ್ರಣದಲ್ಲಿ—ಸಾಕಷ್ಟು ಸಾನುಕ್ರೋಶ ತುಂಬಿವೆ. ಆದರೆ ರವೀಂದ್ರರ ಕಾದಂಬರಿಯ ವ್ಯಕ್ತಿಗಳೆಲ್ಲ ಬಹುತೇಕ ಸಮಾಜದ ಉನ್ನತವರ್ಗದಿಂದ ಬಂದವರು. ಬಹುಶಃ ರವೀಂದ್ರರು ಬೆಳೆದ ಪರಿಸರವೇ ಇದಕ್ಕೆ ಕಾರಣವಾಗಿರಬಹುದು. ಶರತ್‌ಬಾಬುಗಳ ಕೃತಿಗಳಲ್ಲಿ ವಿವಿಧ ವರ್ಗದ, ವಿವಿಧ ಸ್ತರದ ಜನರ ಬದುಕಿನ ಚಿತ್ರಣವಿದೆ. ಬದುಕಿನ ದುರ್ಭರತೆ ಒಬ್ಬ ವ್ಯಕ್ತಿಯದ್ದಾಗಿರಲಿ, ಒಂದು ವರ್ಗದ್ದಾಗಿರಲಿ, ಶರತ್‌ಬಾಬುಗಳ ಹೃದಯ ಅದರ ಸ್ಮರಣ ಮಾತ್ರದಿಂದ ದ್ರವಿಸುತ್ತದೆ. ಅವರ ಸರ್ವಂಕಶವಾದ ಸಹಾನುಭೂತಿ ಎಲ್ಲ ಬಗೆಯ ಜೀವಗಳನ್ನೂ ತೊಳೆದು ಬಿಡುತ್ತದೆ. ಕುಡುಕ, ವ್ಯಭಿಚಾರಿ, ಅನಾಥ, ಅತಂತ್ರ, ವೇಶ್ಯೆ, ಗೃಹಿಣಿ, ರೈತ, ಕಾರ್ಮಿಕ—ಎಲ್ಲರೂ ದಿವ್ಯಕನಿಕರಕ್ಕೆ ಅರ್ಹವಾಗುತ್ತಾರೆ. ಕುಡುಕ ದೇವದಾಸ, ವೇಶ್ಯೆ ಚಂದ್ರಮುಖಿ, ಚರಿತ್ರಹೀನ ಸತೀಶ, ದುರ್ಬಲ ಅಪೂರ್ವ. ಪತಿತೆ ಕಿರಣ್ಮಯಿ, ಉಚ್ಛೃಂಖಲ ಸುರೇಶ-ಎಲ್ಲರೂ ಓದುಗರಲ್ಲಿ ತಿರಸ್ಕಾರದ ಭಾವವನ್ನು ಮೂಡಿಸುವುದರ ಬದಲಾಗಿ, ಮನುಷ್ಯ ಸಾಧಾರಣದ ಆಶೋತ್ತರಗಳ ಮುರಿದ ರೆಕ್ಕೆಗಳಾಗಿ, ಲೋಕದ ಅನಂತ ನೋವಿನ ಪ್ರತೀಕಗಳಾಗಿ ಉಳಿಯುತ್ತಾರೆ. 'ದೇವದಾಸ' ಕಾದಂಬರಿಯ ಕೊನೆಯಲ್ಲಿ ಶರತ್ ಬಾಬುಗಳು 'ದೇವದಾಸನ ಕುರಿತಾಗಿ ನಮಗೆ ಖೇದವೆನಿಸುತ್ತದೆ. ಯಾರಿಗೇ ಆಗಲಿ, ಅಂತಹ ಕೊನೆ ಬಂದರೂ, ಸಾಯುವಾಗ ಮಮತೆಯ ಮೃದು ಹಸ್ತ ಅವನ ತಲೆಯನ್ನು ನೇವರಿಸುತ್ತಿರಲಿ: ಎರಡು ಹನಿ ಕಂಬನಿ ಅವನ ಮುಖದ ಮೇಲೆ ಬೀಳಲಿ' ಎಂದು ಹಾರೈಸಿರುವುದು ಅವರ ಮನೋಧರ್ಮಕ್ಕೆ ಹಿಡಿದ ಕನ್ನಡಿಯಾಗಿದೆ. ಶರತ್ ಚಂದ್ರರು ದಾರಿದ್ರ್ಯದ ದಾರುಣತೆಯನ್ನು ಸ್ವತಃ ಅನುಭವಿಸಿದವರು. ಆದುದರಿಂದಲೋ ಏನೋ ಅವರ ಕೃತಿಗಳಲ್ಲಿ ಬಡತನದ ಕುರಿತು ಅಪಾರ ಮರುಕವೂ ಕಳಕಳಿಯೂ ತುಂಬಿರುತ್ತದೆ. ಈ ಕಾರಣದಿಂದಾಗಿಯೇ ಬಡತನ ಅವರಿಗ ತಿರಸ್ಕಾರಕ್ಕಿಂತಲೂ ಹೆಚ್ಚಾಗಿ ಒಂದು ಬಗೆಯ ದಿವ್ಯ ನಿರ್ಲಕ್ಷ್ಯದ ವಿಷಯವಾಗುತ್ತದೆ. ಅವರ ಅನೇಕ ಕಾದಂಬರಿಗಳಲ್ಲಿ ಬರುವ ಅನೇಕ ವ್ಯಕ್ತಿಗಳು, ಬಡತನದ ಬದುಕನ್ನು ಸ್ವಸಂತೋಷದಿಂದ ಒಪ್ಪಿಕೊಂಡು ಬದುಕುತ್ತಾರೆ. 'ಚರಿತ್ರಹೀನ'ದ ಸಾವಿತ್ರಿಯಾಗಲೀ 'ಅರಗಿನ ಮನೆ'ಯ ಸುರೇಶನಾಗಲೀ, 'ಶ್ರೀಕಾಂತ'ದ ಶ್ರೀಕಾಂತ, ಅನ್ನದಾ ದೀದಿ ಹಾಗು ಸಾಧು ಆನಂದನೇ ಆಗಲಿ ಬಡತನದ ಬದುಕನ್ನು ಬದುಕಲೇ ಬೇಕೆಂಬ ನಿರ್ಬಂಧವಿಲ್ಲದಿರುವಾಗಲೂ ಅದನ್ನೇ ಬಯಸಿ ಬದುಕುತ್ತಾರೆ. 'ಶ್ರೀಕಾಂತ' ಹಾಗೂ 'ಅಧಿಕಾರ' (ಪಥೇರ್ ದಾಬಿ) ಕಾದಂಬರಿಗಳಲ್ಲಿ ಬಂಗಾಳದ ಹಳ್ಳಿಗಳಲ್ಲಿ ಬರ್ಮಾದ ನಗರಗಳ ಕೊಂಪೆ, ಕೊಳಚೆಗಳಲ್ಲಿ ನರಳುತ್ತಿರುವ, ರೈತ-ಕಾರ್ಮಿಕರ ಬಡತನದ, ಮನ ಮುಟ್ಟುವ ಚಿತ್ರಣವಿದೆ. "ಹಳ್ಳಿಯ ಸಮಾಜ" ರೈತರ ಬದುಕಿನ ಒಂದು ವಾಸ್ತವ ನಿರೂಪಣೆ. ಶರತ್ ಬಾಬುಗಳು ಬಡತನಕ್ಕಾಗಿ ಮರುಗಿ ಕಂಬನಿಯ ಕಾಣಿಕೆಯನ್ನು ಮಾತ್ರ ಅರ್ಪಿಸಿ ಕೃತಕೃತ್ಯರಾಗಿಲ್ಲ; ಅದರ ವಿರುದ್ಧ ಹೋರಾಟದ ಚಿತ್ರವನ್ನೂ ನೀಡಿದ್ದಾರೆ.

ಹೋರಾಟವೆಂಬುದು ಬಹುಶಃ ಶರತ್ ಬಾಬುರವರ ಸ್ವಂತ ಬದುಕಿನ ವೈಶಿಷ್ಟ್ಯವೇ ಆಗಿದ್ದಿತು. ಸ್ವಭಾವತಃ ವಿಕ್ಷಿಪ್ತ ಮನೋವೃತ್ತಿಯ ಅವರು ಬದುಕಿನ ಉದ್ದಕ್ಕೂ ಬಡತನ, ಅಧಿಕಾರ, ದಬ್ಬಾಳಿಕೆ, ದಾಸ್ಯ, ಅಂಧಶ್ರದ್ಧೆಗಳ ವಿರುದ್ಧ ನಿರಂತರವಾಗಿ ಹೋರಾಟವನ್ನು ನಡೆಸಿದವರು. ಆದುದರಿಂದ ಅವರ ಕೃತಿಗಳಲ್ಲಿಯೂ ಸಮಾಜದ ಕಂದಾಚಾರಗಳ ವಿರುದ್ಧ, ವಿದೇಶೀ ಪ್ರಭುತ್ವದ ದರ್ಪದ ವಿರುದ್ಧ ಬಂಡಾಯದ ಧ್ವನಿ ಮೊಳಗುತ್ತಿರುತ್ತದೆ. 'ಪಥೇರ್ ದಾಬಿ' ಸ್ವಾತಂತ್ರ್ಯ ಹೋರಾಟದ ರೋಮಾಂಚಕ ಅನುಭವಗಳನ್ನು ವಿವರಿಸುವ ಒಂದು ಸಮರ್ಥ ಕಾದಂಬರಿ.

ಶರತ್ ಕಾದಂಬರಿಗಳೆಂದರೆ, ಕಣ್ಣಿಗೆ ಕಟ್ಟುವುದು ಅವರು ಚಿತ್ರಿಸಿರುವ ಸ್ತ್ರೀ ಪಾತ್ರಗಳು. ಸಂಪ್ರದಾಯದ ಸಂಕಲೆಯಲ್ಲಿ ತೊಳಲಾಡುವ, ಅದರಿಂದ ಹೊರಬರಲು ಚಡಪಡಿಸುವ, ಅದರಿಂದ ಮುಕ್ತರಾದ—ಎಲ್ಲ ಬಗೆಯ ಪಾತ್ರಗಳನ್ನು ಅವರು ಚಿತ್ರಿಸಿದ್ದಾರೆ. ಅಸಹಾಯಕತೆಯ ಪ್ರತಿಮೂರ್ತಿಯಾದ ಪಾರ್ವತಿ, ವೇಶ್ಯೆಯಾದರೂ ತ್ಯಾಗಶೀಲೆಯಾದ ಚಂದ್ರಮುಖಿ, ಆದರ್ಶಗೃಹಿಣಿ ವಿರಾಜ, ಅಪೂರ್ವ ಸಂಯಮಶೀಲೆ ಸಾವಿತ್ರಿ, ಅತೃಪ್ತಿ ತಪ್ತೆ ಕಿರಣ್ಮಯಿ. ಅನುರಾಗಮಯಿ ರಾಜಲಕ್ಷ್ಮಿ, ಸ್ವಾತಂತ್ರ್ಯಪ್ರಿಯೆ ಅಚಲಾ, ವಿಚಾರವಾದಿನಿ ಕಮಲಾ—ಈ ಒಂದೊಂದು ಪಾತ್ರಗಳೂ, ಸಹೃದಯರ ಹೃದಯಭಿತ್ತಿಯಲ್ಲಿ ಅನಂತಕಾಲದ ವರೆಗೆ ಅಚ್ಚಳಿಯದೆ ಉಳಿಯುವಂಥವುಗಳು. ಸ್ತ್ರೀಯರ ವಿಷಯದಲ್ಲಿ ಶರತ್‌ಚಂದ್ರರಿಗೆ ಅಗಾಧವಾದ ಅನುಕಂಪವಿತ್ತು. ಭಾರತೀಯ ಪರಂಪ

(೨ನೇ ಪುಟಕ್ಕೆ ಮುಂದುವರಿದಿದೆ)

"ದೇವದಾಸ", "ಚರಿತ್ರಹೀನ"ದಂತಹ ಹೃದಯಸ್ಪರ್ಶಿ ಕಾದಂಬರಿಗಳನ್ನಿತ್ತ ಶ್ರೀ। ಶರತ್‌ಚಂದ್ರ ಚಟರ್ಜಿಯವರು, ಭಾರತದ ಅಗ್ರಗಣ್ಯ ಕಾದಂಬರಿಕಾರರಲ್ಲೊಬ್ಬರು. ಅವರ "ದೇವದಾಸ" ಕಾದಂಬರಿಯು, ೧೯೩೫ರಲ್ಲಿ, ಕಲ್ಕತ್ತೆಯ ನ್ಯೂಥಿಯೇಟರ್ಸ್‌ನವರಿಂದ ಹೇಮ್ ಬರ್ವಾರವರ ದಿಗ್ದರ್ಶನದಲ್ಲಿ, ಅವರೇ (ಬರ್ವಾ) ಕಥಾನಾಯಕನಾಗಿ ಅಭಿನಯಿಸಿ ಬಂಗಾಲಿಭಾಷೆಯಲ್ಲೂ, ಅಮರ ಕೆ. ಎಲ್. ಸೈಗಲ್ ನಾಯಕನಾಗಿ ಹಿಂದೀಯಲ್ಲೂ ಪ್ರಪ್ರಥಮ ಚಲಚ್ಚಿತ್ರವಾಗಿ, ದೇಶಾದ್ಯಂತ ಜನರ ಮೆಚ್ಚುಗೆಗೆ ಪಾತ್ರವಾಯಿತು, ಅನಂತರ ದಿಲೀಪ್‌ಕುಮಾರನು 'ದೇವದಾಸ'ನಾಗಿ ಅಭಿನಯಿಸಿ ಮತ್ತಷ್ಟು ಪ್ರಸಿದ್ಧವಾಯಿತು—ಈಗ ಮೂರನೇ ಚಲಚ್ಚಿತ್ರ ಸಂಸ್ಥೆಯೊಂದು ಇದನ್ನು ತಯಾರಿಸುತ್ತಿದೆ. ಹಾಗೇ, ಅವರ ಮತ್ತೆ ಕೆಲವು ಕಾದಂಬರಿಗಳೂ ತೆರೆಕಂಡಿವೆ.


ಶರತ್‌ಬಾಬುಗಳ ಕಾದಂಬರಿಗಳನ್ನೋದುವಾಗ, ಕಳೆದ ಶತಮಾನದ ಕೊನೆಯಲ್ಲಿ ಮತ್ತು ಈ ಶತಮಾನದ ಆರಂಭದ ದಶಕದಲ್ಲಿ ಆರೆಂಟು ಮುಗ್ಧಮನೋಹರ ಕಾದಂಬರಿಗಳನ್ನಿತ್ತ ಇಂಗ್ಲೆಂಡಿನ ಥೊಮಸ್ ಹಾರ್ಡಿಯ "Tess", "Far From The Madding Crowd", "Jude the Obscure" (Obscure ಎಂಬುದು ಚರಿತ್ರಹೀನ ಎಂಬ ಅರ್ಥಸೂಚಕ) ಕೃತಿಗಳ ನೆನಪಾಗುತ್ತದೆ. ಮಾನವನ ಯತ್ನ ಮೀರಿಯೂ ಯಾವುದೋ ಅಗೋಚರ ಶಕ್ತಿಯು ಅವನನ್ನು ದುರಂತಕ್ಕೊಯ್ಯುವಂಥ ಹಾರ್ಡಿಯ ಪ್ರಾರಬ್ಧವಾದದ ಛಾಯೆಯು ಶರತ್‌ಚಂದ್ರರ ಕೆಲವು ಕಾದಂಬರಿಗಳಲ್ಲಿ ಭಾಸವಾಗುತ್ತದೆ. ವಿಚಲಿತರಾಗಿ ಅವರ್ಣನೀಯ ಸಂಕಷ್ಟಗೊಳಗಾಗುವ ದುರ್ದೈವಿ ಪಾತ್ರಗಳನ್ನು ಹಾರ್ಡಿಯು ದೈವಾಯತ್ತವೆನಿಸುವಂತೆ ಚಿತ್ರಿಸಿ ದೂರದೂರಕ್ಕೊಯ್ದು ಅವರನ್ನು ಕೊನೆಗೊಳಿಸಿ, ವಾಚಕನ ಹೃದಯದಲ್ಲಿ ಅವರಿಗೆ ಚಿರಸ್ಥಾನವನ್ನೆ ಕೊಡುತ್ತಾನೆ—ಶರತ್‌ಬಾಬುಗಳ ನಾಯಕ-ನಾಯಕಿಯರೂ ಅದೇ ತೆರ ವಾಚಕರ ಹೃದಯವನ್ನಾಕ್ರಮಿಸಿ ಸ್ಥಿರರಾಗುತ್ತಾರೆ. ಇಬ್ಬರೂ, ತಮ್ಮ ಆ ಪಾತ್ರಗಳ ಬಗ್ಗೆ ಕರುಣೆ, ಸಹಾನುಭೂತಿಗಳನ್ನೆ ಉಂಟುಮಾಡುತ್ತಾರೆ.

ಶ್ರೀ। ಕೇಶವ ಉಚ್ಚಿಲರವರು, ಶರತ್‌ಬಾಬುಗಳ ಶತಾಬ್ದಿಯ ನೆನಪಿಗಾಗಿ ಬರೆದ ಈ ಲೇಖನದಲ್ಲಿ, ಆ ಮಹಾನ್ ಲೇಖಕನ ಅತ್ಮ್ಯುದಾರ ಹೃದಯವನ್ನೂ ನಮಗೆ ತೋರುತ್ತಾರೆ.

—ಸಂಪಾದಕ: ಪ್ರಭಾತ.

ದಿ॥ ಶ್ರೀ। ಸುರತ್ಕಲ್ಲು ರಂಗಪ್ಪಯ್ಯ ಹೆಬ್ಬಾರ್

"ಜಯಂತ", ಸುರತ್ಕಲ್ಲು



ಶ್ರೀ। ಎಸ್. ಆರ್. ಹೆಬ್ಬಾರ್ ಎಂದು ಸಣ್ಣಿಸಿದ ಹೆಸರಿಂದ ಜನತೆಗೆ ಚಿರಪರಿಚಿತರಾದ ಶ್ರೀಯುತರು ಇದೇ ತಾ. ೩೦-೯-೬೬ರಲ್ಲು ಗುರುವಾರ ಬೆಳಗಿನಲ್ಲಿ ನಿಧನರಾದರೆಂಬುದು ಅವರ ಪರಿಚಿತರಿಗೆಲ್ಲರಿಗೆ ತೀರಾ ವಿಷಾದಕರವಾದ ವಾರ್ತೆಯಾಗಿದೆ. ಅವರು ಕನ್ನಡ ಸಾಹಿತ್ಯ ಕ್ಷೇತ್ರದಲ್ಲೂ, ಶಿಕ್ಷಕ ವರ್ಗದಲ್ಲೂ, ಕರಣಿಕರ ಗುಂಪಿನಲ್ಲೂ ಬಲು ಹೆಚ್ಚಿನ ಮುಂದಿಗೆ ಗುರುತುಗೊಂಡವರು. ಈ ಬಗೆಯಲ್ಲಿ ತುಸ ಅವರ ಜೀವನದ ಹಿನ್ನೆಲೆಯನ್ನು ಇಲ್ಲಿ ನಮೂದಿಸುವುದು ಯುಕ್ತವಾಗಿದೆ.

ಸುರತ್ಕಲ್ಲಿನ ಕೃಷ್ಣಯ್ಯ ಹೆಬ್ಬಾರ ಮತ್ತು ಪಾರ್ವತಿಯಮ್ಮನವರ ಚೊಚ್ಚಲ ಕೂಸಾದ ಇವರು ಪ್ರಾಥಮಿಕ ಶಿಕ್ಷಣವಷ್ಟನ್ನೆ ಪೂರೈಸಿ–ಮುಂದೆ ಕಲಿಯಲಾಗದೆ–ಊರಿನ ಚಿಕ್ಕ ಸಾಲೆಯಲ್ಲಿ ಅಧ್ಯಾಪಕರಾಗಿ ಸೇರಿದರು. ದೈವೀದತ್ತವಾದ ಬುದ್ಧಿ ಶಕ್ತಿ ಹಾಗೂ ಸ್ವಾರ್ಜಿತವಾದ ಅಧ್ಯಯನಗಳಿಂದ ಇವರೊಬ್ಬ ಪಂಡಿತರಾಗುವ ಪುಣ್ಯಸಮಯವೊದಗಿತು. ಮಂಗಳೂರ ಸರಕಾರಿ ಕಾಲೇಜಿನಲ್ಲಿ ಆಗ ಕನ್ನಡದ ಹಿರಿಯ ಪಂಡಿತರೊಬ್ಬರು ಕೆಲವು ತಿಂಗಳ ರಜೆಯಲ್ಲಿದ್ದಾಗ, ಇವರ ಸಂಬಂಧಿಕವರ್ಗದವರಿಂದ ತಿಳಿದು ಇವರ ಪಾಂಡಿತ್ಯದ ಸುದ್ದಿಯಂತೆ, ಇವರಿಗೆ ತಾತ್ಕಾಲಿಕವಾಗಿ ಅಲ್ಲಿ ಆ ಶಿಕ್ಷಕ ವೃತ್ತಿಯೊದಗಿತು. ಅದೇ ಹೊತ್ತಿಗೆ ಬಂಟವಾಳದಲ್ಲಿ–ಬೇರೆಯವರ ಒತ್ತಾಸೆಯಿಂದಾಗಿ–ಶಾಲೆಯ ಅಧ್ಯಾಪಕರಾಗಲು ಬಯಸಿದರು. ಅಲ್ಲಿ ಮತ್ತೆ ಕೆಲವೇ ತಿಂಗಳಲ್ಲಿ ಬೇರೆಯವರು ನಿಯಮಿತರಾದ ಕಾರಣ ಇವರು ಮನೆಗೆ ಮರಳಬೇಕಾಯಿತು. ಪರಂತು, ಈ ಸಂದರ್ಭದಿಂದಾಗಿ ಇವರು 'ಕನ್ನಡ ವಿದ್ವಾನ್' ಪರೀಕ್ಷೆಗೆಳಸಿದ್ದರೂ (ಪರೀಕ್ಷೆಗೆ ಹಣ ಕಟ್ಟಿದ್ದರೂ) ಏನೋ ತುಸ ವೈರಾಗ್ಯದಿಂದ ಮುಂದೆ ಸಾಗಲಾರದಾದರು. ತನ್ನ ಹುಟ್ಟೂರಲ್ಲಿಯೆ ಚಿಕ್ಕ ಒಂದು ಪುಸ್ತಕಾಲಯ ಪತ್ರಿಕೆಗಳ ಮಾರಾಟದ ವ್ಯವಹಾರವನ್ನು ಕೈಗೊಂಡರು. ಅಂತೆ.'ಸದ್ಬೋಧ ಗ್ರಂಥಮಾಲೆ'ಯೊಂದನ್ನು ತೊಡಗಿ, ತನ್ನ ಹಾಗೂ ತನ್ನತಮ್ಮನಾದ ಶ್ರೀ। ಸುರತ್ಕಲ್ಲು ಸುಬ್ಬರಾಯರ ಚಿಕ್ಕ ಪುಸ್ತಿಕೆಗಳನ್ನು ಮೊದಲ ಬಾರಿಗೆ ಪ್ರಕಟಿಸಿದರು. ಮಂಗಳೂರಲ್ಲಿದ್ದಾಗ, ಇವರಲ್ಲಿದ್ದ - ಇವರ ಸಂಪತ್ತೆನಿಸಿದ–ಉತ್ತಮ ಪುಸ್ತಕಗಳ 'ಟ್ರಂಕ್'ಗಳೆಲ್ಲವೂ ಪರಹಸ್ತಗತವಾದುವು; ತನ್ನ ಜೀವನಕ್ಕೋಸುಗ ಅಲ್ಲಲ್ಲಿಯ ಮಹಾಜನರು ನೆರವಾಗಿದ್ದರು; ಅವರ ವರದ ಪುಸ್ತಕಗಳೆಲ್ಲವೂ–ಅವರಿಂದ ಮರಳಿಸಲಾಗದೆ—ಕೈಬಿಟ್ಟುವೆಂದು ಅವರು ಅನೇಕಶಃ ನನ್ನಲ್ಲಿ ಬಾಯ್ದೆರೆ ಹೇಳುತಿದ್ದರು!

ಇವರು ಕುಟುಂಬದಲ್ಲಿ ಹಿರಿಯ ಮಗನಾಗಿದ್ದರೂ, ಮುಂದೆ ಇವರಿಗೆ ದೊರೆಯ ತಕ್ಕ ಆಸ್ತಿ ವಗೈರೆಗಳೇನೂ ಸಿಗಲಿಲ್ಲ! ಇದರ ಕಾರಣವೆಂದರೆ, ಇವರು ತಾನೇ ತಾನಾಗಿ ವಿಹರಿಸುತ್ತಾ ಮಂಗಳೂರಲ್ಲಿದ್ದರು; ಇವರು ಹಲವರಿಂದ ಕೈಸಾಲಗಳನ್ನು–ಜೀವನಕ್ಕಾಗಿ–ಪಡೆಯುತಿದ್ದರು; ಈ ವಿಚಾರವನ್ನರಿತು ಇವರ ತಂದೆಯವರು ಇವರನ್ನು ಕರೆಯಿಸಿ, ಇವರಿಗೆ ಆಸ್ತಿಯಲ್ಲಿರುವ ಹಕ್ಕನ್ನು ತನ್ನ ಹೆಸರಿಗೆ ಬರೆಯಿಸಿಕೊಂಡರಂತೆ (ಶ್ರೀ। ರಂಗಪ್ಪಯ್ಯ ಹೆಬ್ಬಾರರು ಹಲವು ಬಾರಿ ಇದನ್ನು ಹಲವರಲ್ಲಿ ಹೇಳಿದ್ದುಂಟು) ಗೃಹಸ್ಥಾಶ್ರಮಿಯಾಗಿದ್ದ ಶ್ರೀಯುತರಿಗೆ ಮೊದಲ ಹೆಂಡತಿಯಲ್ಲಿ ಮಕ್ಕಳಾಗಿದ್ದರು. ಪರಂತು, ತಾನೊಬ್ಬನೇ ಸ್ವತಂತ್ರವಾಗಿದ್ದು ಬಾಳಬೇಕೆಂಬ ಹಟದಿಂದ ಕೂಡಿದ ಇವರು ಆ ಮೊದಲಲ್ಗೊಂಡು ಪ್ರತ್ಯೇಕವಾಗಿರಹತ್ತಿದ್ದರು.

ಸುರತ್ಕಲ್ಲಿನಲ್ಲೆ ತನ್ನ ಎರಡನೆಯ ತಮ್ಮನ ಹಕ್ಕಿನದ್ದಾದ ಚಿಕ್ಕ ಜಾಗದಲ್ಲಿ ತಾನೊಂದು ಗುಡಿಸಲನ್ನು ಕಟ್ಟಿದರು. ಪಕ್ಕದ ಊರಿನವನೊಬ್ಬನು ತಾನು ಮದುವೆಯಾದ ಹೆಂಡತಿಯನ್ನು ತಕ್ಕಂತೆ ನಡೆಯಿಸಿಕೊಳ್ಳದೆ, ಆಕೆ ತವರಿನಲ್ಲಿದ್ದಳು; ಆ ವಿತಂತು ಬ್ರಾಹ್ಮಣಿಯನ್ನು ಇವರು ಮನವೊಲಿಸಿ ಕರೆಯಿಸಿ, ಈ ಗುಡಿಸಲಲ್ಲಿ ಬಾಳಹತ್ತಿದ್ದರು. ಹುಟ್ಟಿದೂರಿನಲ್ಲಿಯೆ ಇವರಿದ್ದುದರಿಂದಾಗಿ, ಸ್ವಕೀಯರಲ್ಲಿ ತಕ್ಕ ಗೌರವಾದರಗಳಿಂದ ಕೂಡಿಕೊಂಡವರಾಗಿದ್ದರು; ಜೀವನಕ್ಕೋಸುಗ ಕರಣಿಕರಾದರು. ಕೋರ್ಟ್ ಕಚೇರಿಗಳ ರಿಕಾರ್ಡ್‌ಗಳ ಬರೆವಣಿಗೆ ಹಾಗೂ ಅಂಗಡಿಗಳ ಲೆಕ್ಕಪತ್ರಗಳ ಕ್ಲ್ಪಪ್ತ ಬರೆವಣಿಗೆಯಿಂದ ಬರುವ ಸ್ವಲ್ಪ ಹಣದಿಂದಲೆ ತೃಪ್ತರಾಗಿ ಬಾಳನ್ನು ಸಾಗಿಸಿದರು, ಶ್ರೀ। ಹೆಬ್ಬಾರರು.

ಮುದ್ದಾದ ಬರೆಹಗಳುಳ್ಳ ಇವರ ಒಕ್ಕಣೆ ಬಲುಮಂದಿಗೆ ಸುಪ್ರಿಯವಾದುವು. ಬರೆವಣಿಗೆಗೆ ಕುಳಿತರೆ. ರಾತ್ರಿ ಹಗಲೆನ್ನದೆ, ಅಲ್ಲಿಯ ಆ ಬಾರಿಯ ಕೆಲಸವನ್ನು ಪೂರೈಸಿಬಿಡುತಿದ್ದರು; ಆಮೇಲೇನೇ ಇವರಿಗೆ ಊಟವಾಗಬೇಕು; ೨–೩ ರಾತ್ರಿಗಳನ್ನು ಹೀಗೆ (ಊಟವಿಲ್ಲದೆ) ಅವರು ಕಳೆಯುತ್ತಿದ್ದರು; ಕೇವಲ ಚಹಾ ಮತ್ತು ಬೀಡಿಗಳೇ ಅವರ ಆಗಿನ ಜೀವನವಸ್ತುಗಳಾಗಿದ್ದುವೆಂದು ಶ್ರೀಯುತರೇ ನನ್ನಲ್ಲಿ ಹೇಳಿದ್ದಾರೆ. ಸುರತ್ಕಲ್ಲು, ಹಳೆಯಂಗಡಿ, ಕಿನ್ನಿಗೋಳಿ ಮುಂತಾದ ಸ್ಥಲಗಳ ಹಲವು ಅಂಗಡಿಗಾರರಿಗೆ ಇವರ ಈ ವಿಚಾರ ತಿಳಿದಿದೆಯೆಂದರೆ ಸುಳ್ಳಲ್ಲ!

ಇವರ ಆಸುಪಾಸಿನಲ್ಲಿ ನಡೆವ ಆವುದೇ ಸಭೆ-ಸಮಾರಂಭಗಳಲ್ಲಿ ಆಮಂತ್ರಿತರಾಗಿ ಶ್ರೀಯುತರು ಹಾಜರಾಗುತಿದ್ದರು; ಅಂದಿನ ಕಾರ್ಯಕಲಾಪಗಳಲ್ಲಿ ಶ್ರೀಯುತರ ಚಿಕ್ಕ ಭಾಷಣ ತಪ್ಪಿದ್ದಲ್ಲ! ಕೆಲ ಕಾಲದಿಂದ–ಇದೀಗ–ತೊಡಗಿದ ಇವರ ದೈಹಿಕವಾದ ಅನಾರೋಗ್ಯದಲ್ಲೂ, ಇವರ ಸಾಹಿತ್ಯದ ಒಲುಮೆ ಕಡಿಮೆಯಾಗಿದ್ದಿಲ್ಲ. ತನ್ನ ಕೈಯಲ್ಲಿ–ತನ್ನ ಸಂಪಾದನೆಯಿಂದಾಗಿ–ಒಂದೆರಡು ಸಾವಿರ ರುಪಾಯಿಗಳು ಒದಗಿದರೆ, ತಾನು (೧೯೨೫ರಲ್ಲು) ಪ್ರಕಟಿಸಿದ ಕೃತಿಗಳನ್ನು ಪುನಃ ಒಂದು ಸಂಪುಟವಾಗಿಸಬೇಕೆಂದು ಹಲಬಾರಿ ನನ್ನಲ್ಲಿ ಉದ್ಗಾರವಾಡಿದ್ದರು. ಕೇವಲ ಪರಾವಲಂಬನೆಯಿಂದಲೇ ಸಾಹಿತ್ಯ ಪ್ರಕಟನೆಗೆಳಸಲೊಲ್ಲನೆಂಬ ಛಲವಾದಿಗಳಿವರು!

ಸಾಹಿತ್ಯದಲ್ಲಿ ಇವರೊಬ್ಬ ಕ್ರಾಂತವಾದಿಗಳೆಂದರೆ ಸುಳ್ಳಲ್ಲ. ಇದಕ್ಕೊಂದು ಚಿಕ್ಕ ಉದಾಹರಣವಾಗಿ, ೧೯೨೭ರಲ್ಲು 'ಉದಯಭಾರತ'ದಲ್ಲಿ ಪ್ರಕಟವಾದ 'ಸ್ವರ್ಗವೆಲ್ಲಿದೆ?' ಎಂಬ ಲೇಖನವನ್ನು ಹೇಳಬಹುದು. ಪೌರಾಣಿಕವಾಗಿ ಹೇಳುವ ಸ್ವರ್ಗದ ಬಗೆತವನ್ನು ಸರಿಯಾಗಿ ಸಾಧಿಸಿ ಅಲ್ಲಿ ಬಿತ್ತರಿಸಿದ್ದಾರೆ!

ಬಲು ಸರಳ ಸ್ವಭಾವದ ಮತ್ತು ಸ್ವಲ್ಪ ತೃಪ್ತಿಯ ಬಗೆಗೆ ಶ್ರೀಯುತರು ಕೈಬೆರಳೆತ್ತಿ ತೋರಿಸತಕ್ಕವರು! ಸಾಹಿತ್ಯ ಲೇಖನಗಳುಳ್ಳ ಹಲವಾರು ಕನ್ನಡ ದೈನಿಕ, ಸಾಪ್ತಾಹಿಕ, ಮಾಸಪತ್ರಿಕೆಗಳನ್ನು ಬಾಳಿನ ಕೊನೆಯ ವರ್ಷದನಕ ಇವರು ಹಣಗೊಟ್ಟು ಪಡೆಯುತಿದ್ದರು. ತಾನೂ ಓದಬೇಕು; ತನ್ನ ಮಕ್ಕಳೂ ಗೆಳೆಯರೂ ಓದಬೇಕೆಂಬ ಸದಾಗ್ರಹವಿದಕ್ಕೆ ಕಾರಣ! ಆಯಾ ಪತ್ರಿಕೆಗಳಲ್ಲಿ ಬಂದ ವಿಶೇಷ ಲೇಖನಗಳನ್ನು ಕುರಿತು ಆಗಾಗ ಗೆಳೆಯರಲ್ಲಿ ಮನಬಿಚ್ಚಿ ಮಾತಾಡುತಿದ್ದರು. ಇವರ ನಿಧನದಿಂದ ಕನ್ನಡದ ಹಿರಿಯರ ಪಾಲಿಗೆ ದೊಡ್ಡ ದುಃಖವೊದಗಿದೆ! ——

(೧ನೇ ಪುಟದಿಂದ)

ರೆಯು, ನಾನಾ ವಿಧವಾದ ಬಂಧನದಲ್ಲಿ ಬಳಲುತ್ತಿದ್ದರೂ, ಭಾರತೀಯ ನಾರಿಯ ಆತ್ಮಶಕ್ತಿಯ ತೇಜಸ್ಸು ಎಂಥಾದ್ದೆಂಬುದನ್ನು ಶರತ್‌ಬಾಬು ಚೆನ್ನಾಗಿ ಮನಗಂಡಿದ್ದರು. ಆದುದರಿಂದಲೇ, ಅವರ ಕಾದಂಬರಿಗಳಲ್ಲಿ ಬರುವ ಸ್ತ್ರೀಪಾತ್ರಗಳನ್ನು, ಅವು ಸಾಮಾಜಿಕ ಮಾನದಿಂದ ಪತಿತವೆಂದು ಕರೆಯಿಸಲ್ಪಟ್ಟ ಸಂದರ್ಭಗಳಲ್ಲಿಯೂ, ಒಂದು ವಿಧವಾದ ಗೌರವಮಿಶ್ರಿತವಾದ ಅನುಭೂತಿಯಿಂದ ಶರತ್‌ಬಾಬುಗಳು ಚಿತ್ರಿಸುತ್ತಾರೆ.

ಶರತ್‌ಚಂದ್ರಬಾಬುಗಳ ಈ ವಿಧದ ಮಾನವೀಯ ದೃಷ್ಟಿಕೋನವೇ. ಅವರನ್ನು ಬಂಗಾಳದ ಅತ್ಯಂತ ಜನಪ್ರಿಯ ಕಾದಂಬರಿಕಾರನನ್ನಾಗಿ ಮಾಡಿದುದು. ೧೯೧೩ರಲ್ಲಿ ಅವರ ಕೃತಿಗಳು ಪ್ರಕಟವಾಗಲು ತೊಡಗಿದೊಡನೆ, ಬಂಗಾಳದ ಸಾಹಿತ್ಯಕ್ಷೇತ್ರದಲ್ಲಿ ಒಂದು ಬಿರುಗಾಳಿಯೇ ಎದ್ದಂತಾಯಿತೆಂದು ಬಂಗಾಳದ ಸಾಹಿತ್ಯಚರಿತ್ರಕಾರರು ಹೇಳಿರುವ ಮಾತು ಗಮನಾರ್ಹವಾದುದು. ಒಂದು ಸಂದರ್ಭದಲ್ಲಿ ರವೀಂದ್ರರನ್ನೂ ಹಿಂದೆ ಸರಿಸುವಷ್ಟು ಜನಪ್ರಿಯತೆ ಶರತ್ ಚಂದ್ರರಿಗಿತ್ತು. ೧೯೩೮ರಲ್ಲಿ ಅವರು ನಿಧನರಾಗುವ ವರೆಗೂ, ಆ ಜನಪ್ರಿಯತೆ ಏಕಪ್ರಕಾರವಾಗಿ ಉಳಿಯಿತು. ಈಗಲೂ, ಮೌಲ್ಯವಿವೇಚನೆಯಲ್ಲಿ ಸಾಕಷ್ಟು ಪರಿವರ್ತನೆಯಾಗಿದ್ದರೂ, ಇನ್ನೂ ಶರತ್ ಬಾಬುಗಳ ಕೃತಿಗಳು ತಮ್ಮ ಕಾವನ್ನು ಕಳೆದುಕೊಂಡಿಲ್ಲ. ಕನ್ನಡ ಸಾಹಿತ್ಯದಲ್ಲಿ ಶರತ್ ಕೃತಿಗಳು ಗಮನೀಯವಾದ ಸ್ಥಾನವನ್ನು ಗಳಿಸಿವೆ. ಅವರ ಒಂದೊಂದು ಕೃತಿಗಳು ಹಲವಾರು ಅನುವಾದಗಳ ಆವೃತ್ತಿಗಳಾಗಿ ಇಂದಿಗೂ ಹೊರಬರುತ್ತಿರುವುದು ಜನಪ್ರಿಯತೆಯ ದ್ಯೋತಕವಾಗಿದೆ.

——

ನಮ್ಮ ಜಿಲ್ಲೆಯ ಕೆಲವೇ ಸಾಹಿತ್ಯ ಸಂಶೋಧಕರಲ್ಲೊಬ್ಬರಾಗಿರುವ ಶ್ರೀ। ಕೆ. ವೆಂಕಟರಾಯಾಚಾರ್ಯ. ವಿದ್ವಾನ್ ಅವರು ನಾಡಿಗೆ ನಷ್ಟವಾಗಿ ಹೋಗಬಹುದಾಗಿದ್ದ ಹಲವು ಅಮೂಲ್ಯ ಕೃತಿಗಳನ್ನು ಸಂಶೋಧಿಸಿಯೂ, ಕಷ್ಟನಷ್ಟಗಳನ್ನೆಣಿಸದೆ ಪ್ರಕಟಿಸಿಯೂ ಅಮೂಲ್ಯ ಸೇವೆ ಸಲ್ಲಿಸಿದ್ದಾರೆ, ಸಲ್ಲಿಸುತ್ತಲೇ ಇದ್ದಾರೆ. ಹಾಗೆಯೇ, ಜಿಲ್ಲೆಯವರಿಗೂ ಕನ್ನಡನಾಡಿಗೂ ಮರೆತುಹೋಗಲಿದ್ದ ಹಲವು ಸಾಹಿತಿಗಳ ಕೊಡುಗೆಯೇನು—ಎಷ್ಟು, ಅವರ ಬಾಳು ಹೇಗೆ ಸಾಗಿತು—ಎಂಬುದನ್ನು ಬೆಳಕಿಗೆ ತಂದಿರಿಸುವಲ್ಲಿ ಸತತ ಶ್ರಮಿಸುತಿದ್ದಾರೆ.

ಈಗ ತಾನೆ ಕಣ್ಮರೆಯಾದ ಶ್ರೀ। ಸುರತ್ಕಲ್ಲು ರಂಗಪ್ಪಯ್ಯ ಹಬ್ಬಾರರು, ಈ ಶತಮಾನದ ಮೂರನೇ–ನಾಲ್ಕನೇ ದಶಕಗಳಲ್ಲಿ ಜಿಲ್ಲೆಯ ಪತ್ರಿಕಾರಂಗಕ್ಕೆ ಮೌಲಿಕ ಲೇಖನಗಳನ್ನಿತ್ತು, ಸಾಹಿತ್ಯ ದೀವಿಗೆಯನ್ನು ಪ್ರಕಾಶಮಾನವಾಗಿಡುವುದರಲ್ಲಿ ನೆರವಾದವರು. ನಾನೂ ನನ್ನ ಕೆಲವು ಮಿತ್ರರೂ ನಾಲ್ಕನೇ ದಶಕದ ಅರಂಭದಲ್ಲಿ ಮಂಗಳೂರಿನಲ್ಲಿ "ಸ್ವದೇಶೀ ಯುವಕ ಸಂಘ"ವನ್ನು ಸ್ಥಾಪಿಸಿ, "ಸ್ವದೇಶೀ ಪ್ರಚಾರಕ" ಮಾಸಪತ್ರಿಕೆಯನ್ನು ಹೊರಡಿಸಿದ್ದಾಗ,—ಮಂಗಳೂರಿನಲ್ಲಿರುತಿದ್ದ ಶ್ರೀ। ಹೆಬ್ಬಾರರ ಲೇಖನಸಹಾಯವನ್ನೂ ಸಲಹೆಗಳನ್ನೂ ಹೊಂದಿದ್ದೆವು. ಸ್ನೇಹಮಯ ಸ್ವಭಾವದ ಶ್ರೀ। ಹೆಬ್ಬಾರರು, "ಪ್ರಭಾತ"ದ ಆರಂಭದ ದಶಕದಲ್ಲಿ ನನಗೆ ಸಾಕಷ್ಟು ನೆರವಾಗಿದ್ದವರು. ಶ್ರೀ। ಕೆ. ವೆಂಕಟರಾಯಾಚಾರ್ಯರು ಶ್ರೀ। ಹೆಬ್ಬಾರರ ಕುರಿತು ಬರೆದ ಈ ಲೇಖನವು, ಪೂರ್ಣ ನಮ್ಮ ಸ್ಮರಣೆಯಿಂದ ದೂರವಾಗಬಹುದಾಗಿದ್ದ ಸಾಹಿತಿ ಗೆಳೆಯನನ್ನು ಪುನಃ ಜಿಲ್ಲೆಯವರಿಗೆ ಪರಿಚಯಿಸುತ್ತದೆ.

—ಕುಡ್ಪಿ ವಾಸುದೇವ ಶೆಣೈ.

ಅಮೆರಿಕದಲ್ಲಿ ಶಿಕ್ಷಣ

★

(ಅಮೆರಿಕದಲ್ಲಿ ಶಿಕ್ಷಣವು ಎಲ್ಲರಿಗೂ ಲಭ್ಯವಿರುವುದಷ್ಟೇ ಅಲ್ಲದೆ, ಬಹುತೇಕ ರಾಜ್ಯಗಳಲ್ಲಿ ೭ರಿಂದ ೧೬ ವರ್ಷ ವಯಸ್ಸಿನ ವರೆಗಿನ ಎಲ್ಲರಿಗೂ ಶಾಲಾ ಹಾಜರಾತಿ ಕಡ್ಡಾಯವಾಗಿರುವುದು. ಅಮೆರಿಕದಲ್ಲಿ ಎಲಿಮೆಂಟರಿ ಹಾಗೂ ಸೆಕೆಂಡರಿ ಶಾಲೆಗಳಿಗೆ ವೆಚ್ಚ ಮಾಡಲಾಗುತ್ತಿರುವ ಮೊತ್ತವು ೧೯೬೦ರಲ್ಲಿ ೧೮,೦೦೦ ದಶಲಕ್ಷ ಡಾಲರುಗಳಷ್ಟಿದ್ದುದು ೧೯೭೦ರಲ್ಲಿ ೪೫,೩೦೦ ದಶಲಕ್ಷ ಡಾಲರುಗಳಿಗೂ ಮತ್ತು ೧೯೭೪ರಲ್ಲಿ ೬೧,೬೦೦ ದಶಲಕ್ಷ ಡಾಲರ್‌ಗಳಿಗೂ ಬೆಳೆದಿದ್ದು, ಶಿಕ್ಷಣದಲ್ಲಿ ರಾಷ್ಟ್ರದ ಹೂಡಿಕೆ ಸತತವಾಗಿ ಹೆಚ್ಚುತ್ತಿದೆ ಎಂಬುದನ್ನು ಅಮೆರಿಕನರು ತಮ್ಮ ದ್ವಿಶತಮಾನೋತ್ಸವ ವರ್ಷದಲ್ಲಿ ಹೆಮ್ಮೆಯಿಂದ ಸ್ಮರಿಸುತ್ತಾರೆ.)

ಪ್ರಾಥಮಿಕ ಹಾಗೂ ಸೆಕೆಂಡರಿ ಶಿಕ್ಷಣದ ಬಗೆಗೆ ಅಮೆರಿಕದ ಸಾರ್ವಜನಿಕ ಶಾಲಾ ವ್ಯವಸ್ಥೆಯು ರಾಷ್ಟ್ರದ ಸಂಸ್ಥೆಗಳಲ್ಲೇ ಅತ್ಯಂತ ಗಮನಾರ್ಹವಾದುದು. ಅಮೆರಿಕದಲ್ಲಿ ಪ್ರಾಥಮಿಕ ಹಾಗೂ ಸೆಕೆಂಡರಿ ಶಿಕ್ಷಣವು ಎಲ್ಲರಿಗೂ ಉಚಿತವಾಗಿ ಲಭ್ಯವಿರುವುದು. ಆದುದರಿಂದ ಇದು ಸದಾ ಸಾರ್ವಜನಿಕ ಚರ್ಚೆಗೆ ಗುರಿಯಾಗಿದೆ. ೧೯೭೦ರ ಜನಗಣತಿಯ ಪ್ರಕಾರ ಒಟ್ಟು ಎಲಿಮೆಂಟರಿ-ವಯಸ್ಸಿನ ಮಕ್ಕಳಲ್ಲಿ ಶೇಕಡ ೮೭ರಷ್ಟು ಮಕ್ಕಳು ಶಾಲೆಗಳಲ್ಲಿ ಪ್ರವೇಶ ಪಡೆದಿದ್ದರು. ಒಟ್ಟು ಜನಸಂಖ್ಯೆಗೆ ಸರಾಸರಿ ಲೆಕ್ಕ ಹಾಕಿದರೆ. ಪೂರ್ತಿಯಾದ ಶಾಲಾ ವರ್ಷಗಳು ೧೨.೭ ಎಂದು ವ್ಯಕ್ತವಾಯಿತು.

ಅಮೆರಿಕದ ೮೩,೦೦೦ ಸಾರ್ವಜನಿಕ ಶಾಲೆಗಳು ಮತ್ತು ಅವುಗಳ ಸುಮಾರು ೫೧ ದಶಲಕ್ಷ ವಿದ್ಯಾರ್ಥಿಗಳ ಬಗೆಗೆ ನಡೆಯುತ್ತಿರುವ ಪ್ರಸಕ್ತ ಚರ್ಚೆಗಳು ಶಾಲೆಗಳಲ್ಲಿ ಶಿಸ್ತು ಮತ್ತು ನೆರೆಹೊರೆಯ ನಿಯಂತ್ರಣ ಮುಂತಾದ ಪರಸ್ಪರ ವಿಭಿನ್ನ ವಿಷಯಗಳನ್ನೊಳಗೊಂಡಿವೆ. ಆದರೆ ಶಿಕ್ಷಣದ ಉದ್ದೇಶ ಮತ್ತು ಮಕ್ಕಳಿಗೆ ಯಾವ ಬಗೆಯ ಸ್ಕೂಲ್ ಅತ್ಯುತ್ತಮವಾದುದು ಎಂಬ ಬಗೆಗೆ ತೀವ್ರ ವ್ಯಾಖ್ಯಾನಗಳು ಹಾಗೂ ಬಿಸಿ ಚರ್ಚೆಗಳು ನಡೆಯುತ್ತಿವೆ ಅನೇಕ ಬಗೆಯ ವಿವಾದಾತ್ಮಕ ಅಭಿಪ್ರಾಯಗಳನ್ನು ಮುಂದಿಡಲಾಗಿದೆ, ಅನೇಕ ಬಗೆಯ ಪರಿಹಾರಗಳನ್ನೂ ಸೂಚಿಸಲಾಗಿದೆ. ಈ ಎಲ್ಲ ವಾದ ವಿವಾದಗಳ ಕೇಂದ್ರ ವಸ್ತುವೆಂದರೆ ಎಲ್ಲ ಮಕ್ಕಳಿಗೂ ಶಿಕ್ಷಣ ಪಡೆಯುವ ಹಕ್ಕಿರುವುದಷ್ಟೇ ಅಲ್ಲದೆ ಒದಗಿಸಲು ಸಾಧ್ಯವಾಗುವಂಥ ಅತ್ಯುತ್ತಮ ಶಿಕ್ಷಣವನ್ನು ಪಡೆಯುವ ಹಕ್ಕಿದೆ ಎಂಬ ಗಾಢವಾದ ಅಮೆರಿಕನರ ನಂಬುಗೆ.

ಯಾವುದು ಅತ್ಯುತ್ತಮವಾದುದು ಎಂಬ ಬಗೆಗೆ ಸಾಮಾನ್ಯ ಒಪ್ಪಿಗೆ ಇಲ್ಲದಿರುವುದರಿಂದ ವಿವಾದಗಳು ಉದ್ಭವಿಸುತ್ತವೆ. ಶಿಕ್ಷಣದ ಉದ್ದೇಶವೇನು? ಈ ಬಗ್ಗೆ ಪ್ರಾರಂಭದ ವಿವಾದಗಳಲ್ಲಿ ಕೆಲವು "ಸಂಪ್ರದಾಯವಾದಿಗಳು" ಮತ್ತು "ಮಾನವೀಯ ವಿಚಾರವಾದಿಗಳ" ನಡುವೆ ಹಾಗೂ ಇವರಿಬ್ಬರ ಮತ್ತು "ಸಾಮಾಜಿಕ ಸುಧಾರಕರ" ನಡುವೆ ಇದ್ದವು. ಸಾಮಾಜಿಕ ಸುಧಾರಕರಲ್ಲಿ ಶಾಲೆಗಳು ಸಂಪೂರ್ಣವಾಗಿ ಸ್ವತಂತ್ರವಾಗಿರಬೇಕು. ಅನಿರ್ಬಂಧಿತವಾದ "ಮಕ್ಕಳ ಪ್ರಪಂಚ"ವಾಗಿರಬೇಕು ಎಂದು ಇಚ್ಛಿಸುವವರಿಂದ ಹಿಡಿದು ಶಾಲೆಯು ಸಮಾಜದ ಸಾಂಸ್ಕೃತಿಕ ಕ್ರಾಂತಿಯನ್ನು ರೂಪಿಸುವ ಕೇಂದ್ರ ಎಂದು ಭಾವಿಸುವವರ ವರೆಗೆ ವಿವಿಧ ಜನರಿದ್ದರು.

ಈ ಪ್ರಾರಂಭದ ಜನರಾರೂ ೨೦ನೆಯ ಶತಮಾನದ ಶಿಕ್ಷಣದ ಮೇಲೆ ಜಾನ್ ಡ್ಯೂಯಿ ಅವರಿಗಿಂತ ಹೆಚ್ಚು ಪ್ರಭಾವ ಬೀರಲಿಲ್ಲ. ಮಕ್ಕಳ ಶಿಕ್ಷಣದ ಬಗ್ಗೆ ಅವರ ವಿವರಣೆಯು "ಪ್ರಗತಿಪರ ಶಿಕ್ಷಣ" ಎಂದು ಪ್ರಸಿದ್ಧವಾಯಿತು. ಜಾನ್ ಡ್ಯೂಯಿ ಅವರೂ ಸಹ ಸಾಮಾಜಿಕ ಸುಧಾರಣೆಯನ್ನು ಬಯಸಿದರು. ಆದರೆ, ಅವರ ದೃಷ್ಟಿಯಲ್ಲಿ ಶಾಲೆಗಳ ಪಾತ್ರವು ತಮ್ಮದೇ ಆದಂಥ ನಿರ್ಧಾರಗಳನ್ನು ಕೈಗೊಳ್ಳಬಲ್ಲಂಥ ವಿಮರ್ಶಾತ್ಮಕ ವೈಚಾರಿಕರನ್ನು ತಯಾರು ಮಾಡುವುದು. ಸ್ವೇಚ್ಛಾಚಾರದ ವಿರುದ್ಧ ಅವರು ಎಚ್ಚರಿಸಿದರು. ಸ್ವಾತಂತ್ರ್ಯ ಹಾಗೂ ಹೊಣೆಗಾರಿಕೆಗಳು ಪರಸ್ಪರ ವಿರುದ್ಧವಾದುವಲ್ಲ, ಅವು ಪರಸ್ಪರ ಪೂರಕವಾದುವು ಎಂದು ಅವರು ಹೇಳಿದರು.

೧೯೪೦ರ ದಶಕದಲ್ಲಿ ಅಮೆರಿಕದ ಶಾಲೆಗಳಲ್ಲಿ ಪ್ರಗತಿಪರ ಚಳವಳಿಯಲ್ಲಿ ಅನೇಕ ವಿಭಿನ್ನತೆಗಳು ಕಂಡುಬಂದವು. ಇದರ ವಿರೋಧಿಗಳು, ಶಾಲೆಗಳು ಮಕ್ಕಳ ಬೆಳವಣಿಗೆಗೆ ವಿಪರೀತ ಮಹತ್ವ ಕೊಡುತ್ತಿದ್ದು ಶೈಕ್ಷಣಿಕ ವಿಷಯಗಳನ್ನು ಕಡೆಗಣಿಸಲಾಗುತ್ತಿದೆ ಎಂದು ದೂರಿದರು. ೧೯೫೦ರ ದಶಕದ ಕೊನೆಯಲ್ಲಿ ಹಾಗೂ ೧೯೬೦ರ ದಶಕದ ಪ್ರಾರಂಭದಲ್ಲಿ ರಾಷ್ಟ್ರವು ಗಗನಯುಗವನ್ನು ಪ್ರವೇಶಿಸಿದಂತೆ ಈ ಟೀಕೆಗೆ ಬೆಂಬಲ ದೊರೆಯಿತು. ಶಾಲೆಗಳ ಮೊಗಸಾಲೆಗಳು, ತರಗತಿ ಕೋಣೆಗಳು ಮತ್ತು ಕ್ರೀಡಾ ಮೈದಾನಗಳು ಸಾಮಾಜಿಕ ಸುಧಾರಣೆ, ನಗರ ಸಮಸ್ಯೆಗಳು, ಅಲ್ಪಸಂಖ್ಯಾತರ ಹಾಗೂ ಬಡತನದ ಸಮಸ್ಯೆಗಳ ಬಗೆಗೆ ಚರ್ಚೆಯ ವೇದಿಕೆಗಳಾದವು.

ಇಂದು ಎರಡು ಮುಖ್ಯ ವಿಷಯಗಳ ಸುತ್ತ ಚರ್ಚೆಗಳು ಕೇಂದ್ರೀಕೃತವಾಗಿವೆ. ೧೯೭೦ರ ದಶಕದಲ್ಲಿ ಉತ್ತಮ ಸಾರ್ವತ್ರಿಕ ಶಿಕ್ಷಣಕ್ಕೆ ಅಗತ್ಯವಾದ ಬದಲಾವಣೆಗಳು ಪ್ರಸಕ್ತ ಶಾಲಾ ವ್ಯವಸ್ಥೆಯಲ್ಲಿ ಸಾಧ್ಯವಾಗುವುವೇ? ಶಾಲೆ ವಾಸ್ತವವಾಗಿ ಎಷ್ಟು ವ್ಯತ್ಯಾಸ ಉಂಟುಮಾಡಬಲ್ಲುದು?

ಹೆಚ್ಚು ಸಂಪ್ರದಾಯವಾದಿಗಳ ದೃಷ್ಟಿಯಲ್ಲಿ ಎಲಿಮೆಂಟರಿ ಮತ್ತು ಸೆಕೆಂಡರಿ ಶಿಕ್ಷಣ ವ್ಯವಸ್ಥೆಗಳು ಮಕ್ಕಳ ಬೆಳವಣಿಗೆಗೆ ಬಹು ಮುಖ್ಯವಾದುವು, ಮತ್ತು ಉತ್ತಮ ಶಿಕ್ಷಣ ಎಂದರೆ ಮಗುವಿನ ಹಿನ್ನೆಲೆ ಏನೇ ಆಗಿರಲಿ ಶಿಕ್ಷಣವನ್ನೊದಗಿಸುವುದು. ಇತರರು, ನಮ್ಮ ತ್ವರಿತ ತಾಂತ್ರಿಕ ಹಾಗೂ ಸಾಮಾಜಿಕ ಬದಲಾವಣೆಯ ಯುಗದಲ್ಲಿ ಶಾಲೆ ಮತ್ತು ಸಮಾಜದ ನಡುವೆ ಹೆಚ್ಚು ನಿಕಟ ಸಂಬಂಧಗಳಿರಬೇಕು, ವೈಯಕ್ತಿಕ ಜ್ಞಾನಾರ್ಜನೆಗೆ ವಿಪುಲವಾದ ಅವಕಾಶಗಳಿರಬೇಕು ಎಂದು ಅಷ್ಟೇ ಖಂಡಿತವಾಗಿ ಪ್ರತಿಪಾದಿಸಿದರು. ಮಕ್ಕಳನ್ನು—ಎಲ್ಲ ಮಕ್ಕಳನ್ನು-ಜೀವನಕ್ಕೆ ಹಾಗೂ ಇನ್ನಷ್ಟು ವಿದ್ಯಾರ್ಜನೆಗೆ ಅಣಿಗೊಳಿಸಬೇಕು ಎಂದು ಅವರು ಇಚ್ಛಿಸುತ್ತಾರೆ.

ಈ ಎರಡು ವೈಪರೀತ್ಯಗಳು ಆಚರಣೆಯಲ್ಲಿ ಪರಸ್ಪರ ಅಷ್ಟು ದೂರವಾಗಿಲ್ಲ, ಮೂಲಭೂತ ಶಿಕ್ಷಣವನ್ನು ಒದಗಿಸುವುದರಲ್ಲೇ ಶಾಲೆಗಳು ಮುಖ್ಯವಾಗಿ ನಿರತವಾಗಿದ್ದರೂ ಸಹ ಒಂದಲ್ಲ ಒಂದು ರೀತಿಯಲ್ಲಿ 'ಜೀವನದ ಬಗ್ಗೆ ತರಬೇತಿ"ಯು ಶಾಲಾ ವ್ಯವಸ್ಥೆಯಲ್ಲಿ ಅಂತರ್ಗತವಾಗಿರುವುದು. ಜಾನ್ ಹಾಪ್ಕಿನ್ಸ್ ವಿಶ್ವವಿದ್ಯಾನಿಲಯದಲ್ಲಿ ಸಾಮಾಜಿಕ ಸಂಬಂಧಗಳ ಪ್ರಾಧ್ಯಾಪಕರಾಗಿರುವ ಜೇಮ್ಸ್ ಎಸ್. ಕೋಲ್ಮನ್ ಅವರು ನಡೆಸಿದ ಒಂದು ಸಮೀಕ್ಷೆಯು ಈ ಬಗ್ಗೆ ವಿವಾದಗಳಿಗೆ ಇನ್ನಷ್ಟು ಪ್ರಚೋದನೆ ನೀಡಿತು. ಅಮೆರಿಕದ ಶಿಕ್ಷಣ ಕಚೇರಿ ವ್ಯವಸ್ಥೆಗೊಳಿಸಿದ ಈ ಸಮೀಕ್ಷೆ ಹೀಗೆ ಹೇಳಿದೆ: "ಎಲ್ಲ ಅಂಶಗಳನ್ನೂ ಪರಿಶೀಲಿಸಿದರೆ. ಶಾಲೆಯಲ್ಲಾಗಲೀ ಹೊರಗಾಗಲಿ ಒಂದು ಮಗುವಿನ ಕಾರ್ಯ ನಿರ್ವಹಣೆಯಲ್ಲಿ ಅತಿ ಮುಖ್ಯವಾದ ಅಂಶವೆಂದರೆ ಅವನ ಕುಟುಂಬದ ಶೈಕ್ಷಣಿಕ ಹಿನ್ನೆಲೆ. ಎರಡನೇ ಅತಿ ಮುಖ್ಯ ಅಂಶ ಶಾಲೆಯಲ್ಲಿರುವ ಮಗುವಿನ ಶೈಕ್ಷಣಿಕ ಹಿನ್ನೆಲೆ; ಸಾಮಾಜಿಕ-ವರ್ಗೀಯ ಹಿನ್ನೆಲೆ".

ಶಿಕ್ಷಣ ತಜ್ಞರು ಕೋಲ್ಮನ್ ಅವರ ವರದಿಯನ್ನು ವಿಶ್ಲೇಷಿಸಿದಂತೆ ಮತ್ತು ಪುನರ್‌ವಿಶ್ಲೇಷಿಸಿದಂತೆ, ಶಾಲೆಗಳು ವಾಸ್ತವವಾಗಿ ಸಾಮಾಜಿಕ ಸಮಸ್ಯೆಗಳನ್ನು ಎದುರಿಸುವಲ್ಲಿ ಗಮನಾರ್ಹ ಶಕ್ತಿಗಳಾಗಿವೆಯೋ ಎಂದು ಕೆಲವರು ಪ್ರಶ್ನಿಸಲಾರಂಭಿಸಿದರು. ಕಳೆದ ದಶಕದ ಶಾಲಾ ಸುಧಾರಣೆಗಳು ತಪ್ಪು ರೀತಿಯಲ್ಲಿ ನಿರ್ದೇಶಿಸಲ್ಪಟ್ಟಿವೆ, ಮತ್ತು ಮಕ್ಕಳಿಗೆ ಸಮಾನ ಅವಕಾಶಗಳನ್ನು ಒದಗಿಸುವುದರಿಂದ ಮಾತ್ರವೇ ಸಮಾನ ಫಲಿತಾಂಶಗಳನ್ನು ಪಡೆಯುವುದು ಸಾಧ್ಯವಿಲ್ಲ ಎಂದು ಒಂದು ಅಧ್ಯಯನ ಹೇಳಿದೆ. ಈ ಅಧ್ಯಯನದ ಬಗ್ಗೆ ತೀವ್ರ ವಿವಾದಗಳು ನಡೆದವು. ಕೆಲವರು ಅದನ್ನು ವಾಸ್ತವಿಕ ವಿಮರ್ಶೆ ಎಂದು ಬೆಂಬಲಿಸಿದರೆ ಮತ್ತೆ ಕೆಲವರು ಅದು "ನಿರಾಶಾವಾದಿಗಳ ಅಭಿಪ್ರಾಯ", ಸಾಮಾಜಿಕ ಹಾಗೂ ಆರ್ಥಿಕ ಮುನ್ನಡೆಯ—ಮುಖ್ಯವಾಗಿ ಪರಿಣಾಮಕಾರೀ ಶಿಕ್ಷಣದ-ಎಲ್ಲ ಮಾರ್ಗಗಳೂ ಬಡವರಿಗೆ ಅಥವಾ ಅಲ್ಪಸಂಖ್ಯಾತರಿಗೆ ಮುಚ್ಚಲ್ಪಟ್ಟಿದ್ದು ಅವರನ್ನು ಬೌದ್ಧಿಕವಾಗಿ ಹಾಗೂ ವೈಯಕ್ತಿಕವಾಗಿ ಅನರ್ಹರನ್ನು ಮಾಡುತ್ತದೆ ಎಂದು ಹೇಳಿದರು,

ಶಾಲೆಗಳ ಹೊರಗೆ ವಿವಾದಗಳು ನಡೆಯುತ್ತಿದ್ದಂತೆಯೇ ಶಾಲೆಗಳ ಒಳಗೆ ನಿಶ್ಶಬ್ದವಾಗಿ ಬದಲಾವಣೆಗಳು ಸಂಭವಿಸುತ್ತಿದ್ದವು. ಶಾಲೆಗಳು ಮಕ್ಕಳನ್ನು ಭವಿಷ್ಯದ ಜೀವನಕ್ಕೆ ಸಿದ್ಧಗೊಳಿಸಬೇಕು. ಮಗು ತನ್ನ ಜ್ಞಾನಾರ್ಜನೆಯ ಮುಖ್ಯ ಕರ್ತೃ. ಶಿಕ್ಷಕರು ಈ ಪ್ರತಿಕ್ರಿಯೆಯಲ್ಲಿ ಕೇವಲ ಮಾರ್ಗದರ್ಶಕರಾಗಿರುವರು. ಮಗು ತನಗೆ ಬೇಕಾದ ವಿಷಯ ಹಾಗೂ ವಸ್ತುಗಳನ್ನು ಆಯ್ಕೆಮಾಡುವುದು-ಅವನ ಶಿಕ್ಷಣ ಸ್ವಯಂ ನಿರ್ದೇಶಿತ ಮತ್ತು ಸ್ವಯಂ ವ್ಯವಸ್ಥಿತವಾಗುವುದು. ಮಗು ಅದಕ್ಕೆ ಹೊಣೆಗಾರಿಕೆಯನ್ನು ವಹಿಸಿಕೊಳ್ಳಲು ಕಲಿಯುವನು. ಶಿಕ್ಷಕ ಮಾರ್ಗದರ್ಶಿ ಹಾಗೂ ಸಹಾಯಕನಾಗುವನು.

ಅಮೆರಿಕದಲ್ಲಿ ಕೆಲವು ಶಾಲೆಗಳು ತಮ್ಮದೇ ಆದ ಪಠ್ಯ ವಿಷಯಗಳನ್ನು ಸಿದ್ಧಪಡಿಸುವುವು. ಆದರೆ ಹೆಚ್ಚಿನವು ವಿಶ್ವವಿದ್ಯಾನಿಲಯಗಳು, ಪಠ್ಯ ವಿಷಯಗಳನ್ನಭಿವೃದ್ಧಿಗೊಳಿಸುವ ಕೇಂದ್ರಗಳು ಹಾಗೂ ಖಾಸಗಿ ಕಂಪೆನಿಗಳು ತಯಾರಿಸಿದ ಪಠ್ಯ ವಿಷಯಗಳನ್ನು ಬಳಸುವುವು. ಹೆಚ್ಚು ವ್ಯಾಪಕ ಬಳಕೆಯಲ್ಲಿರುವುದು ಐಪಿಐ (ಇಂಡಿವಿಜುಯಲೀ ಪ್ರಿಸ್‌ಕ್ರೈಬ್ಡ್ ಇನ್‌ಸ್ಟ್ರಕ್ಷನ್). ಇದು ಈಗ ಓದುವಿಕೆ, ಗಣಿತ ಹಾಗೂ ವಿಜ್ಞಾನ ವಿಷಯಗಳಲ್ಲಿ ಲಭ್ಯವಿರುವುದು. ಮತ್ತು ಅನೇಕ ಶಾಲೆಗಳು ಪಿಎಲ್‌ಎಎನ್ (ಪ್ರೋಗ್ರಾಂ ಫೊರ್ ಲರ್ನಿಂಗ್ ಇನ್ ಎಕೊರ್ಡೆನ್ಸ್ ವಿತ್ ನೀಡ್ಸ್) ಎಂಬ ವ್ಯವಸ್ಥೆಯನ್ನು ಬಳಸುವುವು. ಇದು ವಿದ್ಯಾರ್ಥಿಗಳಿಗೆ ಅಗತ್ಯವಿರುವ ವಿಷಯಗಳನ್ನು ಕಲಿಯುವ ವಿಧಾನಗಳ ಆಯ್ಕೆಯನ್ನು ಒದಗಿಸುವುದು. ಅಮೆರಿಕದಲ್ಲಿ ಅನೌಪಚಾರಿಕ ಶಿಕ್ಷಣವು ಮಗುವಿನ ಬೌದ್ಧಿಕ ಬೆಳವಣಿಗೆ ಹಾಗೂ ಬದಲಾಗುತ್ತಿರುವ ಪ್ರಪಂಚದಲ್ಲಿ ವಯಸ್ಕತೆಗೆ ಸಿದ್ಧತೆಯೂ ಸೇರಿದಂತೆ ನಿರ್ದಿಷ್ಟ ಗುರಿಗಳನ್ನು ಸಾಧಿಸುವ ಒಂದು ವ್ಯವಸ್ಥೆ.

ಆದರೂ ಅನೌಪಚಾರಿಕ ವಿಧಾನವು ಸಾರ್ವತ್ರಿಕವಾಗಿಲ್ಲ. ಅಮೆರಿಕದಲ್ಲಿ ಅನೇಕ ಸಮುದಾಯಗಳು ಸಾಂಪ್ರದಾಯಿಕ ಕ್ಲಾಸ್‌ರೂಂ ಪದ್ಧತಿಯನ್ನು ಉಳಿಸಿಕೊಂಡಿವೆ. ಮತ್ತೆ ಕೆಲವು ಹೈಸ್ಕೂಲಿನಿಂದ ಹೊರಗುಳಿದವರಿಗೆ ಅವಕಾಶ ಕಲ್ಪಿಸುವಂಥ ವಿಶೇಷ ಪರ್ಯಾಯ ಸವಲತ್ತುಗಳನ್ನು ಒದಗಿಸುತ್ತವೆ. ಅಲ್ಲದೆ "ಗೋಡೆಗಳಿಲ್ಲದ ಶಾಲೆಗಳು" ಇವೆ. ಇವುಗಳಲ್ಲಿ ಸೆಕೆಂಡರಿ ಮಟ್ಟದ ವಿದ್ಯಾರ್ಥಿಗಳು ಯಾವುದೇ ಶಾಲಾ ಕಟ್ಟಡಕ್ಕೆ ಬದಲಾಗಿ ಸಮುದಾಯದ ಮ್ಯೂಸಿಯಂಗಳಲ್ಲಿ, ಆಸ್ಪತ್ರೆಗಳಲ್ಲಿ ಮತ್ತು ಉದ್ಯಮ ಸಂಸ್ಥೆಗಳಲ್ಲಿ ಕೆಲಸಮಾಡುವರು ಹಾಗೂ ಅಧ್ಯಯನಮಾಡುವರು. ಅನೇಕ ಸೆಕೆಂಡರಿ ಶಾಲೆಗಳಲ್ಲಿ ಕೆಲಸದ ಪ್ರಪಂಚವು ಶಾಲಾ ವ್ಯವಸ್ಥೆಯ ಒಂದಂಗವಾಗಿರುತ್ತದೆ. ವಿದ್ಯಾರ್ಥಿಗಳು ವಾರದ ಕೆಲವು ದಿನಗಳನ್ನು ತರಗತಿಯಲ್ಲಿ ಕಳೆಯುವರು, ಉಳಿದ ದಿನಗಳಲ್ಲಿ ಸಮುದಾಯಗಳಲ್ಲಿ ಕೆಲಸಮಾಡುವರು. ಉದ್ಯೋಗದಲ್ಲಿ ಅವರು ಏನನ್ನು ಕಲಿಯುವರೋ ಅದು ಅವರ ತರಗತಿಯೊಂದಿಗೆ ನಿಕಟ ಸಂಬಂಧಹೊಂದಿರುವುದು.

ಅಮೆರಿಕದಲ್ಲಿಂದು ಹೆಚ್ಚು ಮಾನವೀಕೃತ ವಿದ್ಯಾರ್ಜನೆಯತ್ತ ಒಂದು ಚಳವಳಿಯನ್ನು ಕಾಣಬಹುದು—ಅದು ಪ್ರತಿಯೊಬ್ಬ ಯುವಕನಿಗೂ, ಅವನ ಅಗತ್ಯಗಳು ಹಾಗೂ ಹಿನ್ನೆಲೆ ಏನೇ ಇರಲಿ, ಮಾನವ ಜೀವಿಯಾಗಿ ತನ್ನ ಶಕ್ಯತೆಯನ್ನು ಕಂಡುಕೊಳ್ಳುವ ಬಗೆಗೆ ಸಹಾಯಮಾಡುವುದರತ್ತ ನಿರ್ದೇಶಿತವಾದುದು.

——

ದೀಪಾವಳಿ 'ಬಲಿದಾನದ' ಪುಣ್ಯಸ್ಮರಣೆ:

ಮಂಗಳೂರಿನಲ್ಲಿ ಆರ್ಯಸಮಾಜದ ಸೃಷ್ಟಿ—ದೃಷ್ಟಿ

—ವಿ. ಬಿ. ಹೊಸಮನೆ.

ಭಾರತವು ಪುಣ್ಯಭೂಮಿ, ಅಧ್ಯಾತ್ಮದ ತವರೂರು—ಎಂದು ವಿದೇಶೀಯರೆನ್ನುವುದಕ್ಕೊಂದು ಬಲವಾದ ಕಾರಣ ಇಲ್ಲಿನ ಋಷಿಪರಂಪರೆ. ವೇದ-ಉಪನಿಷತ್ತುಗಳ-ಪುರಾಣಗಳ ಕಾಲದಲ್ಲಿ ಈ ಋಷಿಪುಂಗವರು ಹೇಗೆ ಬಾಳಿದ್ದರೆಂಬುದನ್ನು ಪುರಾಣಗಳ ಇತಿಹಾಸದಿಂದ ತಿಳಿಯಬಹುದಾಗಿದ್ದರೆ ಪ್ರತ್ಯಕ್ಷ ಇತಿಹಾಸವೂ ಈ ಭೂಮಿಯ ಪುಣ್ಯವಿಶೇಷ. ಆಧುನಿಕ ಭಾರತದ ಕಲ್ಪನೆಗೆ-ಭುವನರಚನಾ ಚಾತುರ್ಯಕ್ಕೆ-ಅಂತಹ ಋಷಿಗಳಾಗಿ ರಾಜಾರಾಮಮೋಹನ ರಾಯ್ ಕಟ್ಟಿದ ಬ್ರಹ್ಮಸಮಾಜ, ಸ್ವಾಮಿ ದಯಾನಂದ ಸರಸ್ವತಿ ಅವರು ಸ್ಥಾಪಿಸಿದ ಆರ್ಯಸಮಾಜ, ರಾಮಕೃಷ್ಣಪರಮಹಂಸರ ಭಕ್ತಿಯ ಪವಾಡ, ಸ್ವಾಮಿ ವಿವೇಕಾನಂದರು ಬೆಳೆಸಿದ ರಾಮಕೃಷ್ಣ ಮಿಷನ್, ಮಹರ್ಷಿ ಅರವಿಂದ ಘೋಷರು ಪಾಂಡಿಚೇರಿಯಲ್ಲಿ ಸ್ಥಾಪಿಸಿದ ಅರವಿಂದಾಶ್ರಮ. ಸಾಹಿತ್ಯದಲ್ಲಿ ವಿಶ್ವಸೌಂದರ್ಯವನ್ನು ಕಾಣಬಯಸಿದ ಕವಿ ರವೀಂದ್ರನಾಥ ಠಾಕೂರರ 'ವಿಶ್ವಭಾರತಿ', ಸಮಾಜ ನಿರ್ಮಾಣದಲ್ಲಿ ಸೌಂದರ್ಯವನ್ನು ಕಂಡು ತನ್ಮೂಲಕ ಭವ್ಯ ಭಾರತದ ಕಲ್ಪನೆಯನ್ನು ಬೆಳೆಸಿಕೊಂಡ ರಾಷ್ಟ್ರಪಿತ ಮಹಾತ್ಮಾ ಗಾಂಧಿಯವರು ನಡೆಸಿದ ಆಶ್ರಮಜೀವನ—ಇವರೆಲ್ಲರ ಪ್ರತ್ಯಕ್ಷ ನಿದರ್ಶನ ನಮ್ಮಲ್ಲಿದೆ. ಆಧುನಿಕ ಭಾರತದ ಈ ಸಪ್ತಋಷಿಗಳ ತಪಸ್ಸಿನ ಮಹಿಮೆ ಅಪಾರವಾದುದು. ಸ್ವಾಮಿ ಕರಪಾತ್ರಿಜೀ, ಸ್ವಾಮಿ ಚಿನ್ಮಯಾನಂದಜೀ, ಹೃಷಿಕೇಶದಲ್ಲಿರುವ ಯೋಗಾಶ್ರಮದ ಯೋಗಿಗಳು—ಹೀಗೆ ಹಲವಾರು ಮಂದಿ ಅಧ್ಯಾತ್ಮಸಾಧಕರು ಇಂದಿಗೂ ಇದ್ದಾರೆ. ರಮಣಮಹರ್ಷಿಗಳು, ನಿತ್ಯಾನಂದ ಸ್ವಾಮಿಗಳು ಈ ಪರಂಪರೆಯಲ್ಲಿ ಭುವನರಚನಾ ಕಾರ್ಯಕ್ಕೆ ತಮ್ಮನ್ನು ತಾವು ಅರ್ಪಿಸಿಕೊಂಡವರು. ಪುಟಪರ್ತಿಯಲ್ಲಿರುವ ಸ್ವಾಮಿ ಸತ್ಯಸಾಯಿಬಾಬ ಅವರಾಗಲಿ ಅವರ ಮೊದಲಿನ ಶಿರಡಿ ಸಾಯಿಬಾಬ ಅವರಾಗಲಿ ಸಾಯಿ ಪಂಥವನ್ನೆ ಬೆಳೆಸಿಕೊಂಡು ಬಂದವರು. ಇವರಲ್ಲದೆ, ಶಾಂಕರ. ರಾಮಾನುಜ, ಮಾಧ್ವ, ವೀರಶೈವ, ಜೈನ, ಬೌದ್ಧ ಪಂಥದವರೂ ನಾಥಪಂಥ-ಚೈತನ್ಯಪಂಥ ಮೊದಲಾದ ಅನೇಕ ಪಂಥೀಯ ಪರಂಪರೆಯೂ ಬೆಳೆದಿದೆ. ವಿಶಾಲ ದೇಶ—ವಿಲಕ್ಷಣ ಜನಾಂಗ—ವಿಶಿಷ್ಟ ಜನಜೀವನ—ವಿವಿಧ ಮತ ಪಂಥಗಳ ಏರಾಟ—ಹಾರಾಟ-ಬೀಳಾಟಗಳು ಇಲ್ಲಿ ನಡೆದಿವೆ. ಆದರೂ ನಮ್ಮ ನಾಡಿನ ಜನರಿಗೆ ಅಧ್ಯಾತ್ಮದ ತೃಷೆ ತಣಿಯಲಿಲ್ಲ. ವಿದೇಶೀಯರೂ ವಿಧರ್ಮೀಯರೂ ಇಲ್ಲಿಗೆ ಬಂದು ಧರ್ಮಪ್ರಚಾರ ಮಾಡಿದಾಗಲೂ ಅದನ್ನು ಸ್ವಾಗತಿಸಿ ಬೆಳೆಸಿದ್ದಾರೆ. ಆದುದರಿಂದಲೇ ವಿದೇಶೀಯರು ಅಧ್ಯಾತ್ಮದ ತವರೂರು ಎಂದು ಭಾರತದ ಕಡೆಗೆ ಆಕರ್ಷಿತರಾಗಿದ್ದಾರೆ. ಈ ಆಕರ್ಷಣೆಯ ಮೂಲ ರಹಸ್ಯವೇನೆಂಬುದನ್ನು ವಿವೇಚಿಸಿದಾಗ ನಮ್ಮ ಕಣ್ಣಮುಂದೆ ನಿಲ್ಲುವುದು 'ವೈದಿಕ ಧರ್ಮ' ಒಂದು ಮಾತ್ರ.

ವೈದಿಕ ಧರ್ಮ ಎಂದರೆ ವೇದದಲ್ಲಿ ಉಪದೇಶಿಸಲ್ಪಟ್ಟ ಆಚರಣೆಯ ಧರ್ಮ. ಆರ್ಯರಿಂದ ಬೆಳೆದು ಬಂದ ಧರ್ಮ. ವೇದವು ಅತಿ ಮಾನುಷ-ಮಾನವ ಕೃತವಲ್ಲ-ಎಂದರೆ ವಿಜ್ಞಾನ ಜಗತ್ತಿನವರು ಒಪ್ಪಲಾರರು. (ಆದರೂ ಒಪ್ಪಲೇಬೇಕಾಗುತ್ತದೆ.) ಅವರು ಒಪ್ಪದಿದ್ದರೂ ಅವರ ಆಚರಣೆಗಳಲ್ಲೆಲ್ಲ ಈ ವೈದಿಕ ಧರ್ಮವು ವ್ಯಾಪಿಸಿಕೊಂಡಿದೆ. ಗಂಧದ ಕೊರಡನ್ನು ತೇದಿದಷ್ಟೂ ಪರಿಮಳಿಸುವುದು ಅದರ ಲಕ್ಷಣ ಹೇಗೋ ಹಾಗೆಯೆ, ವೈದಿಕಧರ್ಮದ ಬೇರು—ಕಾಂಡ—ಪತ್ರಗಳಿಂದ ಹೊರಟ ಧರ್ಮಸುಗಂಧ ವಿಶ್ವವ್ಯಾಪಿ. ವಿಧರ್ಮೀಯ ಬಂಧುಗಳೂ ಈ ಕಾರಣದಿಂದಲೇ ವಿದೇಶಗಳಿಂದ ಬಂದು ಇಲ್ಲಿ ತಮ್ಮ ಧರ್ಮಪ್ರಚಾರ ಕಾರ್ಯದಲ್ಲಿ ಸಫಲರಾದರು. ವೈದಿಕಧರ್ಮ ಅದಕ್ಕೆಲ್ಲ ಆಶ್ರಯ ನೀಡಿತೆ? ಅಥವಾ ವೈದಿಕಧರ್ಮದ ಮೇಲೆ ವಿಧರ್ಮೀಯ ಬಂಧುಗಳ ಧಾಳಿ ನಡೆಸಿದರೆ? ಎಂಬುದು ವಿಮರ್ಶಕರ ವಿಚಾರಕ್ಕೆ ಆಹಾರವಾಗಿ ಉಳಿದಿದೆ.

ಮೇಲೆ ಹೇಳಿದ ಆಧುನಿಕ ಭಾರತದ ದ್ರಷ್ಟಾರರಾದ ಸಪ್ತಋಷಿಗಳು, ಭವ್ಯ ಭಾರತದ ಶಿಲ್ಪಿಗಳು. ಕಳೆದವರ್ಷ ನಡೆದ ಆರ್ಯಸಮಾಜದ ಶತಮಾನೋತ್ಸವವು, ಅದರ ಹಿಂದೆ ನಡೆದ ಅರವಿಂದ ಶತಮಾನೋತ್ಸವ, ಅದಕ್ಕೂ ಹಿಂದೆ ನಡೆದ ಗಾಂಧಿ ಶತಮಾನೋತ್ಸವಗಳಿಗಿಂತಲೂ ವಿಶೇಷವಾದುದು. ಸ್ವಾಮಿ ದಯಾನಂದ ಸರಸ್ವತಿ ಅವರು ಸ್ಥಾಪಿಸಿದ ಆರ್ಯಸಮಾಜದ ಶತಮಾನೋತ್ಸವವನ್ನು ದೇಶದಾದ್ಯಂತವಷ್ಟೇ ಅಲ್ಲ, ವಿದೇಶಗಳಲ್ಲಿಯೂ ಆಚರಿಸಿದರು. ಇದರ ಸ್ಮರಣೆ ಶಾಶ್ವತ ನಿಲ್ಲುವಂತಹ, ಆರ್ಯಧರ್ಮದ-ವೈದಿಕಧರ್ಮದ ಅಮೂಲ್ಯ ಕೃತಿಗಳನ್ನು ಮುದ್ರಿಸಿ ಮಿತಬೆಲೆಗೆ ಮಾರಾಟಮಾಡಿದರು. ವೇದವೆಂಬುದು ಮುಂದುವರಿದ ಜನಾಂಗದ ಸೊತ್ತೆಂದು ತಿಳಿದುಕೊಂಡಿದ್ದ ಬ್ರಾಹ್ಮಣವರ್ಗ ತಮ್ಮ ಸಂಕುಚಿತ ಸ್ವಭಾವದಿಂದಾದ ಅಪಾರ ವೈದಿಕ ಸಾಹಿತ್ಯದ ನಷ್ಟವನ್ನು ಮತ್ತೆ ಲೋಕಕ್ಕೆ ಒದಗಿಸುವ ಪುಣ್ಯಕಾರ್ಯವನ್ನು ಮಾಡಿದರು. ಇಂತಹ ಕಾರ್ಯೋದ್ದೇಶದ ಸಲುವಾಗಿಯೇ ಆರ್ಯಸಮಾಜವು ನಿರ್ಮಾಣವಾಯಿತು.

೧೮೭೫ರಷ್ಟು ಪೂರ್ವದಲ್ಲಿ ಬೊಂಬಾಯಿಯಲ್ಲಿ ಆರ್ಯಸಮಾಜವು ಸ್ಥಾಪನೆಗೊಂಡಿತಾದರೆ ಅದರ ಶಾಖೆ ಮತ್ತೊಂದು ಮೂಡಬೇಕಾದರೆ ನಾಲ್ಕೈದು ದಶಕಗಳೇ ಬೇಕಾಯಿತು. ಮಂಗಳೂರಿನಲ್ಲಿ ೧೯೧೯ರಲ್ಲಿ ಆರ್ಯಸಮಾಜದ ಒಂದು ಶಾಖೆ ಸ್ಥಾಪನೆಯಾಯಿತು. ೧೯೨೦ರಲ್ಲಿ ಸಾರ್ವದೇಶಿಕ ಆರ್ಯ ಪ್ರತಿನಿಧಿಗಳಿಂದ ಕೂಡಿದ ಸಮ್ಮೇಳನವೂ ಮಂಗಳೂರಲ್ಲಿ ನಡೆಯಿತು. ಪಂಡಿತ ಠಾಕೂರ್ ಖಾನ್ ಚಂದ್ರವರ್ಮ ಲಾಹೋರ್ ಅವರು ಇಲ್ಲಿಗೆ ಮೊದಲ ಪ್ರಚಾರಕರಾಗಿ ಬಂದರೆಂದೂ ಅವರ ಪ್ರತಿನಿಧಿಗಳಾಗಿ ಆಚಾರ್ಯ ಧರ್ಮದೇವ್ ವಿದ್ಯಾಮಾರ್ತಾಂಡ (ಪಂಡಿತ ಧರ್ಮದೇವ ವಿದ್ಯಾಲಂಕಾರ ಎಂದು ಅವರನ್ನು ಸಂಬೋಧಿಸುತ್ತಿದ್ದರೆಂದು ನಮ್ಮ ನೆನಹು. ಸಂ।ಪ್ರಭಾತ) ಅವರು ಇಲ್ಲಿ ಕಾರ್ಯಕ್ರಮ ನಡೆಸಿಕೊಂಡು ಬಂದರು. ಸುಮಾರು ೩೫ ವರ್ಷಗಳ ಕಾಲ ಪ್ರಾಚೀನ ಗುರುಕುಲ ಪದ್ಧತಿಯಲ್ಲಿ, ಒಂದು ವಿಧದ ಋಷಿ ಆಶ್ರಮದಂತೆ ವೈದಿಕ ಹವನಾದಿಗಳೆಲ್ಲ ನಡೆಯುತ್ತ ಬರುತ್ತಿದ್ದು, ಇದರ ಕಾರ್ಯನಿರ್ವಹಣೆಗಾಗಿ ಒಂದು ಸಮಿತಿಯೂ ಇತ್ತು. ೨೦೦ಕ್ಕೂ ಮಿಕ್ಕಿ ಸದಸ್ಯರಿದ್ದು ಕಾಂಗ್ರೆಸ್ಸಿನ ಸ್ವಾತಂತ್ರ್ಯ ಚಳವಳದಲ್ಲಿಯೂ ಸಮಾಜ ಸಂಘಟನೆಯಲ್ಲಿಯೂ ಜನಜಾಗೃತಿಗೊಳಿಸುವುದರಲ್ಲಿ ಇದರ ಪಾತ್ರ ಸ್ಮರಣೀಯವಾಗಿತ್ತು.

(೫ನೇ ಪುಟಕ್ಕೆ ಮುಂದುವರಿದಿದೆ)

ಅರ್ಧಶತಮಾನದ ಹಿಂದಿನ ನೆನಹು

ಆರ್ಯಸಮಾಜ ಸ್ಥಾಪಕರಾದ ಸ್ವಾಮಿ ದಯಾನಂದ ಸರಸ್ವತಿಯವರ ಕುರಿತು "ಪ್ರಭಾತ"ದಲ್ಲಿ ಈ ಮೊದಲು, ಲೇಖನಗಳು ಪ್ರಕಟವಾಗಿವೆ.

ಶ್ರೀ। ವಿ. ಬಿ. ಹೊಸಮನೆಯವರು, ಮಂಗಳೂರಿನ ಆರ್ಯಸಮಾಜ ಶಾಖೆಯ ಸ್ಥಾಪನೆ ಮತ್ತು ಸ್ಥಾಪನಾಕಾಲದ ಪುರೋಗಾಮಿ ಕಾರ್ಯಕರ್ತರ ಕುರಿತು ಸಂಕ್ಷೇಪವಾಗಿ ಈ ಲೇಖನದಲ್ಲಿ ಉಲ್ಲೇಖಿಸಿದ್ದಾರೆ. ಆಚಾರ್ಯ ಧರ್ಮದೇವ ವಿದ್ಯಾಲಂಕಾರರ ಹೆಸರನ್ನೂ ನೆನಪಿಸಿದ್ದಾರೆ. ೧೯೨೩-೨೪ರಲ್ಲಿ, ಶ್ರೀ ಧರ್ಮದೇವರು ಈಗಿನ ನೆಹರೂ ಮೈದಾನಿನ ಪೂರ್ವದಿಕ್ಕಿನ ಸ್ಥಳದಲ್ಲಿ (ಈಗ ಉಪವನವಿರುವಲ್ಲಿ) (ಆ ಕಾಲದಲ್ಲಿ "ಕೇಂದ್ರ ಮೈದಾನು"), ಮಳೆಗಾಲದ ದಿನಗಳನ್ನು ಬಿಟ್ಟು ಇತರ ಋತುಗಳಲ್ಲಿ ವಾರಕ್ಕೆ ೩-೪ ಬಾರಿ, ಸಾಯಂಕಾಲ, ವೈದಿಕಧರ್ಮದ ಕುರಿತಾಗಿ, ಸ್ವಾಮಿ ದಯಾನಂದ ಸರಸ್ವತಿಯವರು ಬೋಧಿಸಿದ ತತ್ತ್ವಗಳ ವಿಷಯವಾಗಿ ಕನ್ನಡದಲ್ಲೇ ಭಾಷಣಮಾಡುತ್ತಿದ್ದುದನ್ನು ನಾನು ಅತ್ಯಾಸಕ್ತಿಯಿಂದ ಕೇಳುತ್ತಿದ್ದೆ. ಉತ್ತರ ಭಾರತದಿಂದ ಇಲ್ಲಿಗೆ ಬಂದು, ಭಾಷಣಮಾಡಲು ಅವಶ್ಯವಿರುವಷ್ಟು ಕನ್ನಡದ ಮೇಲೆ ಪ್ರಭುತ್ವವನ್ನು ಸಾಧಿಸಿ, ಅವರು ವಾಗಾಡಂಬರಕ್ಕಿಂತಲೂ ವಿಷಯನಿರೂಪಣೆಗೆ ಮುಖ್ಯವಾಗಿರುವ ಶಬ್ದಗಳನ್ನುಪಯೋಗಿಸಿ ಸರಳವಾಗಿ ಭಾಷಣಮಾಡುತ್ತಿದ್ದ ಆ ೫೦ ವರ್ಷಗಳ ಹಿಂದಿನ ಚಿತ್ರವು ನನ್ನಲ್ಲಿ ಅಚ್ಚಳಿಯದೆ ಉಳಿದಿದೆ. ವಿದ್ಯಾಲಂಕಾರರು ಅಕ್ಷಯಚೈತನ್ಯದ ನವಯುವಕರೂ, ಗೌರಾಂಗರೂ ಆಗಿದ್ದರು. ಅವರ ಭಾಷಣಗಳಲ್ಲಿ ಮೂರ್ತಿಪೂಜೆಯ ಖಂಡನೆಯು ಪ್ರಧಾನವಾಗಿ ಧ್ವನಿಸುತ್ತಿತ್ತು. ಅಲ್ಲಿಂದ ತುಸದೂರ ದಿ। ಎನ್. ಎಸ್. ಕಿಲ್ಲೆಯವರು (ಆಗ ಶ್ರೀ। ಕಿಲ್ಲೆಯವರಿಗೆ ಸುಮಾರು ೨೨ ವಯಸ್ಸಿರಬಹುದು; ಯಕ್ಷಗಾನಪ್ರೇಮಿಯಾಗಿದ್ದ ಅವರು ಯಕ್ಷಗಾನ ಕೂಟಗಳಲ್ಲಿ ಯುವಕರಾಗಿದ್ದಾಗಲೇ ಭಾಗವಹಿಸಿ ಶ್ರೋತೃಗಳ ಲಕ್ಷ್ಯ ಸೆಳೆದಿದ್ದರು; ಅವರ ವಾಗ್ವಿಭವವು ಆಗಲೇ ಸ್ಪಷ್ಟಗೊಂಡಿತ್ತು. ಆ ಕಾಲದಲ್ಲೇ ಅವರು ಖಾದಿಧಾರಿಗಳು; ಕೊಂಗ್ರೆಸ್ ಅನುಯಾಯಿಗಳಾಗಿದ್ದರು.)—ಮೂರ್ತಿಪೂಜೆಯನ್ನು ಸಮರ್ಥಿಸಿ ಭಾಷಣಕೊಡತೊಡಗಿದ್ದರು. ಇಬ್ಬರು ವಾಗ್ಮಿಗಳೂ ೬೦-೭೦ ಅಡಿ ದೂರದಲ್ಲಿ ನಿಂತು, ಏಕಕಾಲದಲ್ಲೆ ಭಾಷಣಮಾಡುತ್ತಿದ್ದರು; ಆದರೆ ಅವರು ಎದುರುಬದುರಾಗಿ ನಿಲ್ಲಲಿಲ್ಲ, ಅವರ ನಡುವೆ ವಾಗ್ಯುದ್ಧವೂ ನಡೆಯಲಿಲ್ಲ. ಶ್ರೋತೃಗಳು (ಒಟ್ಟು ೨೦೦-೩೦೦) ಕೆಲವು ನಿಮಿಷ ವಿದ್ಯಾಲಂಕಾರರನ್ನು ಕೇಳಿ, ಅಲ್ಲಿಂದ ಶ್ರೀ। ಕಿಲ್ಲೆಯವರ ಕಡೆಗೆ ಹೋಗಿ ಅಲ್ಲಿ ಕೆಲಹೊತ್ತು ಆಲಿಸಿ, ಪುನಹ ವಿದ್ಯಾಲಂಕಾರರಿದ್ದಲ್ಲಿಗೆ ಬಂದು........ಹೀಗೆ ಗಂಟೆ-ಎರಡು ಗಂಟೆಗಳ ವರೆಗೆ ಇಬ್ಬರ ವಾದಗಳನ್ನೂ ಕುತೂಹಲದಿಂದ ಕೇಳುತ್ತಿದ್ದರು. ಇದು ಮನೋರಂಜಕವೂ ಆಗಿತ್ತು, ಮನೋಜ್ಞವೂ ಆಗಿತ್ತು. ತಿಂಗಳುಗಟ್ಲೆ ಹೀಗೆ, ಇಬ್ಬರು ಭಾಷಣಕಾರರೂ ತಮ್ಮ ಉಪನ್ಯಾಸ ವಿಷಯವನ್ನು ಬರಿದುಮಾಡಿಕೊಳ್ಳಲಿಲ್ಲ (ಮುಗಿಸಲಿಲ್ಲ), ಹಾಗೆಯೇ ಪುನರುಕ್ತಿಗಳಿಂದಲೂ ಶ್ರೋತೃಗಳನ್ನು ದಣಿಸಲಿಲ್ಲ, ತಾವೂ ಆಯಾಸಗೊಳ್ಳಲಿಲ್ಲ.

ದಿ। ಬಿ. ಮೋಹನಪ್ಪ ತಿಂಗಳಾಯರು (ಜ್ಞಾನೋದಯ ಸಮಾಜದ ಸ್ಥಾಪಕರು) ಆರ್ಯಸಮಾಜದ ಕಾರ್ಯಕರ್ತರಾಗಿಯೂ, ಕೊಂಗ್ರೆಸ್ ಕಾರ್ಯಕರ್ತರಾಗಿಯೂ, ಪ್ರಚಾರಕರಾಗಿಯೂ ಸೇವೆಸಲ್ಲಿಸುತ್ತಿದ್ದರು. ಅಂದಿನ ಪುರೋಗಾಮಿಗಳಲ್ಲಿ ಶ್ರೀ। ಮೋಹನಪ್ಪ ತಿಂಗಳಾಯರೂ ಒಬ್ಬರು.

—ಕುಡ್ಪಿ ವಾಸುದೇವ ಶೆಣೈ.

“ಕ್ರೋಧೋ ಹನ್ತಾ ಮನುಷ್ಯಾಣಾಂ……..”

★

“ಕೋಪವು ಮನುಷ್ಯನನ್ನು ಕೊಂದು ಬಿಡುತ್ತದೆ……..”

ದ್ರೌಪದಿಗೆ ಯುಧಿಷ್ಠಿರನು ಕೋಪ ಮತ್ತು ಕ್ಷಮೆಯ ವಿಷಯವಾಗಿ ವಿವರಿಸುತ್ತಾನೆ.

ದ್ಯೂತದಲ್ಲಿ ಸೋತು, ಕೌರವರ ತುಂಬು ಸಭೆಯಲ್ಲಿ ವಸ್ತ್ರಾಪಹರಣದ ಅಪಮಾನವನ್ನೂ ಅನುಭವಿಸಿ, ಕೊನೆಗೆ ವನವಾಸಕ್ಕೆ ಬಲಾತ್ಕರಿಸಲ್ಪಟ್ಟು ಧಾರುಣ ಸಂಕಷ್ಟಗಳನ್ನನುಭವಿಸುವ ವೇಳೆ, ಒಂದಾನೊಂದು ದಿನ ಸಾಯಂಕಾಲ, ವನವಾಸಾನುಭವದಿಂದ ದುಃಖಿತರಾಗಿದ್ದ ಪಾಂಡವರು ದ್ರೌಪದಿಯೊಡನೆ ದ್ವೈತವನದಲ್ಲಿ ಕುಳಿತು ಮಾತಾಡುತಿದ್ದರು. ಕೌರವಸಭಾಭವನದಲ್ಲಿ ತನಗೆ ಪ್ರಾಪ್ತವಾದ ಅಪಮಾನವನ್ನು ನೆನೆದು, ಪಾಂಡವರ ಪ್ರೀತಿಗೆ ಪಾತ್ರಳಾದವಳೂ, ದರ್ಶನೀಯಳೂ, ಪಂಡಿತೆಯೂ, ಪತಿವ್ರತೆಯೂ ಆದ ದ್ರೌಪದಿಯು. ಮನಸ್ಸಿನ ಉದ್ವೇಗದಿಂದ ಹೊರಹೊಮ್ಮಿದ ಕಂಬನಿಯನ್ನೊರಸಿಕೊಂಡು ಯುಧಿಷ್ಠಿರನನ್ನು ಕುರಿತು ಶತ್ರುಗಳ ವಿಷಯದಲ್ಲಿ ಯುಧಿಷ್ಠಿರನ ಕೋಪವನ್ನು ಕೆರಳಿಸಲು ಸಂತಾಪವಚನಗಳನ್ನಾಡುತ್ತಾಳೆ.

ಮಹಾಶಕ್ತಿಯಂತೆ ತೇಜಸ್ವಿನಿಯಾದ ದ್ರೌಪದಿಯು, ತನ್ನ ಪತಿಗಳೈವರೂ ಹಂಸತೂಲಿಕಾತಲ್ಪದಲ್ಲಿ ಕುಳಿತವರೀಗ ದರ್ಭೆಯ ಹಾಸುಗೆಯಲ್ಲಿ ಪವಡಿಸುವುದನ್ನು ನೋಡಿ ಮರುಗುತ್ತಾಳೆ. ದಂತದಲ್ಲಿ ಮಾಡಿದ ನವರತ್ನಖಚಿತ ಸಿಂಹಾಸನದಲ್ಲಿ ಕುಳಿತ ಆ ವೀರರು ಇಂದು ಕುಶಾಸನದಲ್ಲಿ ಕುಳಿತಿರುವುದನ್ನು ನೋಡಿ ಪರಿತಪಿಸುತ್ತಾಳೆ. ರತ್ನಹಾರಗಳನ್ನು ಧರಿಸಿ ಸೂರ್ಯನಂತೆ ಪ್ರಕಾಶಿಸುತ್ತಿದ್ದವರು, ಚಂದನಾಗರು–ಕಸ್ತೂರಿ ಲೇಪನಗಳಿಂದ ಸುಗಂಧಮಯವಾಗಿರುತಿದ್ದ ಶರೀರಗಳಿಂದು ಧೂಳಿನಿಂದ ಮುಚ್ಚಿ ಹೋಗಿರುವುದನ್ನು ಕಂಡು ಸಹಿಸದೆ ಕಣ್ಣೀರು ಮಿಡಿಯುತ್ತಾಳೆ. ರೇಶ್ಮೆಯ ಪೀತಾಂಬರವನ್ನು ಧರಿಸುತಿದ್ದ ತನ್ನ ಪತಿಗಳು ಈಗ, ಹರಿದುಹೋಗಿರುವ ನಾರುಮಡಿಯನ್ನು ಧರಿಸಿರುವುದನ್ನು ಕಾಣುತ್ತ ಹಲಬುತ್ತಾಳೆ. ಹಿಂದೆ, ಪಾಕಶಾಸ್ತ್ರ ನಿಪುಣರಿಂದ ಸಿದ್ಧಪಡಿಸಲ್ಪಟ್ಟ ಭಕ್ಷ್ಯ-ಭೋಜ್ಯಾದಿಗಳನ್ನು ಸೇವಿಸುತ್ತ ಸುಖವಾಗಿದ್ದವರು ಇಂದು ಕಾಡಿನಲ್ಲಿ ಸಿಗುವ ಗೆಡ್ಡೆ-ಗೆಣಸುಗಳನ್ನು ತಿನ್ನುವುದನ್ನು ನೋಡಿ ನಿಟ್ಟುಸಿರಿಡುತ್ತಾಳೆ……..ದುಃಖವು ಉಮ್ಮಳಿಸಿ, ಅಂದಿನ ಸುಖೋಪಭೋಗ ಮತ್ತು ಇಂದಿನ ಈ ಅತ್ಯಂತ ಕಠಿನ ಕಷ್ಟಕಾರ್ಪಣ್ಯಗಳನ್ನು ನೆನೆನೆನೆದು, ಬಿಕ್ಕುತ್ತ ಬಿಕ್ಕುತ್ತ, ಉದ್ವಿಗ್ನಗೊಂಡು, ಆಗಾಗ್ಗೆ ಕಂಬನಿಯನ್ನೊರಸಿಕೊಂಡು, ತನ್ನನ್ನೂ ಭೀಮಾರ್ಜುನಾದಿ ನಾಲ್ವರನ್ನೂ ಧರ್ಮದ ಹೆಸರಿನಲ್ಲಿ ಈ ಅಸಹನೀಯ ಅವರ್ಣನೀಯ ಶೋಕಜೀವನಕ್ಕೆ ತಳ್ಳಿ, ಸ್ಥಿತಪ್ರಜ್ಞನಂತೆ ನಿಶ್ಚಲನಾಗಿ ಉಳಿದಿರುವ ಧರ್ಮರಾಜನೊಡನೆ,-(ಅವನಲ್ಲಿ ಕೋಪವನ್ನು ಕೆರಳಿಸಿ, ಶತ್ರುನಾಶಕ್ಕೆ ಎದ್ದೇಳುವಂತೆ ಪ್ರಚೋದಿಸಲು) ಪಾಂಡಿತ್ಯಪೂರ್ಣವಾದ, ಸಾಮಾನ್ಯರಾರೂ ಉತ್ತರಿಸಲಾರದಂಥ ತರ್ಕವನ್ನು ಅಘೋರ ವರ್ಷದಂತೆ ಸುರಿಸಿ ಬಿಡುತ್ತಾಳೆ: ಮತ್ತು, ದುಷ್ಟ, ನಿರ್ದಯ ಶತ್ರುವನ್ನು ಕ್ಷಮಿಸದೆ, ಅವನನ್ನು ಹೋರಾಡಲು ಅವಶ್ಯವಿರುವ ಕೋಪವನ್ನು ತಂದುಕೊಳ್ಳುವಂಥ, ಜಗ್ಗನೆ ಎದ್ದು ಸಮರಮುಖವಾಗುವಂತೆ ವಿದ್ಯುಚ್ಛಕ್ತಿಯನ್ನೆ ತುಂಬುವಂತೆ. ಧರ್ಮಜನ ಕರ್ತವ್ಯವೇನೆಂಬುದನ್ನು ಎಳೆಎಳೆಯಾಗಿ ಬಿಡಿಸಿ ಹೇಳಿ, ಅಲೆಅಲೆಯಾಗಿ ಅವನನ್ನು ಸೆಳೆಗೆಳೆವಂಥ ಧೀಶಕ್ತಿಯ ಪಾಂಡಿತ್ಯಪೂರ್ಣ ತರ್ಕದಿಂದ ಅವನ ಬುದ್ಧಿ-ಹೃದಯಗಳೆರಡರ ಮೇಲೂ ದಂಡೆತ್ತಿ ಹೋದಂತೆ ವಾದಿಸಿ, ವಿನಂತಿಸಿ, ಕಣ್ಣೀರ್ಗರೆದು, ಅನುಕಂಪವನ್ನೂ ಉಂಟುಮಾಡುತ್ತ,—

“ಮೃದುರ್ಭವತ್ಯವಜ್ಞಾತಸ್ತೀಕ್ಷ್ಣಾ
ದುದ್ವಿಜತೇ ಜನಃ ।
ಕಾಲೇ ಪ್ರಾಪ್ತೇ ದ್ವಯಂ
ಚೈತದ್ಯೋ ವೇದ ಸ ಮಹೀಪತಿಃ ।

[“ಕೇವಲ ಕ್ಷಮಾಗುಣವುಳ್ಳವನು ಈ ಪ್ರಪಂಚದಲ್ಲಿ ಅನಾದರಣೆ ಹೊಂದುತ್ತಾನೆ. ಯಾವಾಗಲೂ ಉಗ್ರನಾಗಿದ್ದರೆ ಜನರು ಭಯಪಡುತ್ತಾರೆ. ಆದುದರಿಂದ ರಾಜನಾದವನಿಗೆ ಉಗ್ರತೆಯೂ ಇರಬೇಕು; ಕ್ಷಮೆಯೂ ಇರಬೇಕು. ಮತ್ತು ಈ ಎರಡು ಗುಣಗಳನ್ನೂ ಸಮಯವರಿತು ಪ್ರಯೋಗಿಸುವ ವಿವೇಚನೆಯೂ ಇರಬೇಕು. ಅಂತಹವನೇ ಉತ್ತಮ ಪ್ರಭುವೆನಿಸುವನು”]—

—ಎನ್ನುತ್ತಾಳೆ.

ಇಂಥ ವಿಪನ್ನಾವಸ್ಥೆಯಲ್ಲಿಯೂ, ಪ್ರಿಯ ಭಾರ್ಯೆಯ ದುಃಖೋದ್ವೇಗ ನೋಡಿ ಸತರ್ಕವೆನಿಸುವ ಅವಳ ವಾದವನ್ನು ಕೇಳಿಯೂ, ಧರ್ಮಜನು ತಿಲಮಾತ್ರ ವಿಚಲಿತನಾಗುವುದಿಲ್ಲ. ಅವಳ ಮಾತುಗಳನ್ನು ಶಾಂತವಾಗಿ ಸಹನೆಯಿಂದಲೇ ಕೇಳುತ್ತಾನೆ. ಮತ್ತು, ಕ್ಷಮಾಗುಣವೇ ಶ್ರೇಷ್ಠವಾದ ಗುಣವೆಂದೂ, ಕೋಪವು ಅನರ್ಥಕಾರಿಯೆಂದೂ ಯುಕ್ತಿಯುಕ್ತವಾಗಿ ಉತ್ತರಿಸುತ್ತಾನೆ. ಯುಧಿಷ್ಠಿರನ ಈ ಉತ್ತರವು ಸ್ವರ್ಣಾಕ್ಷರಗಳಲ್ಲಿ ಬರೆದಿಡಲ್ಪಡುವಂಥವು. ಮಹಾಭಾರತದಲ್ಲಿನ ಅನರ್ಘ್ಯರತ್ನಗಳಲ್ಲಿ ಯುಧಿಷ್ಠಿರನು, ಅಸದೃಶ ಸಂಕಷ್ಟಗಳ ನಡುವೆಯೂ ದ್ರೌಪದಿಗೆ ಹೇಳುವ ಈ ನುಡಿಮುತ್ತುಗಳೂ ಕೆಲವು. ಅವುಗಳಿಂದ ಕೆಲವನ್ನು ಆಯ್ದು ಇಲ್ಲಿ ಕೊಡಲಾಗಿದೆ:

ಕ್ರೋಧೋ ಹನ್ತಾ ಮನುಷ್ಯಾಣಾಂ
ಕ್ರೋಧೋ ಭಾವಯಿತಾ ಪುನಃ ।
ಇತಿ ವಿದ್ಧಿ ಮಹಾಪ್ರಾಜ್ಞೇ
ಕ್ರೋಧಮೂಲೌ ಭವಾಭವೌ ॥

“ಮಹಾಪ್ರಾಜ್ಞೇ! ಕೋಪವು ಮನುಷ್ಯನನ್ನು ಕೊಂದೇಬಿಡುವುದು. ಕ್ರೋಧವನ್ನು ಜಯಿಸುವುದರಿಂದ ಮನುಷ್ಯನಿಗೆ ಶ್ರೇಯಸ್ಸುಂಟಾಗುತ್ತದೆ. ಉನ್ನತಿ ಮತ್ತು ಅವನತಿಗಳಿಗೆ ಕ್ರೋಧವೇ ಮುಖ್ಯ ಕಾರಣವಾಗಿರುತ್ತದೆ.”

ಕ್ರೋಧಮೂಲೋ ವಿನಾಶೋ
ಹಿ ಪ್ರಜಾನಾಮಿಹ ದೃಶ್ಯತೇ ।
ತತ್ಕಥಂ ಮಾದೃಶಃ ಕ್ರೋಧ-
ಮುತ್ಸೃಜೇಲ್ಲೋಕನಾಶನಮ್ ॥

ಈ ಪ್ರಪಂಚದಲ್ಲಿ ಪ್ರಜೆಗಳ ವಿನಾಶಕ್ಕೆ ಕೋಪವೇ ಮೂಲಕಾರಣವಾಗಿರುತ್ತದೆ. ಪ್ರಪಂಚದ ವಿನಾಶಕ್ಕೇ ಕಾರಣವಾಗುವ ಕೋಪವನ್ನು ನನ್ನಂತಹವನು ಮತ್ತೊಬ್ಬರ ಮೇಲೆ ಹೇಗೆ ತಾನೇ ಪ್ರಯೋಗಿಸಿಯಾನು?

ಕ್ರುದ್ಧಃ ಪಾಪಂ ನರಃ ಕುರ್ಯಾ-
ತ್ಕ್ರುದ್ಧೋ ಹನ್ಯಾದ್ಗುರೂನಪಿ ।
ಕ್ರುದ್ಧಃ ಪರುಷಯಾ ವಾಚಾ
ಶ್ರೇಯಸೋಽಪ್ಯವಮನ್ಯತೇ ॥

ಕೋಪಿಷ್ಟನಾದ ಮನುಷ್ಯನು ವಿವೇಚನಾರಹಿತನಾಗಿ ಅನೇಕ ಪಾಪಕೃತ್ಯಗಳನ್ನು ಮಾಡುತ್ತಾನೆ. ಕೋಪಗೊಂಡವನು ತನ್ನ ಗುರುಜನರನ್ನೂ ಸಹ ಕೊಲ್ಲಲು ಹಿಂಜರಿ

(೪ನೇ ಪುಟದಿಂದ)

ಆಗಿನ ಗಣ್ಯ ನ್ಯಾಯವಾದಿಗಳಾದ ಶ್ರೀ ಯು. ಸಿ. ಕೃಷ್ಣ ಭಟ್, ಶ್ರೀ ಎಂ. ಮಾಧವ ರಾವ್, ಶ್ರೀ ಭಂಡಾರಕರ್, ಶ್ರೀ ಕೋಟ ರಾಮಕೃಷ್ಣ ಕಾರಂತ, ನಿವೃತ್ತ ಅಧಿಕಾರಿ ಶ್ರೀ ಯು. ಗೋಪಾಲ ನಾಯಕ್ ಮೊದಲಾದವರು ಆರಂಭಿಸಿದ ಈ ಸಮಾಜಕ್ಕೆ ಇವರೆಲ್ಲ ತ್ಯಾಗಬುದ್ಧಿಯಿಂದ ದುಡಿದಿದ್ದರು. ಆಗಲೇ ಬ್ರಾಹ್ಮಣ-ಅಬ್ರಾಹ್ಮಣ ಎಂಬ ಭೇದಭಾವ ಆ ಗಣ್ಯರಲ್ಲಿಯೂ ಮೂಡಿತ್ತು, ಬ್ರಾಹ್ಮಣ್ಯವನ್ನುಳಿಸಬೇಕು; ಬ್ರಾಹ್ಮಣರು ಮಾತ್ರ ಇರಬಾರದು ಎಂಬ ಉಚ್ಚ-ನೀಚ ಭೇದ ನೀತಿ ಹಲವಾರು ಮಂದಿ ರಾಷ್ಟ್ರನಾಯಕರಲ್ಲಿ ಜುಗುಪ್ಸೆ ಹುಟ್ಟಿ ಸಿಡಿದು ನಿಲ್ಲುವಂತೆ ಮಾಡಿತು.

೧೯೨೪ರಲ್ಲಿ ಇಲ್ಲಿಗೆ ಸ್ವಾಮಿ ಶ್ರದ್ಧಾನಂದ ಸರಸ್ವತಿ ಅವರು ಸಂದರ್ಶನವಿತ್ತಿದ್ದರು. ೧೯೨೫ರಲ್ಲಿ ಶ್ರದ್ಧಾನಂದ ಸೇವಾಶ್ರಮದ ಆರಂಭವಾಯಿತು. ಅನಾಥ ಮಕ್ಕಳ ಪೋಷಣೆ, ಹಾಗೂ ಮತಾಂತರಗೊಂಡವರನ್ನು ಶುದ್ಧೀಕರಿಸುವ ಚಳವಳಿ-ಇತ್ಯಾದಿಗಳಾಗಿ ಸಾವಿರಾರು ಮಂದಿ ನಿರ್ಗತಿಕರ ಜೀವನವನ್ನು ಉಚ್ಚಾದರ್ಶಗಳ ಕಡೆಗೆ ತಿರುಗಿಸುವ ಕಾರ್ಯದಲ್ಲಿ ಯಶಸ್ಸುಗಳಿಸುತ್ತಾ ಬಂದಿದೆ. ಆದರೇನು? ಸ್ವಪ್ರತಿಷ್ಠಿತರ–ಸ್ವಾರ್ಥಸಾಧಕರ ಗುಂಪು ಸತ್ಕಾರ್ಯದಲ್ಲಿಯೂ ತಡೆಯನ್ನುಂಟುಮಾಡಿತು: ಒಡಕನ್ನು ಮೂಡಿಸಿತು. ಮಾತೃಸಂಸ್ಥೆಯೊಂದಿಗೆ ಒಡಂಬಡಿಕೆ ಇಲ್ಲದೆ ನಡೆದು ಬಂದಿದೆ ಎಂಬುದು ಲೋಕಕ್ಕೆ ತಿಳಿದ ವಿಚಾರ. ಆದರೂ ಈ ಪ್ರತಿಷ್ಠಿತರು ‘ಆರ್ಯ’ರಾದರೂ ‘ಅನಾರ್ಯ’ರಂತೆ ವರ್ತಿಸತೊಡಗಿದಂತಿದೆ.

ಆರ್ಯಸಮಾಜದ ‘ಬಲಿದಾನ ದಿನ’ ಎಂದರೆ ದೀಪಾವಳಿಯ ದಿನ. ಅಂದು ಸ್ವಾಮಿ ಶ್ರದ್ಧಾನಂದರು ಆತ್ಮ ಬಲಿದಾನ ಮಾಡಿಕೊಂಡರು. ಸಮಾಜದ ಹಿತಕ್ಕಾಗಿ, ವೈದಿಕ ಸಂಸ್ಕೃತಿಯ ಬೆಳವಣಿಗೆಗಾಗಿ ತಮ್ಮನ್ನೇ ತಾವು ಅರ್ಪಿಸಿಕೊಂಡರು, ಸ್ವಾಮಿ ದಯಾನಂದ ಸರಸ್ವತಿ ಅವರ ಪರಂಪರೆಯವರಾದ ಇವರಲ್ಲಿ ಪರಮತ ಸಹಿಷ್ಣುತೆ ಎಷ್ಟಿತ್ತೆಂಬುದಕ್ಕೆ ಸಾಕ್ಷಿ ಅವರು ಮುಸ್ಲಿಂ ಬಂಧುಗಳ ಕರೆಗೂ ಓಗೊಟ್ಟು ಮಸೀದಿಯಲ್ಲಿಯೂ ರಾಷ್ಟ್ರೀಯ ಧರ್ಮದ ಕುರಿತು ಭಾಷಣವೀಯಲು ಮುಂದಾಗಿದ್ದರು. ಕುಕರ್ಮಿಗಳ ವಂಚನೆಗೆ ಬಲಿಯಾದರು: ಅವರ ಜೀವನ ಸಾರ್ಥಕವಾಯಿತು,

ಆರ್ಯಸಮಾಜದಲ್ಲಿ ಈಗಲೂ ಪ್ರತಿ ಭಾನುವಾರ ಬೆಳಗ್ಗೆ ಗಂಟೆ ೯ರಿಂದ ೧೦ರ ತನಕ ಹವನ-ಪಠನ-ಉಪನ್ಯಾಸಗಳಾಗುತ್ತವೆ. ಶುದ್ಧೀಕರಣಗಳಾಗುತ್ತವೆ. ಆಚಾರ್ಯ ವಿಜ್ಞಾನ ಭಿಕ್ಷು ಅವರು ಈ ಕಾರ್ಯಕರ್ತರಾಗಿದ್ದು ನಿರಂತರ ಶ್ರಮಿಸುತಿದ್ದಾರೆ. ಶ್ರೀ ಎಸ್. ಯು. ಪರಶುರಾಮ ನಾಯಕ್ ಅವರು ಅಧ್ಯಕ್ಷರಾಗಿರುವ ಒಂದು ಕಾರ್ಯ ಸಮಿತಿಯೂ ಇದೆ. ಆದರೆ, ಈ ಸತ್ಕಾರ್ಯದ ಪ್ರಯೋಜನ ಪಡೆಯುವ ಮಂದಿ ಎಷ್ಟು ಎಂಬ ಪ್ರಶ್ನೆ ಏಳುತ್ತದೆ.

——

ಯಿರುವುದಿಲ್ಲ. ಕೋಪಿಷ್ಟನಾದವನು ತನ್ನ ಹಿರಿಯರನ್ನೂ ಸಹ ಪರಿಗಣಿಸದೇ ಕಠಿನೋಕ್ತಿಗಳಿಂದ ಅವರ ಮನನೋಯಿಸುತ್ತಾನೆ. ಕೋಪಿಷ್ಟನಾದವನಿಗೆ ಕಾರ್ಯಾಕಾರ್ಯಗಳ ವಿವೇಚನೆಯೇ ಇರುವುದಿಲ್ಲ.

ತಂ ಕ್ರೋಧಂ ವರ್ಜಿತಂ ಧೀರೈಃ
ಕಥಮಸ್ಮದ್ವಿಧಶ್ಚರೇತ್ ।
ಏತದ್ದ್ರೌಪದಿ ಸಂಧಾಯ ನ
ಮೇ ಮನ್ಯುಃ ಪ್ರವರ್ಧತೇ ॥

ಕೋಪವನ್ನು ವರ್ಜಿಸಿದವರನ್ನು ದುರ್ಬಲರೆಂದು ಭಾವಿಸಬೇಡ ದ್ರೌಪದಿ! ಕೋಪವನ್ನು ತ್ಯಜಿಸಲು ಧೀರರಿಂದ ಮಾತ್ರವೇ ಸಾಧ್ಯವಾದೀತು. ಧೀರರು ಕೂಡ ಬಹು ಕಷ್ಟದಿಂದ ಕೋಪನ್ನು ಜಯಿಸಿರುತ್ತಾರೆ. ಹೀಗಿರುವಾಗ ನನ್ನಂತಹವನು ಕೋಪಕ್ಕೆ ಆಶ್ರಯವನ್ನೀಯಲು ಸಾಧ್ಯವಾದೀತೇ? ಈ ವಿಷಯಂಗಳ ಸಮಾಲೋಚನೆಯಿಂದಲೇ ಕೋಪವು ನನ್ನಲ್ಲಿ ಉಲ್ಬಣಿಸುವುದಿಲ್ಲ.

ಆತ್ಮಾನಂ ಚ ಪರಾಂಶ್ಚೈವ
ತ್ರಾಯತೇ ಮಹತೇ ಭಯಾತ್ ।
ಕ್ರುಧ್ಯಂತಮಪ್ರತಿ ಕ್ರುಧ್ಯನ್ದ್ವ-
ಯೋರೇಷ ಚಿಕಿತ್ಸಕಃ ॥

ದ್ರೌಪದಿ! ಕೋಪಗೊಂಡಿರುವ ಮನುಷ್ಯನ ಎದುರಾಳಿಯು, ಕೋಪದಿಂದ ವರ್ತಿಸಬಾರದು. ಹೀಗೆ ಮಾಡುವುದರಿಂದ ಕೋಪಗೊಂಡವನು ಮತ್ತು ಎದುರಾಳಿ ಇಬ್ಬರೂ ಸಹ ದೊಡ್ಡ ಅಪಾಯದಿಂದ ಪಾರಾಗುತ್ತಾರೆ. ಅಂತಹ ಸಮಯಗಳಲ್ಲಿ ಕೋಪಗೊಳ್ಳದೇ ಕ್ಷಮೆಯಿಂದಿರುವವನೇ ಇಬ್ಬರಿಗೂ ವೈದ್ಯನಂತಿರುವನು.

ಕ್ರೋಧಂ ತ್ಯಕ್ತ್ವಾ ತು ಪುರುಷಃ
ಸಮ್ಯಕ್ತೇಜೋಽಭಿಪದ್ಯತೇ ।
ಕಾಲಯುಕ್ತಂ ಮಹಾಪ್ರಾಜ್ಞೇ
ಕ್ರುದ್ಧೈಸ್ತೇಜಃ ಸುದುಃಸಹಮ್ ॥

ಕೋಪವನ್ನು ಜಯಿಸಿರುವ ತೇಜಸ್ವಿಯು ಸಮಯಗಳಲ್ಲಿ ಪರಾಕ್ರಮವನ್ನು ತೋರಲು ಸಮರ್ಥನಾಗುವನು. ಆದರೆ, ಕೋಪಿಷ್ಟರಾದವರು ಸಮಯಗಳಲ್ಲಿ ಸಾಮರ್ಥ್ಯವನ್ನು ತೋರಲು ಅಸಮರ್ಥರಾಗುವರು.

ಯದಿ ಸರ್ವಮಬುದ್ಧೀನಾಮತಿ
ಕ್ರಾಂತಮಚೇತಸಾಮ್ ।
ಅತಿಕ್ರಮೋ ಮದ್ವಿಧಸ್ಯ ಕಥಂ
ಸ್ವಿತ್ಸ್ಯಾದನಿಂದಿತೇ ॥

ಬುದ್ಧಿಹೀನರಿಂದ, ಮೂಢರಿಂದ ಕ್ಷಮಾದಿ ಸುಗುಣಗಳು ಅತಿಕ್ರಮಿಸಲ್ಪಡುತ್ತವೆ. ಅಂತಹವನ ಅನುಕರಣವನ್ನು ನನ್ನಂತಹವರು ಮಾಡುವುದು ಉಚಿತವೇ, ದ್ರೌಪದಿ?

ಯದಿ ನ ಸ್ಯುರ್ಮಾನುಷೇಷು
ಕ್ಷಮಿಣಃ ಪೃಥಿವೀ ಸಮಾಃ ।
ನ ಸ್ಯಾತ್ಸಂಧಿರ್ಮನುಷ್ಯಾಣಾಂ
ಕ್ರೋಧಮೂಲೋ ಹಿ ವಿಗ್ರಹಃ ॥

ಭೂಮಿಗೆ ಸಮವಾದ ತಾಳ್ಮೆಯುಳ್ಳ ಮನುಷ್ಯರು ಇಲ್ಲದಿದ್ದರೆ ಪ್ರಪಂಚದಲ್ಲಿ ಶಾಂತಿಯೆಂಬುದೇ ಇರುತ್ತಿರಲಿಲ್ಲ. ಎಲ್ಲೆಡೆಗಳಲ್ಲಿಯೂ ಕೋಪವೇ ಆವರಿಸಿ ಕಿತ್ತಾಟಗಳು ನಡೆಯುತ್ತಲೇ ಇರುತ್ತಿದ್ದವು. ಪರಸ್ಪರ ಘರ್ಷಣೆಗಳಿಗೆ ಕ್ರೋಧವೇ ಮೂಲ. ಒಂದು ವೇಳೆ ಕೋಪದ ಪ್ರಭಾವವೇ ಎಲ್ಲೆಡೆಗಳಲ್ಲಿಯೂ ಇರುತ್ತದೆಯೆಂದೇ ಭಾವಿಸೋಣ. ಅದರ ಪರಿಣಾಮವೇನೆಂಬುದನ್ನಾದರೂ ಊಹಿಸಿರುವೆಯಾ?

ಅಭಿಷಕ್ತೋ ಹ್ಯಭಿಷಜೇದಾಹ-
ನ್ಯಾದ್ಗುರುಣಾ ಹತಃ ।
ಏವಂ ವಿನಾಶೋ ಭೂತಾನಾಮ-
ಧರ್ಮಃ ಪ್ರಥಿತೋ ಭವೇತ್ ॥
ಆಕ್ರುಷ್ಟಃ ಪುರುಷಃ ಸರ್ವಂ
ಪ್ರತ್ಯಾಕ್ರೋಶೇದನಂತರಮ್ ।
ಪ್ರತಿಹನ್ಯಾದ್ಧತಶ್ಚೈವ ತಥಾ
ಹಿಂಸ್ಯಾಚ್ಚ ಹಿಂಸಿತಃ ॥
ಹನ್ಯುರ್ಹಿ ಪಿತರಃ ಪುತ್ರಾನ್ಪು-
ತ್ರಾಶ್ಚಾಪಿ ತಥಾ ಪಿತೄನ್ ।
ಹನ್ಯುಶ್ಚ ಪತಯೋ ಭಾರ್ಯಾಃ
ಪತೀನ್ಭಾರ್ಯಾಸ್ತಥೈವ ಚ ।
ಏವಂ ಸಂಕುಪಿತೇ ಲೋಕೇ
ಶಮಃ ಕೃಷ್ಣೇ ನ ವಿದ್ಯತೇ ॥

ಕೃಷ್ಣೇ! ತೊಂದರೆಯನ್ನನುಭವಿಸಿದವನು ಪುನಃ ತೊಂದರೆಯನ್ನೇ ಮಾಡಲು ಹೋದರೆ; ಹಿರಿಯರು ಕಿರಿಯರನ್ನು ಶಿಕ್ಷಿಸಿದಾಗ ಕಿರಿಯರು ಹಿರಿಯರನ್ನೂ ಶಿಕ್ಷಿಸಲು ಹೋದರೆ; ಬೈಯುತ್ತಿರುವ ಮನುಷ್ಯನನ್ನು ಬೈಯಿಸಿಕೊಳ್ಳುತ್ತಿರುವವನು ಕೋಪಗೊಂಡು ನಿಂದಿಸಲು ಆರಂಭಿಸಿದರೆ; ತಂದೆಯು ಶಿಕ್ಷಿಸಿದಾಗ ಮಗನೂ ತಂದೆಯನ್ನು ಶಿಕ್ಷಿಸಲು ಹೋದರೆ; ಗಂಡನು ಹೆಂಡತಿಯನ್ನೂ, ಹೆಂಡತಿಯು ಗಂಡನನ್ನೂ ಕೋಪದಿಂದ ಕೊಲೆಮಾಡಲೂ ಆರಂಭಿಸಿದರೆ; ಜೀವರಾಶಿಯೆಲ್ಲಿ ಉಳಿಯುವುದು? ದ್ರೌಪದಿ! ಜಗತ್ತು ಪಾಪ ಭೂಯಿಷ್ಟವಾಗುವುದು. ಕೋಪವೆಂಬ ದುಷ್ಟಶಕ್ತಿಯು ಸರ್ವತ್ರ ವ್ಯಾಪಿಸುವುದು. ಪ್ರಪಂಚದಲ್ಲಿ ಶಾಂತಿಯೆಂಬುದೇ ಇರಲಾರದು.

ಪ್ರಜಾನಾಂ ಸಂಧಿಮೂಲಂ
ಹಿ ಶಮಂ ವಿದ್ಧಿ ಶುಭಾನನೇ ॥

ಕ್ಷಮಾಗುಣವೇ ಪ್ರಜೆಗಳ ಸಂಧಾನಕ್ಕೂ, ಪರಸ್ಪರ ವಿಶ್ವಾಸಕ್ಕೂ ಮುಖ್ಯ ಕಾರಣವೂ, ಮೂಲಕಾರಣವೂ ಆಗಿರುವುದು, ಶುಭಾನನೇ!

ತಾಃ ಕ್ಷಿಪೇರನ್ಪ್ರಜಾಃ ಸರ್ವಾಃ
ಕ್ಷಿಪ್ರಂ ದ್ರೌಪದಿ ತಾದೃಶೇ ।
ತಸ್ಮಾನ್ಮನ್ಯುರ್ವಿನಾಶಾಯ
ಪ್ರಜಾನಾಮಭವಾಯ ಚ ॥

ರಾಜರು ತಮಗಿರಬೇಕಾದ ಕ್ಷಮಾಗುಣವನ್ನು ತೊರೆದು ಕ್ರೂರಿಗಳಾದರೆ ಪ್ರಜೆಗಳೆಲ್ಲರೂ ವಿನಾಶಹೊಂದುತ್ತಾರೆ. ಆದುದರಿಂದ ಕೋಪವೆಂಬುದು ಯಾವಾಗಲೂ ಜನರ ವಿನಾಶಕ್ಕೂ ಅವನತಿಗೂ ಕಾರಣಭೂತವಾಗಿದೆ.

ಯಸ್ಮಾತ್ತು ಲೋಕೇ ದೃಶ್ಯಂತೇ
ಕ್ಷಮಿಣಃ ಪೃಥಿವೀಸಮಾಃ
ತಸ್ಮಾಜ್ಜನ್ಮ ಚ ಭೂತಾನಾಂ
ಭವಶ್ಚ ಪ್ರತಿಪದ್ಯತೇ ॥

ಪ್ರಪಂಚದಲ್ಲಿ ಪೃಥ್ವಿಗೆ ಸಮನಾದ ಕ್ಷಮಾಗುಣವುಳ್ಳವರು ಇರುವುದರಿಂದಲೇ ಪ್ರಾಣಿಗಳ ಸೃಷ್ಟಿ ಮತ್ತು ರಕ್ಷಣೆಗಳು ನಡೆಯುತ್ತಿವೆ.

["ಕ್ಷಮಾಗುಣ"ದ ವಿಷಯವಾಗಿ ಧರ್ಮರಾಜನು ದ್ರೌಪದಿಗೆ ಬೋಧಿಸಿದುದರ ಒಂದಂಶವನ್ನು ಈ ಸಂಚಿಕೆಯ ಮತ್ತೊಂದು ಪುಟದಲ್ಲಿ ಕೊಡಲಾಗಿದೆ.

— ಸಂಪಾದಕ.]

——

ಐರೋಡಿ ಶಿವರಾಮಯ್ಯ ರಚಿಸಿದ ಭಾರತ ಸಂಗ್ರಹ

— ಶೇಖರ ಇಡ್ಯ

ನಾಲ್ಕು ವರ್ಷಗಳ ಹಿಂದೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕನ್ನಡ ಪ್ರಚಾರದ ಕುರಿತಾದ ಲೇಖನವೊಂದು ದೈನಿಕ ಪತ್ರಿಕೆಯಲ್ಲಿ ಪ್ರಕಟವಾಯಿತು. ಕನ್ನಡ ಪ್ರಚಾರ ಕಾರ್ಯವು ಇತ್ತೀಚೆಗೆ ಮಾತ್ರ ನಡೆದುದಾಗಿ ಒಂದು ತಪ್ಪು ಅಭಿಪ್ರಾಯವು ಈ ಲೇಖನದಲ್ಲಿ ವ್ಯಕ್ತವಾಯಿತು. ಕನ್ನಡಕ್ಕಾಗಿ ಅಪಾರವಾಗಿ ದುಡಿದ ಅನೇಕ ಮಹನೀಯರ ಹೆಸರಾಗಲೀ, ಕಾರ್ಯವಾಗಲೀ ಅದರಲ್ಲಿ ಉಕ್ತವಾಗಿರಲಿಲ್ಲ, ೧೯೨೭ರಲ್ಲಿ ಮಂಗಳೂರು ನಗರದಲ್ಲಿ ಜರಗಿದ ಸಾಹಿತ್ಯ ಸಮ್ಮೇಳನದ ಧುರೀಣ ಹಾಗೂ ಸ್ವಾಗತ ಸಮಿತಿಯ ಕಾರ್ಯದರ್ಶಿ ಉಳ್ಳಾಲ ಮಂಗೇಶರಾಯರ ಹೆಸರೂ ಇರಲಿಲ್ಲವೆಂದು ಎತ್ತಿ ಹೇಳುವ ಪ್ರಮೇಯವುಂಟಾಗಿತ್ತು. ತಾವು ಮಾಡಿದ್ದು ಮಾತ್ರ ಸೇವೆಯೆಂಬ ಧೋರಣೆಯ ಫಲವೊ ಕೇವಲ ಅಜ್ಞಾನವೊ ಇಂತಹ ಎಡಹುಗಳಿಗೆ ಕಾರಣವಿರಬಹುದು. ವಸ್ತುಸ್ಥಿತಿ ಹಾಗಿರಲಿಲ್ಲವೆಂದು ತಿಳಿಸುವ ಅಗತ್ಯವುಂಟಾಗುತ್ತದೆ. ಇತ್ತೀಚೆಗೆ ನಮ್ಮ ಹೆಸರಾಂತ ಸಂಶೋಧಕರಾದ ಡಾ। ಶ್ರೀನಿವಾಸ ಹಾವನೂರರು ಕನ್ನಡದ ಸೇವೆಯನ್ನು ಈ ಜಿಲ್ಲೆಯಲ್ಲಿ ಶ್ರದ್ಧೆ, ಭಕ್ತಿ, ತ್ಯಾಗಗಳೊಂದಿಗೆ ನಡೆಸಿದ ನೂರು ಮಹನೀಯರ ಯಾದಿಯನ್ನು ಸಿದ್ಧಗೊಳಿಸಿದ್ದಾರೆ.

ಕನ್ನಡಕ್ಕಾಗಿ ದುಡಿದ ಈ ಮಂದಿ ವಿಶ್ವವಿದ್ಯಾಲಯಗಳಿಂದ ಪದವಿಯನ್ನು ಪಡೆದವರಲ್ಲ; ಬಹುಮಾನ ಪ್ರಶಸ್ತಿಗಳ ಕಾಲವೂ ಅದಾಗಿರಲಿಲ್ಲ; ಅವರು ಬಹುಮಾನ, ಪ್ರಶಸ್ತಿಗಾಗಿ ಸಾಹಿತ್ಯ ಸೇವೆಯನ್ನು ಕೈಕೊಂಡವರಾಗಿರಲಿಲ್ಲ. ಸಂಘ, ಸಂಸ್ಥೆಗಳ ಕಾರ್ಯಕರ್ತರಾಗಿ ನುಣ್ಣನೆಯ ಬಣ್ಣದ ಮಾತುಗಳ ಬಲದಿಂದ ಮೆರೆದ ಮಂದಿ ಅವರಾಗಿರಲಿಲ್ಲ. ಹಳ್ಳಿಯ ಮೂಲೆಗಳಲ್ಲಿದ್ದು ಕೈಲಾದಷ್ಟು ಸಾಹಿತ್ಯ ಸೇವೆಯನ್ನು ಮಾಡಿ ಆತ್ಮಸಂತೋಷವನ್ನು ಅವರು ಪಡೆದಿದ್ದರು. ಅವರ ಪಾಂಡಿತ್ಯ, ಕಿರಿದಾಗಿರಲಿಲ್ಲ. ಉತ್ತಮ ಶಿಷ್ಯವರ್ಗವನ್ನು ಸಿದ್ಧಗೊಳಿಸಿದ ಕೀರ್ತಿಯೂ ಅವರದ್ದಾಗಿತ್ತು. ಗಣಪತಿ ಐಗಳು, ಒಡಕಬೈಲು ಪರಮೇಶ್ವರಯ್ಯ, ಪೆರಡಾಲ ಕೃಷ್ಣಯ್ಯ, ಬೇಕಲ ರಾಮನಾಯಕ, ನಂದಳಿಕೆ ಲಕ್ಷ್ಮಿನಾರಾಯಣಯ್ಯ, ಐರೋಡಿ ಶಿವರಾಮಯ್ಯ ಮುಂತಾದ ಹಲವರು ಹಳ್ಳಿಗಳಲ್ಲಿದ್ದೂ ಸಾಹಿತ್ಯಸೃಷ್ಟಿ, ವ್ಯಾಸಂಗ ಮುಂತಾದ ಕಾಯಕಗಳನ್ನು ನಡೆಸುತಿದ್ದುದು ಕಂಡುಬರುತ್ತದೆ.

ದಕ್ಷಿಣ ಕನ್ನಡ ಜಿಲ್ಲೆಯ ಉತ್ತರ ಭಾಗದಲ್ಲಿ ಕನ್ನಡಕ್ಕಾಗಿ ಶ್ರಮಿಸಿದ ಮಹನೀಯರುಗಳಲ್ಲಿ ಐರೋಡಿ ಶಿವರಾಮಯ್ಯನವರು ಗಣ್ಯರಾಗಿದ್ದಾರೆ. ಅವರು ನಂದಳಿಕೆಯ ಗೆಳೆಯರಾಗಿಯೂ ಪ್ರಸಿದ್ಧರು; ಶ್ರೀ। ಶಿವರಾಮ ಕಾರಂತರ ಗುರುಗಳಾಗಿ ಅವರಲ್ಲಿ ಸಾಹಿತ್ಯಪ್ರೇಮವನ್ನು ಕುದುರಿಸಿ ನಾಡಿಗೆ ದೊಡ್ಡ ಉಪಕಾರ ಮಾಡಿಯೂ ಸ್ಮರಣೀಯರಾಗಿದ್ದಾರೆ. ಪಂಜೆ, ಎಂ. ಎನ್. ಕಾಮತರ ಹಾದಿಯನ್ನು ತುಳಿದು ಸಾಕಷ್ಟು ಬಾಲಸಾಹಿತ್ಯವನ್ನು ಸೃಷ್ಟಿಸಿ ಎಳೆಯರ ಸಂತಸವನ್ನು ಶಿವರಾಮಯ್ಯನವರು ಹೆಚ್ಚಿಸಿದ್ದಾರೆ. ಉತ್ತಮವಾದ ಕನ್ನಡ ಪಠ್ಯ ಪುಸ್ತಕಗಳು ಅವರಿಂದ ರಚಿತವಾಗಿ ಉಡುಪಿಯ ವಿ. ಲಕ್ಷ್ಮಣ ರಾವ್ ಸಂಸ್ಥೆಯಿಂದ ಪ್ರಕಟವಾಗಿ ಜನಪ್ರಿಯವಾಗಿದ್ದುವು. ಓದು ಬರಹ ಬಲ್ಲ ಸಾಮಾನ್ಯರೂ ಸಾಹಿತ್ಯಕೃತಿಗಳನ್ನು ಸವಿಯಬೇಕೆಂಬ ಧೋರಣೆಯು ಶಿವರಾಮಯ್ಯನವರದ್ದು. ಅವರ ಕೃತಿಗಳಾದ ಆರ್ಯನೀತಿ ಕಥೆಗಳು, ಐರಾವತದ ಕಥೆ, ಕಾದಂಬರಿ ಸಂಗ್ರಹ, ಮುದ್ರಾರಾಕ್ಷಸ ನಾಟಕ, ರಘುವಂಶಸಾರ ಸಂಗ್ರಹ, ಸಂಕ್ಷಿಪ್ತ ವಾಲ್ಮೀಕಿ ರಾಮಾಯಣ, ಸಂಕ್ಷಿಪ್ತ ಮಹಾಭಾರತ ಮುಂತಾದ ಕೃತಿಗಳು ನಮ್ಮ ಜನತೆಗೆ ಆನಂದವನ್ನು ಒದಗಿಸಿವೆ; ಅಭಿರುಚಿಯನ್ನು ಬೆಳೆಸಿರುತ್ತದೆ, ಕಾವ್ಯರಚನಾ ಸಾಮರ್ಥ್ಯವೂ ಶಿವರಾಮಯ್ಯನವರಲ್ಲಿತ್ತು. ಅವರು ಪ್ರಕಟಿಸಿದ 'ಕಾವ್ಯ ಸಂಗ್ರಹ'ದಲ್ಲಿ ಅವರಿಂದ ರಚಿತವಾದ ಹಲವು ಕಿರುಕಾವ್ಯಗಳಿವೆ, ಅವರ ಇನ್ನೊಂದು ಕೃತಿಯೆಂದರೆ ಇನ್ನೂ ಅಪ್ರಕಟಿತವಾಗಿ ಉಳಿದಿರುವ ಶಿಶುಪಾಲ ವಧ ಕಾವ್ಯ.

ಶಿವರಾಮಯ್ಯನವರ ಕಿರುಕಾವ್ಯಗಳಲ್ಲಿ 'ಭಾರತ ಸಂಗ್ರಹ'ವು ಸುಲಲಿತವೂ ಚಿತ್ತಾಕರ್ಷಕವೂ ಆಗಿರುವ ಕೃತಿ. ಕೇವಲ ೨೪ ಪದ್ಯಗಳಲ್ಲಿ ಮಹಾಭಾರತ ಸಾರವನ್ನು ಸಂಕ್ಷಿಪ್ತವಾಗಿ ಹೇಳುವ ಪ್ರಯತ್ನವಿದು. ಕೊನೆಯ ಎರಡು ಪದ್ಯ ಮಾತ್ರ ಕುಮಾರವ್ಯಾಸನಿಂದ ಎರವಲು ತಂದದ್ದು. ಭಾಮಿನೀ ಷಟ್ಪದಿಯಲ್ಲಿ ರಚಿಸಿದ ಈ ಕಾವ್ಯದಲ್ಲಿ ಸುಲಲಿತ, ಸರಳವಾದ ಪದಬಂಧವನ್ನೂ, ಪರ್ವಗಳ ಪ್ರಧಾನ ಘಟನೆಗಳ ಉಚಿತವಾದ ಆಯ್ಕೆಯನ್ನೂ ನಾವು ಮೆಚ್ಚುವಂತಿವೆ. ಉದ್ಯೋಗಪರ್ವದಲ್ಲಿ ಕೃಷ್ಣನ ರಾಜತಂತ್ರ, ವಿದುರನ ಆತಿಥ್ಯ, ಸಂಗ್ರಾಮದ ನಿರ್ಧಾರ ಇವು ಬಹು ಮುಖ್ಯವಾಗಿ ಕವಿಗನಿಸಿ ಈ ರೀತಿಯಾಗಿ ವ್ಯಕ್ತಪಡಿಸಿದ್ದಾನೆ:

ದೇವ ನಾರಾಯಣನು ಕಪಟದ
ಭಾವದಲಿ ಉದ್ಯೋಗ ಸಂಧಿಯ
ಠೀವಿ ಮಾಡಲು ಬಂದು ವಿದುರನ
ಮನೆಯ ಪಾಲುಂಡು
ಸಾಮದಲಿ ಕೌರವನೊಳೈದು ।
ಗ್ರಾಮ ಕೇಳಲು ಕೊಡದಿರಲು ಸಂ ।
ಗ್ರಾಮವೇ ನಿಜವೆಂದು ಬಗೆದು
ಉದ್ಯೋಗ ಪರ್ವದಲಿ ॥ ೫ ॥

ಅದೇ ರೀತಿಯಲ್ಲಿ ದ್ರೋಣಪರ್ವದಲ್ಲಿ ಅಭಿಮನ್ಯುವಿನ ಮರಣ. ಸೈಂಧವನ ವಧೆ, ದ್ರೋಣನ ಅವಸಾನ ಇವು ಮೂರು ಮಹತ್ವದ ಘಟನೆಗಳು. ಶಿವರಾಮಯ್ಯ ಈ ಮೂರು ಘಟನೆಗಳನ್ನು ನಮ್ಮ ಮನಸ್ಸಿನಲ್ಲಿ ಉಳಿಯುವಂತೆ ಪದ್ಯದಲ್ಲಿ ಅಳವಡಿಸಿದ್ದಾರೆ.

ಗುರುಗಳಿಗೆ ಪಟ್ಟಾಭಿಷೇಕವ ।
ನೆರದು ಮಾಡಲು ಕೌರವೇಂದ್ರನು
ಧುರಕೆ ಚಕ್ರವ್ಯೂಹ ರಚಿಸಲು
ಪಾರ್ಥ ನಂದನನು ॥
ತರಳತನದಲಿ ಪೊಕ್ಕು ಮಡಿದನು ।
ನರನು ಸೈಂಧವ ನೃಪನ ಶಿರ ಕ
ತ್ತರಿಸಿದನು ಕಲಿದ್ರೋಣ ಮಡಿದನು
ದ್ರೋಣಪರ್ವದಲಿ ॥

ಈ ರೀತಿಯಾಗಿ ಸುಲಲಿತವೂ ಸರಳವೂ ಸೊಗಸಾಗಿರುವ ಭಾರತ ಸಂಗ್ರಹವು ಓದುಗರಿಗೆ ಸಂತೋಷವನ್ನು ಕೊಡುತ್ತದೆ. ಮೈಸೂರಿನ ಕವಿಯೊಬ್ಬರು ರಾಮಾಯಣವನ್ನು ಇದೇ ರೀತಿ ರಚಿಸಿದ್ದಾರೆ. ಮಹಾಭಾರತದ ಕತೆಯನ್ನು ಐರೋಡಿ ಶಿವರಾಮಯ್ಯನವರಲ್ಲದೆ ಬೇರೆ ಯಾರೂ ಇಷ್ಟು ಸಂಕ್ಷಿಪ್ತವಾದ ಗಾತ್ರದಲ್ಲಿ ರಚಿಸಿದಂತಿಲ್ಲ. ಇದೊಂದು ಗಮನಾರ್ಹ ರಚನೆಯೆನ್ನಲಡ್ಡಿಯಿಲ್ಲ.

ಕೇಳಿಸಿದ ಜನಮೇಜಯಗೆ ಮುನಿ ।
ಲೋಲ ವೇದವ್ಯಾಸ ದೇವನು ।
ತಾಳಿಸಿದನವತಾರದಲಿ ಪಾಂಡವರ
ಕೌರವರ ॥
ಶ್ರೀ ಲತಾಂಗಿಯ ರಮಣ ಕೃಷ್ಣನು ।
ಪಾಲಿಸಿದ ಲಕ್ಷಾಲಯದಿ ಪಾಂ
ಚಾಲಿ ಪಾಣಿಗ್ರಹಣವಾದರು
ಆದಿಪರ್ವದಲಿ ॥ ೧ ॥

ರಾಜಸೂಯಾಧ್ವರವ ಮಾಡಲು ।
ರಾಜಪನು ಪಾಂಡುವಿನ ಪುತ್ರರ ।
ಜೂಜಿನಲಿ ಸೋಲಿಸುತ
ಪಾಂಚಾಲಿಯನು ಸಭೆಯೊಳಗೆ ॥
ರಾಜವದನೆಯ ಭಂಗಪಡಿಸಲು ।
ಮೂಜಗದ ಪತಿ ಲಕುಮಿಯರಸನು ।
ಆ ಜನಾರ್ದನನ ಕಾಯ್ದು ಕೊಂಡ
ಸಭಾಖ್ಯಪರ್ವದಲಿ ॥ ೨ ॥

ದೇಶವನು ಬಿಟ್ಟಡವಿಯಲಿ ವನ
ವಾಸದೊಳು ಪಾಂಡವರಿರಲು ದೂ ।
ರ್ವಾಸ ಮುನಿಪನು ಬಂದು ಗ್ರಾಸವ
ಬೇಡೆ ಧರ್ಮಜನ ॥
ಆ ಸಮಯದಲಿ ಕೃಷ್ಣಕೇಶವ ।
ಶೇಷದಳವನು ಕಂಡು ತಿಂದು ಮ ।
ಹೀಶ ಪಾರ್ಥನ ಪೊರೆದನಾರಣ್ಯಾಖ್ಯ
ಪರ್ವದಲಿ ॥ ೩ ॥

ಅರಸ ನೀ ಚಿಂತಿಸದಿರರಿಗಳ ।
ನರಿವೆನೆನುತಾ ದ್ರೌಣಿಯೈದಿ ಶಿ ।
ಬಿರದಿ ಮಲಗಿಹ ನಿಖಿಲ
ಪಾಂಚಾಲರನು ಸಂಹರಿಸಿ ॥
ಉರುತರಾಸ್ತ್ರದಿ ಪಾಂಡವರ ಸಂ ।
ಹರಿಪೆನೆನಲಾ ಪಾರ್ಥತಾ ಪ್ರತಿ ।
ಶರದಿ ಜೈಸಿದನವನ ಸೌಪ್ತಿಕವೆಂಬ
ಪರ್ವದಲಿ ॥ ೧೦ ॥

ಅಂಧಕನು ನಿಜಸೂನು ರಿಪುವಿವ
ನೆಂದು ಉಕ್ಕಿನ ಪ್ರತಿಮೆಯನು ಬಲ ।
ದಿಂದ ಮರ್ದಿಸಲತ್ತ ರಣದಲಿ
ಸಂದ ಭೂಮಿಪರಾ ॥
ಸುಂದರಿಯರಳುತಿರಲು ವಿಪ್ರರು
ಬಂದು ಮೃತರಿಗೆ ಮುಖ್ಯ ಬಂಧುಗ
ಳಿಂದ ಗೈಸಿದರಖಿಳ ಕರ್ಮವ
ಸ್ತ್ರೀಸುಪರ್ವದಲಿ ॥ ೧೧ ॥

ಅರಸ ಧರ್ಮಜ ಬಂದು ಭೀಷ್ಮಂ
ಗೆರಗಿ ಗುರುವರ ಮಿತ್ರ ನೃಪ ಸೋ
ದರರ ಬಂಧು ಜ್ಞಾತಿಗಳ
ಹರಣವನು ಹೋಗಾಡಿ ॥
ಧರೆಯನಾಳ್ವುದರಿಂದ ದೇಶಾಂ
ತರಕೆ ಪೋಗುವೆನೆನಲು ಕಥೆಗಳ
ನರುಹಿ ಸಂತಯಿಸಿದನು ಭೀಷ್ಮನು
ಶಾಂತಿಪರ್ವದಲಿ ॥ ೧೨ ॥

ಇಂತು ಧರ್ಮಜಗಖಿಳ ದಾನಗ ।
ಳಂತರಂಗವನರುಹಿ ಬಳಿಕಾ ।
ಶಾಂತನವನುಪದೇಶಿಸುತ್ತಾ
ಮೋಕ್ಷಧರ್ಮಗಳಾ ॥
ಸ್ವಾಂತದಲಿ ಹರಿಚರಣಯುಗಳವ
ನಾಂತು ಚಿಂತಿಸುತೈದಿದನು ಲೋ
ಕಾಂತರ ವನವನಾಗಳನುಶಾಸನದ
ಪರ್ವದಲಿ ॥ ೧೩ ॥

ತುರಗವನು ಸಿಂಗರಿಸಿ ಬಿಟ್ಟರು ।
ಧರಣಿರಾಯನ ಮೇಲೆ ಕಪ್ಪದ
ತೆರಿಗೆಯನು ಕೊಳ್ಳುತ್ತ ನಡೆದರು
ಶೂರ ವಿಕ್ರಮರು ॥
ಪರಿಪರಿಯ ವಸ್ತುಗಳ ದ್ರವ್ಯವ
ನಿರದೆ ಸಾಧಿಸಿ ತಂದು ಯಜ್ಞವ
ಬೆರಸಿ ಮಾಡಿದರಾಶ್ವಮೇಧಿಕವೆಂಬ
ಪರ್ವದಲಿ ॥ ೧೪ ॥

ಬಳಿಕ ಧೃತರಾಷ್ಟ್ರನು ವಿಷಾದದಿ ।
ಬಳಲಿ ವೈರಾಗ್ಯದಲಿ ರಾಜ್ಯವ ।
ನುಳಿದು ಕುಂತೀ ವಿದುರ
ಸಂಜಯರಿಂದ ಬಳಿಗೊಂಡು ॥
ಕಳಿದನೈ ವನವಾಸದೊಳು ತಪ
ದೊಳಗೆ ಚಿಂತಾಶೂನ್ಯಭಾವದೊ ।
ಳುಳಿದ ಜೀವಿತಕಾಲವಾಶ್ರಮ
ವಾಸಪರ್ವದಲಿ ॥ ೧೫ ॥

(೮ನೇ ಪುಟಕ್ಕೆ ಮುಂದುವರಿದಿದೆ)

"ಪ್ರಭಾತ"ದ ಕಳೆದ (ಅಗೋಸ್ತು ೧೫, ೧೯೭೬) ವಿಶೇಷಾಂಕದಲ್ಲಿ ರಾಷ್ಟ್ರಕವಿ ಗೋವಿಂದ ಪೈಯವರ ಗದ್ಯದ ವಿಶಿಷ್ಟ, ವಿಶುದ್ಧ ಶೈಲಿಯ ಸೊಬಗನ್ನೂ ಅದರಲ್ಲೇ ಕವಿಹೃದಯದ ಪರಿವರ್ತನೆಯನ್ನೂ ಮಾಡಿಸಿದ ಶ್ರೀ। ಶೇಖರ ಇಡ್ಯರವರು ಈ ದೀಪಾವಳಿ ಅಂಕದಲ್ಲಿ, ನಮ್ಮ ಜಿಲ್ಲೆಯ ಇನ್ನೋರ್ವ ವರಕವಿ ಹಾಗೂ ಪ್ರತಿಷ್ಠಿತ ಅಧ್ಯಾಪಕರಾಗಿದ್ದ ಐರೋಡಿ ಶಿವರಾಮಯ್ಯನವರು ಭಾಮಿನಿಷಟ್ಪದಿಯಲ್ಲಿ ರಚಿಸಿದ "ಭಾರತ ಸಂಗ್ರಹ"ದ ಕಡೆಗೆ ಲಕ್ಷ್ಯ ಸೆಳೆಯುತ್ತಾರೆ. ಕುಮಾರವ್ಯಾಸನ ಭಾರತದಿಂದ ಪ್ರೇರಿತರಾಗಿದ್ದ ಶಿವರಾಮಯ್ಯನವರು, ಇಪ್ಪತ್ತೆರಡು ಪದ್ಯಗಳಲ್ಲಿ ಮಹಾಭಾರತದ ಸಾರವನ್ನು ತಿಳಿಸಿ. ಕುಮಾರವ್ಯಾಸನ ಎರಡು ಪದ್ಯಗಳನ್ನೆತ್ತಿ ಕೊನೆಯಲ್ಲಿ ಶ್ರೀರಕ್ಷೆ ಅಥವಾ ಊರುಗೋಲಿನಂತೆ ನೆಟ್ಟು, ಆ ಮಹಾಕವಿಗೆ ಈ ಒಂದು ಪ್ರತ್ಯೇಕ, ನವೀನ ರೀತಿಯಲ್ಲಿ ಕಾಣಿಕೆಯಾಗಿ ಅರ್ಪಿಸಿದ್ದಾರೆ.

— ಸಂಪಾದಕ, ಪ್ರಭಾತ.

(೭ನೇ ಪುಟದಿಂದ)

ಕಲಿಯು ಬರಲೆಂದು ಯದುಕುಲ ।
ತಿಲಕ ಕೃಷ್ಣನು ಭಾವಿಕಾರ್ಯವ ।
ತಿಳಿದು ತಂತ್ರವನೆಸಗಿದನು
ಯಾದವರು ತಮ್ಮೊಳಗೆ ॥
ಕಲಹವನು ಮಾಡುತಲಿ ಮುಸಲದ ।
ಬಲದ ಘಾತದಿ ಮಡಿಯೆ ಹರಿಯಿಂ
ತಿಳಿಯು ಭಾರವ ಹಿಂಗಿ ಕಳೆದನು
ಮುಸಲ ಪರ್ವದಲಿ ॥ ೧೬ ॥

ವರುಷ ಮೂವತ್ತಾರು ರಾಜ್ಯವ ।
ಸ್ಥಿರದಿಯಾಳುತ್ತಿರಲು ಕಲಿಯುಗ
ಬರಲು ಧರ್ಮಜನುಳಿದು
ರಾಜ್ಯವ ನಾಕಪಥವಿಡಿದು ॥
ತೆರಳೆ ದಾರಿಯೊಳನುಜರೊಬ್ಬೊ
ಬ್ಬರೆ ಮಡಿಯಲಾ ಯಮನೊಡನೆ ಪಿಂ।
ತಿರುಗದೇರಿದನೈ ಮಹಾಪ್ರಸ್ಥಾನ
ಪರ್ವದಲಿ ॥ ೧೭ ॥

ಅರಸ ಕೇಳ್ ಸ್ವರ್ಗದೊಳು ಧರ್ಮಜ ।
ನರಸಿ ಭೀಮಾದಿಗಳ ಕಾಣದೆ
ಮರುಗತವರೆಲ್ಲೆಂದು ಕೇಳಲು
ನರಕದೊಳಗವರ ॥
ನಿರಿಕಿಸುತ ತಾನಿವರ ಬಿಡೆನೆಂ ।
ದೊರೆಯಲಾಕ್ಷಣ ಸ್ವರ್ಗದೊಳು ಸೋ।
ದರರ ಸುಖಿಸಿದ ಕಂಡು
ಸ್ವರ್ಗಾರೋಹ ಪರ್ವದಲಿ ॥ ೧೮ ॥

ಕೇಳು ಜನಮೇಜಯ ನೃಪತಿ ಸಿರಿ ।
ಲೋಲ ಕಥೆಯಿಂದನಾದರಿಸಿ ಆ
ಕರ್ಣಿಸಿದರೆ ಶತಯಾಗ
ಫಲವಹುದವರ ಲೋಕದಲಿ ॥
ಲೋಲಲೋಚನೆಯರಸ ಮೇಳದೆ ।
ವಾಳುವರು ಹದಿನಾಲ್ಕು ಲೋಕವ
ನಾಳುಗೆಲಸವ ಮಾಡುವರು
ತೆತ್ತೀಸಕೋಟಿಗಳು ॥ ೧೯ ॥

ಪುಣ್ಯಕತೆಯನು ಪೊಗಳ್ದ ಜನರಿಗೆ ।
ಗಣ್ಯದೈಶ್ವರ್ಯವನು ಹರಿಕಾ
ರುಣ್ಯದಲಿ ಕೊಟ್ಟಿಹಪರಂಗಳಲ್ಲೆದೆ
ಸಲಹುವನು ॥
ಪೆಣ್ಣ ತಲೆಗೇರಿಸಿ ಮೆರೆವ ಮು ।
ಕ್ಕಣ್ಣನಿಪ್ಪವನೀವನೀ ಲಾ
ವಣ್ಯಮಯ ಸತ್ಕೃತಿಯ ಕೊಂಡಾಡ
ದವರಾರೆಂದ ॥ ೨೦ ॥

ಸರಸಿಜೋದ್ಭವನರಸಿ ಭಾರತಿ ।
ಹರಿಯ ವಧು ಗೋವಿಂನಿಯ
ಸಭೆಯಲಿ ।
ಸುರಪನಾಸ್ಥಾನದಲಿ ದಿಗ್ಪನಿಯರ
ಹೊರೆಯೊಳಗೆ ॥
ವರವನಿತೆ ಶಚಿದೇವಿ ಪಾರ್ವತಿ ।
ಯರ ಸಮೀಪದಿ ರಂಭೆಯಿಂದಿರಲಿ ।
ವರಕಥಾಪೀಯೂಷ ಪಾನಗಳಿಂದ
ವೊಲವಿನಲಿ ॥ ೨೧ ॥

ವಿಪ್ರಜನರಾದರಿಸಿ ಕೇಳ ।
ಲ್ಕಪ್ಪುದೈ ಸಚ್ಚರಿತ ಸದ್ಗುಣ ।
ಸುಪ್ರತಿಷ್ಠಿತವಪ್ಪ ಪುತ್ರ,
ಕಳತ್ರ ಸಂಪದವು ॥
ಒಪ್ಪವೆನಿಸುವ ಶ್ರುತಿ ಸುಯೋಗ್ಯತೆ ।
ಕ್ಷಿಪ್ರದಲಿ ಕೈಸಾರುವುದು ತಾ ।
ವೊಪ್ಪುವರಲ್ಲೈ ಬ್ರಹ್ಮಸಭೆಯೊಳ
ಗೆದನಾ ಮುನಿಪ ॥ ೨೨ ॥

ಭವದುರಿತ ಹರವಟಿ ಹರಿನಾ ।
ಮವ ನೆನೆಯಲದು ಕಾಲಚಕ್ರದ ।
ಜವನ ಬೇನೆಯ ಜುಣುಗಿ
ಜಾರುವರಖಿಳ ಮಾನವರು ॥
ಕವಿಕುಮಾರವ್ಯಾಸ ಸೂಕ್ತದ
ಸವೆಯದಮೃತವನೊಲಿದು ಸು ।
ಶ್ರವಣದಲಿ ಕುಡಿಕುಡಿದು ಪದವಿಯ
ಪಡೆವುದೀ ಲೋಕ ॥ ೨೩ ॥

ವೇದ ಪಾರಾಯಣದ ಫಲಗಂ ।
ಗಾದಿ ತೀರ್ಥಸ್ನಾನ ಫಲಕೃ ।
ಚ್ಛಾದಿತಪಸಿನ ಫಲವು
ಜ್ಯೋತಿಷ್ಟೋಮ ಯಾಗಫಲ ॥
ಮೇದಿನಿಯನೊಲಿದಿತ್ತ ಫಲವ ।
ಸ್ವಾದಿ ಕನ್ಯಾದಾನ ಫಲಬಹು ।
ದಾದರಿಸಿ ಭಾರತದೊಳೊಂದಕ್ಷರವ
ಕೇಳ್ದರಿಗೆ ॥ ೨೪ ॥

ಹೋರಿ ಮತ್ತು ಸೊಳ್ಳೆ

ಜೀವನದಲ್ಲಿ ಯಾವುದನ್ನೂ ಆಶಿಸಲೂ ಬೇಡಿ, ತ್ಯಜಿಸಲೂ ಬೇಡಿ. ಬಂದದ್ದನ್ನು ಸ್ವೀಕರಿಸಿ. ಯಾವುದರ ಪ್ರಭಾವಕ್ಕೂ ಬೀಳದೇ ಇರುವುದೇ ಸ್ವಾತಂತ್ರ್ಯ. ಸುಮ್ಮನೇ ಸಹಿಸುವುದು ಮಾತ್ರವಲ್ಲ, ನಾವು ನಿಸ್ಸಂಗರಾಗಿರಬೇಕು. ನೀವು ಆ ಎತ್ತಿನ ಕಥೆಯನ್ನು ಜ್ಞಾಪಿಸಿಕೊಳ್ಳಿ. ಒಂದು ಸೊಳ್ಳೆ ಬಹಳ ಹೊತ್ತು ಒಂದು ಎತ್ತಿನ ಕೊಂಬಿನ ಮೇಲೆ ಕುಳಿತುಕೊಂಡಿತು. ಆ ಮೇಲೆ ಸೊಳ್ಳೆಗೆ ಪಶ್ಚಾತ್ತಾಪವಾಯಿತು. "ಏನು ಹೋರಿರಾಯರೇ, ನಾನು ತುಂಬಾ ಹೊತ್ತು ನಿಮ್ಮ ಕೊಂಬಿನ ಮೇಲೆ ಕುಳಿತುಬಿಟ್ಟೆ! ಇದರಿಂದ ನಿಮಗೆ ತೊಂದರೆಯಾಗಿರಬೇಕು. ನಾನು ಇದಕ್ಕಾಗಿ ಕ್ಷಮೆಯನ್ನು ಬೇಡುತ್ತೇನೆ. ನಾನು ಇನ್ನು ಮೇಲೆ ಹೊರಟು ಹೋಗುವೆನು"—ಎಂದಿತು ಸೊಳ್ಳೆ. ಅದಕ್ಕೆ ಹೋರಿಯು, "ಓ, ಇದರಿಂದ ನನಗೇನೂ ತೊಂದರೆಯಾಗಲಿಲ್ಲ. ನೀನು ಬೇಕಾದರೆ ನಿನ್ನ ಬಳಗವನ್ನೆಲ್ಲಾ ಕರೆದುಕೊಂಡು ಬಂದು ನನ್ನ ಕೊಂಬಿನ ಮೇಲೆ ವಾಸಮಾಡು. ಇದರಿಂದ ನೀನು ನನಗೆ ಏನು ಮಾಡಬಲ್ಲೆ?" ಎಂದಿತು.

—ಸ್ವಾಮಿ ವಿವೇಕಾನಂದ.



ಶ್ರೀ ರಾಮಕೃಷ್ಣಪರಮಹಂಸರು ಮತ್ತು ಬ್ರಾಹ್ಮಸಮಾಜ

ಬ್ರಾಹ್ಮಸಮಾಜದ ಎರಡು ನಿಮಿಷಗಳ ಮೌನಪ್ರಾರ್ಥನೆಯಲ್ಲಿ ಪರಮಹಂಸರು ಕಂಡ ಚಿತ್ರ.

ಭಾರತವರ್ಷೀಯ ಬ್ರಾಹ್ಮಸಮಾಜದ ಆಚಾರ್ಯರಾದ ಕೇಶವಚಂದ್ರರು ಶ್ರೀ ರಾಮಕೃಷ್ಣರನ್ನು ಭೇಟಿಯಾದ ನಂತರ, ರಾಮಕೃಷ್ಣರ ಸಂಪರ್ಕದಿಂದ ಬಹಳವಾಗಿ ಪ್ರಭಾವಿತರಾಗಿದ್ದರು. ಮೊದಲ ದರ್ಶನವಾದಂದಿನಿಂದಲೇ ಪರಮಹಂಸರ ಕಡೆಗೆ ವಿಶೇಷವಾಗಿ ಆಕೃಷ್ಟರಾಗಿದ್ದರು. ಪಾಶ್ಚಾತ್ಯ ಭಾವದಲ್ಲಿ ಮಗ್ನರಾಗಿದ್ದರೂ, ಅವರ ಹೃದಯವು ಯಥಾರ್ಥವಾದ ಈಶ್ವರಭಕ್ತಿಯಿಂದ ತುಂಬಿತ್ತು. ಪರಮಹಂಸರ ಪುಣ್ಯದರ್ಶನದಿಂದಲೂ ಅಮೃತಮಯವಾದ ಮಾತಿನಿಂದಲೂ ಅವರು ತಮ್ಮ ಜೀವನದಲ್ಲಿ ಕಂಡಷ್ಟು ಹೊಸ ಬೆಳಕನ್ನು ಮುಕ್ತಕಂಠದಿಂದ ಜನಸಾಮಾನ್ಯರಿಗೆ ತಿಳಿಸಿ, ಅವರೆಲ್ಲರೂ ತಮ್ಮಂತೆ ತೃಪ್ತಿಯನ್ನೂ ಆನಂದವನ್ನೂ ಪಡೆಯುವಂತೆ ಮಾಡಲು ಉತ್ಸಾಹದಿಂದ ಅವರನ್ನು ಆಹ್ವಾನಿಸುತ್ತಿದ್ದರು.

ಶ್ರೀ ರಾಮಕೃಷ್ಣರೂ, ಬ್ರಾಹ್ಮಸಮಾಜದ ಮುಖಂಡರ ಆಧ್ಯಾತ್ಮಿಕ ಹಂಬಲ, ಈಶ್ವರಾನುರಾಗ—ಇವುಗಳ ದರ್ಶನದಿಂದ ಆನಂದಿತರಾಗುತ್ತಿದ್ದರು. ಅವರೊಂದಿಗೆ ಹರಿಕಥೆ ಕೀರ್ತನಾದಿಗಳಲ್ಲಿ ಪರಮಹಂಸರು ಬಹಳ ಆನಂದಾನುಭವನ್ನು ಪಡೆಯುತ್ತಿದ್ದರು. ಅದಕ್ಕಾಗಿ ಅವರು ತಾವಾಗಿಯೇ ಪ್ರಾಯಶಃ ನಡುನಡುವೆ ಕೇಶವಚಂದ್ರರ ಮನೆಗೆ ಹೋಗುತ್ತಿದ್ದರು. ಈ ರೀತಿಯಾಗಿ ಆ ಸಮಾಜದ ಬಹು ಜಿಜ್ಞಾಸು ವ್ಯಕ್ತಿಗಳೊಡನೆ ಅವರು ಕ್ರಮವಾಗಿ ಒಂದು ಅಪೂರ್ವವೂ ಅತಿನಿಕಟವೂ ಆದ ಸಂಬಂಧವನ್ನು ಬೆಳೆಸಿದರು.

ಆದರೆ, ಪಾಶ್ಚಾತ್ಯಭಾವದಲ್ಲಿ ಮಗ್ನರಾದ ಕೇಶವಚಂದ್ರರೂ ಅವರ ಜೊತೆಗಾರರೂ ತಮ್ಮ ಎಲ್ಲ ಭಾವಗಳ ಮತ್ತು ಉಪದೇಶಗಳ ಅರ್ಥವನ್ನು ಯಥಾರ್ಥವಾಗಿ ತಿಳಿಯಲಾರರೆಂದೂ, ತಿಳಿಯತಕ್ಕ ಭಾವಗಳು ಕೂಡ ಪೂರ್ತಿಯಾಗಿ ಅವರಿಗೆ ರುಚಿಸಲಾರವೆಂದೂ ಠಾಕೂರರಿಗೆ ಹಿಂದಿನಿಂದಲೇ ಮನದಟ್ಟಾಗಿತ್ತು. ಆದ್ದರಿಂದಲೇ ಅವರಿಗೆ ಉಪದೇಶಮಾಡುವಾಗ, ಅವರು ಯಾವ ಮಾತುಕಥೆಯನ್ನೇ ಆಗಲಿ, ಹೇಳಿದ ಮೇಲೆ, ಆ ವಿಷಯವನ್ನು ಸ್ಮರಣೆಗೆ ತಂದು, "ನಾನು ಹೇಳುವುದನ್ನು ಹೇಳಿಯಾಯಿತು. ನೀವು 'ತಲೆ ಬಾಲಗಳನ್ನು' ಬಿಟ್ಟು ಅದನ್ನು ಅಂಗೀಕರಿಸಿರಿ"–ಎಂದು ಪ್ರಾಯಶಃ ಹೇಳುತ್ತಿದ್ದರು. ಅದೂ ಅಲ್ಲದೆ, ಬ್ರಾಹ್ಮಸಮಾಜಕ್ಕೆ ಸೇರಿದ ಅನೇಕ ವ್ಯಕ್ತಿಗಳಿಗೆ ಸಾಮಾಜಿಕ ಸುಧಾರಣೆ ಭೋಗಕಾಮನೆಯ ತೃಪ್ತಿ —ಇವುಗಳೇ ಜೀವನೋದ್ದೇಶವೆಂದು ತಿಳಿಯಲು ಅವರಿಗೆ ವಿಳಂಬವಾಗಲಿಲ್ಲ. ಆ ವಿಷಯವನ್ನು ಪರಮಹಂಸರು ಅನೇಕಾವರ್ತಿ ವಿನೋದರೂಪವಾಗಿ ಕೂಡ ವ್ಯಕ್ತಪಡಿಸುತ್ತಿದ್ದರು. ಅವರು ಒಮ್ಮೆ ಹೀಗಂ[illegible]

"ಕೇಶವನ ಸಮಾಜಕ್ಕೆ ಹೋಗಿದ್ದೆ. ಅವರ ಉಪಾಸನೆಯನ್ನು ಕಂಡೆ. ಬಹಳ ಹೊತ್ತು ಈಶ್ವರನ ವಿಭೂತಿಗಳ ವಿಷಯವಾಗಿ ಹೇಳಿದ ಮೇಲೆ ಪುರೋಹಿತನು, 'ನಾವೀಗ ಈಶ್ವರನ ಧ್ಯಾನಮಾಡೋಣ' ಎಂದನು. ಬಹಳಹೊತ್ತು ಧ್ಯಾನಮಾಡುವರೆಂದು ಭಾವಿಸಿದೆ. ಆಶ್ಚರ್ಯದ ವಿಷಯ! ಎರಡು ನಿಮಿಷ ಕಣ್ಣುಮುಚ್ಚುವುದರಲ್ಲಿಯೇ ಧ್ಯಾನ ಮುಗಿಯಿತು! ಈ ರೀತಿ ಧ್ಯಾನಮಾಡಿ ಈಶ್ವರನನ್ನು ಪಡೆಯುವುದುಂಟೇ? ಅವರು ಧ್ಯಾನಮಾಡುತ್ತಿದ್ದಾಗ, ಅವರೆಲ್ಲರ ಮುಖಗಳನ್ನು ನೋಡಿದೆ. ಅನಂತರ ಕೇಶವನಿಗೆ (ಕೇಶವಚಂದ್ರ ಸೇನರಿಗೆ) ಈ ರೀತಿ ಹೇಳಿದೆ: 'ನಿಮ್ಮ ಅನೇಕರ ಧ್ಯಾನವನ್ನು ಕಂಡೆ; ನನ್ನ ಮನಸ್ಸಿಗೆ ಏನು ತೋಚಿತೆಂದು ಗೊತ್ತೇ? ದಕ್ಷಿಣೇಶ್ವರದಲ್ಲಿ ಝಾವುಕ ಮರಗಳ ಬುಡದಲ್ಲಿ ಆಗಾಗ ಕಪಿಗಳು ಸುಮ್ಮನೆ ಕುಳಿತುಕೊಳ್ಳುತ್ತವೆ. ಆಗ ಅವುಗಳು ಶಾಂತಿಸಂಪನ್ನವಾಗಿ, ಏನೊಂದೂ ಚಿಂತಿಸದಿರುವುವೆಂದೂ ಭಾವಿಸುತ್ತೇವೆ. ಆದರೆ, ಹಾಗಲ್ಲ, ಆಗ ಅವುಗಳು ಅಲ್ಲಿ ಕುಳಿತು ಯಾವ ಗೃಹಸ್ಥರ ಚಪ್ಪರದಲ್ಲಿ ಸೋರೆಕಾಯಿ, ಕುಂಬಳಕಾಯಿ ಇವೆ? ಎಂದು ಯೋಚಿಸುತ್ತಿವೆ. ಸ್ವಲ್ಪ ಹೊತ್ತಿನ ಮೇಲೆಯೇ ಲಾಗಹಾಕುತ್ತ ಹಾರಿ ಅಲ್ಲಿಗೆ ಹೋಗಿ ಅವುಗಳನ್ನು ಕಿತ್ತು ತಿಂದು ಹೊಟ್ಟೆ ತುಂಬಿಸಿಕೊಳ್ಳುತ್ತವೆ. ಅನೇಕರ ಧ್ಯಾನವನ್ನು ನಾನು ಕಂಡೆ. ಅದೂ ಸರಿಯಾಗಿ ಹಾಗೆಯೇ ಇತ್ತು!"

—ಇದನ್ನು ಕೇಳಿ ಎಲ್ಲರೂ ನಕ್ಕರು.

●

ಇನ್ನೊಂದು ದಿನ ಶ್ರೀ ರಾಮಕೃಷ್ಣ ಪರಮಹಂಸರು ಉಪಾಸನೆಯ ವಿಷಯವಾಗಿ ಕೇಶವಚಂದ್ರರೇ ಮೊದಲಾದ ಬ್ರಾಹ್ಮಭಕ್ತರಿಗೆ ಈ ರೀತಿ ಹೇಳಿದರು. "ನೀವು ಈಶ್ವರನ ವಿಭೂತಿಯ ವಿಷಯವಾಗಿ ಅಷ್ಟೊಂದು ಹೊಗಳುವುದೇತಕ್ಕೆ? ಮಕ್ಕಳು ತಂದೆಯ ಮುಂದೆ ಕುಳಿತು 'ನಮ್ಮ ತಂದೆಗೆ ಎಷ್ಟು ಮನೆಗಳಿವೆ, ಎಷ್ಟು ಹಸುಗಳಿವೆ, ಎಷ್ಟು ತೋಟಗಳಿವೆ' ಎಂದು ಹೊಗಳುತ್ತಾರೆಯೇ? ಅಥವಾ 'ತಂದೆಯು ನಮ್ಮವನೇ ಎಂದೂ, ನಮ್ಮನ್ನು ಬಹಳವಾಗಿ ಪ್ರೀತಿಸುತ್ತಾನೆಂದೂ' ಅವರು ಮುಗ್ಧರಾಗುತ್ತಾರಲ್ಲವೇ? ತಂದೆಯಾದವನು ತನ್ನ ಮಕ್ಕಳಿಗೆ ಊಟ ಬಟ್ಟೆಗಳನ್ನು [illegible]ತ್ತಾನೆ, ಅವರ ಸುಖವನ್ನೇ ಬಯಸುತ್ತಾನೆ. ಅದರಿಂದಾದುದೇನು? ನಾವೆಲ್ಲರೂ ಈಶ್ವರನ ಮಕ್ಕಳು. ಆದ್ದರಿಂದ ನಮಗೆ ಆತನು ಹಾಗೆ ಮಾಡುವುದರಲ್ಲಿ ಆಶ್ಚರ್ಯವೇನಿದೆ? ಯಥಾರ್ಥವಾದ ಭಕ್ತನು ಆ ರೀತಿಯ ವಿಚಾರವಾ[illegible]ನ್ನು ಮಾಡದೆ ಆತನನ್ನು ತನ್ನವನನ್ನಾಗಿ [illegible]ಡಿಕೊಂಡು, 'ನೀನು ಪ್ರಾರ್ಥನೆಯನ್ನು ಪೂರ್ಣಗೊಳಿಸಲೇ ಬೇಕು. ನನಗೆ ದರ್ಶನವನ್ನು ಕೊಡಲೇ ಬೇಕು' ಎಂದು ಮಕ್ಕಳಂತೆ ಆತನನ್ನು ಬೇಡಿಕೊಳ್ಳುತ್ತಾನೆ ಮತ್ತು ಒತ್ತಾಯಪಡಿಸುತ್ತಾನೆ. ಈಶ್ವರನ [illegible]ತಿಗಳನ್ನು ವಿಶೇಷವಾಗಿ ಭಾವಿಸಿದರೆ ಆತನನ್ನು ತನ್ನವನನ್ನಾಗಿ ಮಾಡಲಾಗುವುದಿಲ್ಲ, ಆತನಿಗೆ ಒತ್ತಾಯಪಡಿಸಲಾಗುವುದಿಲ್ಲ. ಆತನು ಎಷ್ಟು ದೊಡ್ಡವನು, ನಮ್ಮಿಂದ ಎಷ್ಟು ದೂರವಿದ್ದಾನೆ ಎಂಬ ಭಾವಗಳು ನಮ್ಮಲ್ಲಿ ಹುಟ್ಟುತ್ತವೆ. ಆತನನ್ನು ತನ್ನವನೆಂದು ಭಾವಿಸು; ಹಾಗಾದರೆ ಆತನನ್ನು ಪಡೆಯಬಹುದು."

——

ಪ್ರಭಾತ, ದೀಪಾವಳಿ ಅಂಕ, ೧೯೭೬

ಆಹಾರ, ವಿಹಾರ, ವಿಚಾರ ವಿಶುದ್ಧವಾಗಿರಲಿ

—ಗಿರಿಜಾತನಯ.

"ಮನುಷ್ಯನು ಸಾಯುವುದಿಲ್ಲ – ಆತ್ಮಹತ್ಯಮಾಡಿಕೊಳ್ಳುತ್ತಾನೆ" – ಎಂದು ಹಿಂದೊಮ್ಮೆ ಪ್ರಾಜ್ಞರೊಬ್ಬರು ವ್ಯಂಗ್ಯವಾಗಿ ಹೇಳಿದ್ದರು. ತಾತ್ಪರ್ಯವಿಷ್ಟೆ: ಕಾಯಾ, ವಾಚಾ, ಮನಸಾ, ಮನುಷ್ಯನು ಪರಿಶುದ್ಧನಾಗಿದ್ದರೆ ದೀರ್ಘಾಯುವಾಗಿ ಬಾಳುವನು.

ಚೊಕ್ಕಟವಾದ ಜೀವನ ನಡೆಸುವವನು ಬಹು ಮಾನ್ಯನಾಗುವನು, ಇತರರಿಗೆ ಮಾರ್ಗದರ್ಶಕನಾಗುವನು.

ಯಾವುದನ್ನೂ ಅಲಕ್ಷಿಸದೆ, ಪ್ರತಿಯೊಂದು ವಿಷಯದಲ್ಲಿ ಹಿತ ಮಿತವಾಗಿ ನಡೆದುಕೊಳ್ಳುವುದರಿಂದಲೇ ಕ್ಷೇಮಸಾಧನೆಯು ಸಾಧ್ಯ. ಅದಕ್ಕಾಗಿಯೇ ಜ್ಞಾನಿಗಳು "ಶರೀರಮಾದ್ಯಂ ಖಲು ಧರ್ಮಸಾಧನಂ" ಎಂದು ಸಾರಿದರು. ಅದನ್ನೇ ದಾಸವರೇಣ್ಯ ಪುರಂದರು "ಮಾನವಾ ಜನ್ಮ ದೊಡ್ಡದು। ಇದರ ಹಾನಿಮಾಡಲು ಬ್ಯಾಡಿ ಹುಚ್ಚಪ್ಪಗಳಿರಾ" ಎಂದು ಕನಿಕರದಿಂದ ಹಾಡಿ ಎಚ್ಚರಿಸಿದರು. ನಮ್ಮ ಸಾಂಸ್ಕೃತಿಕ ಪ್ರಮಾಣ ಗ್ರಂಥಗಳೂ ಸಾರುವ ಈ ಎಚ್ಚರಿಕೆಯನ್ನು ಜ್ಞಾನಿಗಳು ಆಗಾಗ್ಗೆ ಲೋಕಕ್ಕೆ ನೆನಪುಮಾಡಿಕೊಡುತ್ತಲೇ ಇದ್ದಾರೆ.

ಆರೋಗ್ಯ ಸೂತ್ರಗಳ ಕೂಲಂಕಷ ಜ್ಞಾನವು ಅಧಿಕಸಂಖ್ಯಾಕರಿಗೆ ಲಭಿಸಲಾರದು. ಆದರೆ, ಆಹಾರ–ವಿಹಾರಗಳ, ಆರೋಗ್ಯ–ನಿಯಮಗಳ ಸಾಮಾನ್ಯ ಅರಿವಾದರೂ ಪ್ರತಿಯೊಬ್ಬನಿಗೆ ಇರುತ್ತಿದ್ದರೆ,– ಅಂಥ ತಿಳಿವು ಅವರಿಗೆ ಲಭ್ಯವಾಗುವಂತೆ ಮಾಡಿದರೆ – ಮನುಷ್ಯನು ಅನೇಕ ತರದ ವ್ಯಾಧಿಗಳು ಬಾರದಂತೆ ತಡೆದುಕೊಳ್ಳಲು ಸಾಧ್ಯವಿದೆ.

ಯಾವ "ಆಯುರ್ವೇದ"ವನ್ನು ಬಹುಸಂಖ್ಯಾಕರು ಮಾನ್ಯಮಾಡುತ್ತಬಂದರೋ, ಆ ಆಯುರ್ವೇದವೆಂಬುದು "ಬದುಕಿನ ವಿಜ್ಞಾನ (ಅಥವಾ "Science of Life") ಎಂದೇ ದೇವಧನ್ವಂತರಿಯಿಂದ ತೊಡಗಿ ಮುಂದೆ ಕಾಲಕಾಲಕ್ಕೆ ಸಾವಿರಾರು ಮಹಾನ್ ಪಂಡಿತರು ವಿವರಿಸುತ್ತ ಬಂದಿದ್ದಾರೆ. ದೇಶ, ಭಾಷೆ, ಚಿಕಿತ್ಸಾಪದ್ಧತಿ–ಹಲವು ಇರಬಹುದು, ಆದರೆ ಆರೋಗ್ಯ ಸೂತ್ರಗಳ ಮೂಲ ಸತ್ಯ, ಪ್ರಧಾನ ತತ್ತ್ವ – ಒಂದೇ: ಶುಚಿಯಾದ ಜೀವನ ಮತ್ತು ಶುಚಿಯಾದ ಅಂತರ್ಯ.

ಮನುಷ್ಯನಾಗಿ ಜನ್ಮಹೊಂದಿದ ಮೇಲೆ, ಪ್ರಾಪಂಚಿಕ ಕ್ಷೇತ್ರದಲ್ಲಾಗಲೀ ಆಧ್ಯಾತ್ಮಿಕ ಕ್ಷೇತ್ರದಲ್ಲಾಗಲೀ, ಯಾವ ಸಾಧನೆಗೂ ದೇಹರಕ್ಷಣೆ ಆದ್ಯಕರ್ತವ್ಯ, ಅತ್ಯವಶ್ಯ. ಜಡದೇಹವು ಪಂಚಭೂತಗಳ ಸಂಘಟನೆ. ಈ ದೇಹವೆಂಬ ಮಂದಿರದೊಳಗೆ ಅಧಿಷ್ಠಾನಗೊಂಡ ಆತ್ಮವು ದೇವರಾಗಿ ವ್ಯಾಪಿಸಿದ್ದು, ಅದ್ವಿತೀಯ ಅತ್ಯದ್ಭುತ ಅಪ್ರಮೇಯವಾದ ಮನಸ್ಸಿನ ಮೂಲಕ ಮನುಷ್ಯನನ್ನು ಕರ್ಮಪ್ರವರ್ತನೆಗೆ ತೊಡಗಿಸುತ್ತಾನೆ.

ದೃಢವಾದ ದೇಹದಲ್ಲಿ ದುರ್ಬಲ ಮನಸ್ಸು ಇರುವುದಕ್ಕಿಂತ ದುರ್ಬಲ ದೇಹದಲ್ಲಿ ಪ್ರಬಲಶಕ್ತಿಯ ಮನಸ್ಸಿರುವುದು ಮೇಲು. ಆದರೆ, ದೈ–ಮನಸ್ಸು ಎರಡೂ ಶಕ್ತಿಯುತವಾಗಿದ್ದರೆ, ಆ ಸಂಯುಕ್ತ ಶಕ್ತಿಗೆ ಸಮಾನವಾದ ಶಕ್ತಿ ಮತ್ತೊಂದಿಲ್ಲ. ಆ ಶಕ್ತಿಯ ಉಪಯೋಗವು ಲೋಕಕ್ಷೇಮಕ್ಕಾಗಿ ವ್ಯಯವಾಗುತ್ತಿದ್ದರೆ–ಅದಕ್ಕೆ ಸಮಾನವಾದ ಸಂಪತ್ತು ಇನ್ನೊಂದಿಲ್ಲ.

ದೇಹದ ಕ್ರಿಯೆಗೂ ಮನಸ್ಸಿನ ಪ್ರಚೋದನೆಗೂ ನಾವು ಸೇವಿಸುವ ಆಹಾರವು ಮುಖ್ಯವಾಗಿರುತ್ತದೆ. ಸಾತ್ವಿಕ, ರಾಜಸ, ತಾಮಸ ಆಹಾರಗಳ ಗುಣ–ದೋಷಗಳಿಗೆ ಅನುಸರಿಸಿ ದೇಹ ಮತ್ತು ಮನಸ್ಸಿನ ಮೇಲೆ ಪರಿಣಾಮವಾಗುವುದು. ಸಾತ್ವಿಕ ಆಹಾರವು ಶಾಂತ ಸುಸ್ಥಿತಿಯುಂಟಾಗಲು ನೆರವಾಗುತ್ತದೆ; ರಾಜಸ ಆಹಾರವು ಭೋಗಾಪೇಕ್ಷೆ ಮತ್ತು ತಾಮಸ ಆಹಾರವು ಕೋಪ ತಾಪ ಕ್ಷೋಭೆಗಳಿಗೆ ಪ್ರೇರಕವಾಗುತ್ತದೆ. ಸಾತ್ವಿಕ ಆಹಾರವಾದರೂ ಹಿತಮಿತವೂ, ತಕ್ಕಕಾಲದಲ್ಲಿ ಸೇವಿಸತಕ್ಕುದೂ ಮುಖ್ಯ, ಇಲ್ಲದಿದ್ದರೆ. ದೇಹ – ಮನಸ್ಸುಗಳೆರಡರ ವಿಕೃತಿಗೆ ಕಾರಣವಾಗುವುದು.

ಪ್ರಕೃತಿನಿಯಮಕ್ಕೆ ವಿರುದ್ಧವಾಗಿ ನಡೆಯುವುದೇ ರೋಗಕ್ಕೆ ಮೂಲ ಕಾರಣ. ದೇಹಧಾರಣೆಯ ವಿಕೃತಿಹೊಂದಿರುವ ಸ್ಥಿತಿಯನ್ನು ಯಥಾಸ್ಥಿತಿಗೆ ತರುವುದೇ ರೋಗ ಶಮನ ಅಥವಾ ಔಷಧೋಪಚಾರ.

ಮಾಂಸಾಹಾರ ಮತ್ತು ಮದ್ಯಪಾನದ ಚಟವು ದಿನೇ ದಿನೇ ವೇಗವಾಗಿ ಹರಡುತಿದ್ದು, ಅದು ಅವಶ್ಯವೂ ಅನಪಾಯಕರವೂ ಎನ್ನುವ ವಾದವು ಬಲಗೊಳ್ಳುತ್ತಿದೆ. ಇದರ ಪರಿಣಾಮವಾಗಿ ಇಷ್ಟರೊಳಗೇ ಸಾಕಷ್ಟು ಅನಾಹುತವಾಗಿದೆ. ತೋರಿಕೆಗೆ ನ್ಯಾಯದ ಚೌಕಟ್ಟಿನೊಳಗೇ ಇದ್ದರೆ ಒಬ್ಬನು ಯಾವ ವಿಧಾನದಿಂದಾದರೂ ಗಳಿಸಬಹುದು, ಅನುಭೋಗಿಸಬಹುದು ಎಂಬ ಹೊಸ ಧರ್ಮವೊಂದು ರೂಪುಗೊಳ್ಳುತ್ತಿದೆ–ಅಥವಾ ಅತಿ ಸಣ್ಣಪ್ರಮಾಣದಲ್ಲಿ ಇದ್ದಿರಬಹುದಾದ ಇಂಥ ವರ್ತನೆಯು ಶೀಘ್ರಾತಿಶೀಘ್ರದಲ್ಲೆಂಬಂತೆ ವಿಸ್ತರಿಸುತ್ತಿದೆ. ಇಂಥ ಕಾಲದಲ್ಲಿ ಉನ್ನತ ವಿಚಾರಗಳನ್ನು ಪ್ರಾಜ್ಞರು ಜನತೆಯಲ್ಲಿ ಮೂಡಿಸಲೇ ಬೇಕಾಗಿದೆ. ಶಾಖಾಹಾರವು ಜಗತ್ತಿನ ಶ್ರೇಷ್ಠ ಆಹಾರವಾಗಿದೆ. ಸಹೋದರಭಾವ, ದಯೆ, ಕ್ಷಮೆ, ತ್ಯಾಗ, ಸೇವೆಗಳು ಜನತಾಸೇವೆಯ ಉತ್ತಮ ವಿಧಾನಗಳಾಗಿವೆ.

ಮಾನವಜೀವಿಯ ಕ್ರಮಬದ್ಧ ಬೆಳವಣಿಗೆಯು ಪ್ರಥಮತಃ ಶುದ್ಧ ನೀರು, ಶುದ್ಧ ಗಾಳಿ, ಬೆಳಕುಗಳಿಂದ ಆರಂಭವಾಗುತ್ತದೆ. ಚೊಕ್ಕಟವಾದ ವಸನ, ಅಕಲಂಕ ಅಶನ, ಸ್ವಚ್ಛ ವಸತಿಗಳಿಂದ ಬಲಗೊಳ್ಳುತ್ತದೆ. ನ್ಯಾಯಬದ್ಧ ದುಡಿಮೆಯಿಂದ, ಕ್ರಮವಾದ ಕಾಯಕದಿಂದ ಸಮೃದ್ಧವಾಗುತ್ತದೆ. ಅಬಲರ ಸೇವೆ, ಕಷ್ಟಕಾರ್ಪಣ್ಯಗಳಲ್ಲಿರುವವರಿಗೆ ನೆರವು, ದೀನದಲಿತರ ಉದ್ಧಾರ–ಇವುಗಳಿಂದ ಸಾರ್ಥಕವೆನಿಸುತ್ತದೆ.

ಜೀವನದ ನೈಜಮೌಲ್ಯವನ್ನು ಮರೆತು, ಧನಸಂಪಾದನೆಯೊಂದನ್ನೇ ಪ್ರಧಾನ ಗುರಿಯಾಗಿಟ್ಟುಕೊಂಡು, ಮಿತಿಮೀರಿದ ಕ್ರಮತಪ್ಪಿದ ಆಹಾರ, ವಿಷಯಲೋಲುಪತೆ, ವಿಪರೀತವೆನಿಸುವ ದೇಹಶ್ರಮ. ಧನ ಮತ್ತು ಭೋಗಾಪೇಕ್ಷೆಯಿಂದ ಹಗಲು-ರಾತ್ರಿಗಳ ತಾರತಮ್ಯದ ಅಲಕ್ಷ್ಯ—ಇವು "ಹಗಲಿನ ಜೀವನ" ಮತ್ತು "ನಿಶಾಜೀವನ" ಎಂಬ ಎರಡು ತರದ ಜೀವನಗಳನ್ನು ರೂಢಿಗೆ ತಂದುಬಿಟ್ಟಿದೆ. ನಿಶಾಜೀವನವೇ ನರಕಾಸುರ. ಅವನ ವಧೆಯೇ ದೀಪಾವಳಿಯ ನಿಜವಾದ ಅರ್ಥ. ಈ ವಿಚಾರಧಾರೆಗೆ ಬೆಳಕುಹಿಡಿಯಿರಿ ಎಂದು ಕೂಗಿ ಸಾರಲು ನಾವು ಸಾಂಕೇತಿಕವಾಗಿ ದೀಪ ಹಚ್ಚುತ್ತೇವೆ.

ಬಾಲ್ಯವು ಬುದ್ಧಿ ಮೂಡುವ ಕಾಲ. ಯೌವನವು ದೇಹಬಲ ತುಂಬಿ ಬರುವ ಕಾಲ. ತಿಳಿವು ಇಲ್ಲದ ಬಾಲ್ಯ ಮತ್ತು ದೇಹಶಕ್ತಿಯ ಕಾವಿನಿಂದ 'ಎಲ್ಲವೂ ನಾನು–ನನ್ನದೆಲ್ಲವೂ ನ್ಯಾಯ–ನಾನು ಅಸಮಾನ–ನಾನೇ ಜ್ಞಾನಿ" ಎಂದು ಭ್ರಮಿಸುವ ಅಂಧಕಾರದಲ್ಲಿರುವ ದುಡುಕುವ ಯೌವನ—ಇವೆರಡೂ ಮನುಷ್ಯನ ಭವಿಷ್ಯವನ್ನು ಒಳಿತಕ್ಕೆ ಅಥವಾ ಕೆಡುಕಿಗೆ ರೂಪಿಸುವ ಕಾಲಗಳು. ಬಾಲ್ಯದಿಂದಲೇ ಮನುಷ್ಯನಿಗೆ ಸದ್ಧರ್ಮದ ಜ್ಞಾನವನ್ನು ಉಚಿತರೀತಿಯಲ್ಲಿ ಕೊಡುವುದರಿಂದ, ಬೋಧಕರಾದ ಮಾತಾಪಿತೃಗಳೂ. ಗುರುಗಳೂ ತಾವು ಬೋಧಿಸಿದಂತೇ ಸ್ವತಹ ನಡೆದುಕೊಂಡು ಪ್ರತ್ಯಕ್ಷೀಕರಿಸುವುದರಿಂದ, ಪ್ರತಿಯೊರ್ವ ಬಾಲಕ–ಬಾಲಕಿಗೆ ಯೋಗ್ಯ ವಿದ್ಯೆ ಕೊಡುವುದರಿಂದ, ಮಾತ್ರ ಮುಂದಿನ ಪೀಳಿಗೆಯು ಆದರ್ಶ ಪುತ್ರ, ಆದರ್ಶ ಪತಿ, ಆದರ್ಶ ಪಿತ, ಮತ್ತು ಆದರ್ಶ ಪ್ರಜೆಯಾಗಿ ಬಾಳಿ ಬಲಿಷ್ಠ ಭಾರತವನ್ನು ಬಲಿಷ್ಠವಾಗಿಯೇ ಇರಿಸುವನು. ದೀಪಾವಳಿಗೆ ಹಚ್ಚುವ ದೀಪವು–ಈ ಕಡೆಗೆ ಲಕ್ಷ್ಯ ಸೆಳೆದು ತೋರಿಸುವ ಸಾಂಕೇತಿಕ ಜ್ಯೋತಿಯಾಗಿದೆ.

"A clean mind in a clean body" ಎಂದು ಆಂಗ್ಲ ಉಕ್ತಿಯಿದೆ. ಶುಚಿಯಾದ ಶರೀರದೊಳಗೆ ಶುಚಿಯಾದ ಮನಸ್ಸು ಅಥವಾ ಕೊಳೆಯಿಲ್ಲದ ಕಾಯದೊಳಗೆ ಕಲುಷವಿಲ್ಲದ ಮನಸ್ಸು–ಎಂದರ್ಥ. ಇದನ್ನು ಸಾವಿರಾರು ವರ್ಷಗಳ ಹಿಂದೆ ವಾಲ್ಮೀಕಿ, ವ್ಯಾಸರು ಬಹು ಸೊಗಸಾಗಿ ಚಿತ್ರಿಸಿದ್ದಾರೆ. ಅನಂತರ ಬಂದ ಭಾಷ್ಯ ಕಾರರು, ಆಚಾರ್ಯರು, ಸಂತರು, ದಾಸರು, ಯತಿವರ್ಯರು, ಪ್ರವಾದಿಗಳು, ...ಎಲ್ಲರೂ ತಮ್ಮದೇ ಆದ ರೀತಿಯಲ್ಲಿ ಅತಿ ಸುಂದರವಾಗಿ ಬೋಧಿಸಿದ್ದಾರೆ.

"ಆ ನೋ ಭದ್ರಾಃ ಕ್ರತವೋ ಯಂತು ವಿಶ್ವತಃ"—("ವಿಶ್ವದ ಎಲ್ಲ ಕಡೆಗಳಿಂದ ನಮಗೆ ಉದಾತ್ತ ವಿಚಾರಗಳು ಬರಲಿ") ಎಂದೂ, "ಲೋಕಾ ಸಮಸ್ತಾಃ ಸುಖಿನೋ ಭವಂತು" – ("ಸಮಸ್ತ ಲೋಕಕ್ಕೆ ಸುಖವುಂಟಾಗಲಿ") ಎಂದೂ ಋಗ್ವೇದವು ಪ್ರಪಂಚದಲ್ಲೇ ಅನುಪಮವೆನಿಸುವ ಎರಡು ರತ್ನಗಳನ್ನು ನಮಗಿತ್ತಿದೆ.

ಪ್ರತಿ ದೀಪಾವಳಿಗೆ ನಾವು ಹಚ್ಚುವ ಜ್ಯೋತಿಯು ಈ ಸದ್ವಿಚಾರಗಳ ಕಡೆಗೆ ಕಣ್ಮನಗಳನ್ನು ತೆರೆಯಲು: ಒಳಿತನ್ನೆ ನುಡಿವಂತೆ, ಒಳಿತನ್ನೆ ಕೇಳುವಂತೆ, ಒಳಿತನ್ನೆ ನೋಡುವಂತೆ, ಒಳಿತನ್ನೆ ಮಾಡುವಂತೆ ದೀಕ್ಷಾಬದ್ಧರಾಗಿರಿ ಎಂದು ಎಚ್ಚರಿಸಲು – ಬೆಳಗುತ್ತಿದೆ.

ಏನಾದರೂ ಒಳಿತನ್ನು ಮಾಡಿರಿ, ಅದರ ಆನಂದವನ್ನನುಭವಿಸಿರಿ. ಒಂದು ಒಳಿತಿನಿಂದ ಎರಡು, ಎರಡರಿಂದ ಎಂಟು, ಎಂಟರಿಂದ ನೂರಾರು ಸಾವಿರಾರು [illegible]ಗಳಾಗುವುವು. ಹಾಗೆಯೇ ಒಂದು ಕೆಡುಕಿನಲ್ಲಿ ನೀವು [illegible] [illegible] [illegible] [illegible] [illegible] [illegible] [illegible].

—೦—

ಋಷಿ ಬಂಕಿಮಚಂದ್ರ ಮತ್ತು 'ವಂದೇ ಮಾತರಂ'

ಒಂದು ಶತಮಾನದ ಹಿಂದೆ. ೧೮೭೬ನೇ ಸೆಪ್ಟೆಂಬರಿನಲ್ಲಿ, ಬಂಕಿಮಚಂದ್ರ ಚತರ್ಜಿಯವರು, ಸಮಗ್ರ ಭಾರತದ ಜನತೆಯಲ್ಲಿ ದೇಶಪ್ರೇಮ ಮನೋಭಾವವನ್ನು ತುಂಬುವ, ಚೈತನ್ಯವನ್ನು ಕಲಕಿ ಎಬ್ಬಿಸುವ "ವಂದೇ ಮಾತರಂ" ಗೀತವನ್ನು ಕೊಟ್ಟರು. ಪರಾಧೀನತೆಯಲ್ಲಿ ತಮ್ಮ ನೈಜಶಕ್ತಿಯನ್ನು ಮರೆತು ಮುಚ್ಚಿನಲ್ಲಿದ್ದ ಜಡಜನಾಂಗವು ಎಚ್ಚರಗೊಂಡಿತು.

ಮಹರ್ಷಿ ಅರವಿಂದ ಘೋಷರು, ಬಂಕಿಮಚಂದ್ರ ಚತರ್ಜಿಯವರ (೧೮೩೮-೧೮೯೪) ಕುರಿತು ೧೮೯೪ರಲ್ಲಿ ಪ್ರಕಟವಾದ "ಇಂದು ಪ್ರಕಾಶ"ದಲ್ಲಿ ಬರೆದ ಏಳು ಲೇಖನಗಳಲ್ಲಿ. ತಮ್ಮ ಲೇಖನಮಾಲೆಯನ್ನು ಕೊನೆಗೊಳಿಸುವಾಗ ಹೀಗನ್ನುತ್ತಾರೆ:

"ಭಾರತದ ಮುಂದಿನ ಪೀಳಿಗೆಯು ರಾಷ್ಟ್ರರಚಯಿತರನ್ನು ತಮ್ಮ ಸ್ತೋತ್ರದಿಂದ ಘೋಷಿಸುವಾಗ, ತನ್ನ ಅತ್ಯಮೌಲ್ಯ "ಜಯಕಂಕಣ"ವನ್ನು ಸ್ವಾತಂತ್ರ್ಯಾನ್ವೇಷಿ ರಾಜಕಾರಣಿಗೊಪ್ಪಿಸಲಾರದು, ಅಥವಾ ಸ್ವಪ್ರತಿಷ್ಠೆಗೆ ಹಾತೊರೆವ ಅರ್ಭಟೆಯ ಸಮಾಜ ಸುಧಾರಕನ ಕಿರಿದಾದ ಹಣೆಯು ಜೀವರುವ ಗಂಡಸ್ಥಲದ ಮೇಲೆಯೂ ಇರಿಸಲಾರದು. ಆ ಅನರ್ಘ ಆಭರಣವು - ಎಂದೂ ಸ್ಥಾನಮಾನಗಳಿಗೆ ಒದರಾಡದೆ ಕೇವಲ ಕರ್ತವ್ಯನಿಷ್ಠೆಯಿಂದ ಪ್ರಕೃತಿಯೋಪಾದಿ ಮೌನವಾಗಿ ತನ್ನ ಕಾರ್ಯಮಾಡುತ್ತ ಒಂದು - ತನ್ನಲ್ಲಿರುವ ಉತ್ತಮವಾದುದನ್ನು ಕೊಡುವ ಹೊರತು ಮತ್ತಾವ ಗುರಿಯೂ ಇಲ್ಲದ ಕಾರಣ-ಒಂದು ಭಾಷಾಶೈಲಿ, ಒಂದು ಉತ್ತಮ ಸಾಹಿತ್ಯ ಮತ್ತು ಒಂದು ಜನಾಂಗ ನಿರ್ಮಾಣ — ಇವಿಷ್ಟನ್ನು ಸೃಷ್ಟಿಸಲು ಸಮರ್ಥರಾದವರು."

ಸಾಹಿತ್ಯ ಸೇವೆಯನ್ನಾರಂಭಿಸಿದ ಬಂಕಿಮರು ಉತ್ತಮ ಶೈಲಿಗಾರನಷ್ಟೇ ಆಗಿದ್ದರೆ, ಮುಂದೆ ಸಾಹಿತ್ಯ ಋಷಿಯೇ ಆಗಿ,— ಇಂದಿಗೆ ಒಂದು ಶತಮಾನದ ಹಿಂದೆ— ಎಂದೆಂದೂ ಅಳಿಯದ ಮರೆಯದ "ವಂದೇ ಮಾತರಂ" ಗೀತವನ್ನು ಕೊಡುಗೆಯಾಗಿತ್ತರು, ಈ ಗೀತದಿಂದ ದೇಶಾದ್ಯಂತ ರಾಷ್ಟ್ರಪ್ರೇಮದ ಕಿಡಿಯು ಹಚ್ಚಲ್ಪಟ್ಟಿತು; ಸ್ವಾತಂತ್ರ್ಯಪ್ರೇಮವು ಉಜ್ವಲಿಸಿತು. ದೇಶಭಕ್ತಿಯು ಈ ಗೀತದಿಂದ ಎಲ್ಲೆಲ್ಲೂ ಹರಡಿದ ಜ್ವಾಲೆಗಳು ಈ ಮಹಾನ್‌ದೇಶವನ್ನು ಪೂರ್ಣ ಆವರಿಸಿದವು. ಭಾರತದಲ್ಲಿ ರಾಷ್ಟ್ರೀಯತೆಯ ಬೆಳವಣಿಗೆಗೆ ನಮ್ಮ ಧುರೀಣರ ಯತ್ನಗಳಿಗಿಂತ ಈ 'ವಂದೇ ಮಾತರಂ' ಗೀತಕ್ಕೇ ನಮ್ಮ ಜನಕೋಟಿಯು ಹೆಚ್ಚು ಋಣಿಯೆಂದು ಹೇಳಬೇಕಾಗಿದೆ. (ಬಂಕಿಮರು ೧೮೭೬ನೇ ಸೆಪ್ಟೆಂಬರದಲ್ಲಿ ಅದನ್ನು ರಚಿಸಿ, ಮುಂದೆ ಕೆಲಕಾಲಾನಂತರ ತಮ್ಮ "ಆನಂದಮಠ" ಕಾದಂಬರಿಯಲ್ಲಿ ಸೇರಿಸಿದರು ಎಂದು ಪ್ರತೀತಿಯಿದೆ.)

ಹತ್ತೊಂಭತ್ತನೇ ಶತಮಾನದ ಬಂಗಾಳದ ಸುಪ್ರಕಾಶಿತ ಪ್ರತಿಭಾಶಾಲಿಯಾದ ಬಂಕಿಮಚಂದ್ರರು ಕಲ್ಕತ್ತಾ ವಿಶ್ವವಿದ್ಯಾಲಯದ ಪ್ರಥಮ ಗ್ರೆಜ್ಯುವೇಟರಾಗಿ (೧೮೫೮) ಹೊರಬಂದವರು; ಭಾರತದ ಆಧುನಿಕ ಸಾಹಿತ್ಯರಚಯಿತರಲ್ಲೊಬ್ಬನೆಂದೂ ಭಾರತೀಯ ರಾಷ್ಟ್ರೀಯತೆಯ ದೈವಪ್ರೇರಿತ ಧರ್ಮೋಪದೇಶಕರೆಂದೂ ಸದಾ ಅವರನ್ನು ರಾಷ್ಟ್ರವು ಸ್ಮರಿಸಿ ಗೌರವಿಸುವುದು. ಬ್ರಿಟಿಷ್ ಆಡಳಿತದ ಕೆಳಗೆ, ಸರಕಾರೀ ಹುದ್ದೆಯಲ್ಲಿದ್ದು, ಅವರು ಘನತೆ-ಗೌರವ-ಪ್ರಾಮಾಣಿಕತೆಗಳಿಂದ ಕಾರ್ಯ ನಿರ್ವಹಿಸಿ ಸರ್ವಮಾನ್ಯರಾಗಿದ್ದರು. ಹುದ್ದೆಯ ದೊಡ್ಡತನದೊಂದಿಗೆ ಅವರು ನಡತೆಯಲ್ಲಿ, ಮಾತಿನಲ್ಲಿ ಜನರನ್ನು ಸುಪ್ರೀತಗೊಳಿಸುವ ವ್ಯಕ್ತಿತ್ವವುಳ್ಳವರಾಗಿದ್ದರು. ಅವರ ಶೀಲವು ಪ್ರಶ್ನಾತೀತವಾಗಿತ್ತು. ನೈಜ ವಿದ್ವಾಂಸರಾಗಿದ್ದುದರಿಂದ ಅಹಂಕಾರದ ಲವಲೇಶವೂ ಅವರಲ್ಲಿ ಕಾಣುತ್ತಿರಲಿಲ್ಲ.

ಬಂಕಿಮರು ೧೮೭೬ರಲ್ಲಿ ಬರೆದ "ವಂದೇ ಮಾತರಂ" ಗೀತವು, ೧೮೯೬ರಲ್ಲಿ ಪ್ರಥಮತಃ, ಕಲ್ಕತ್ತೆಯಲ್ಲಿ ಸಮಾವೇಶಗೊಂಡ ಅಖಿಲ ಭಾರತ ರಾಷ್ಟ್ರೀಯ ಕೊಂಗ್ರೆಸ್ಸಿನ ಅಧಿವೇಶನದಲ್ಲಿ ಹಾಡಲ್ಪಟ್ಟಿತು. ಅದಕ್ಕೆ ನೊಟೇಶನ್ ರಚಿಸಿದವರೂ ಹಾಡಿದವರೂ ವಿಶ್ವಕವಿ ರವೀಂದ್ರನಾಥ ಠಾಕೂರರು. ಈ ಗೀತವನ್ನಾಲಿಸಿದ ಶ್ರೋತೃಗಳು ಪೂರ್ಣ ತಲ್ಲೀನರಾಗಿ ಅದನ್ನು ಆನಂದಿಸಿದರು. ಕೊಂಗ್ರೆಸ್ಸಿನ ಸ್ಥಾಪಕರಲ್ಲೊಬ್ಬರಾಗಿದ್ದ ಸರ್ ಫಿರೋಜ್ ಷಾ ಮೆಹ್ತಾರವರು 'ವಂದೇ ಮಾತರಂ' ಕೇಳಿ, ಈ ಗೀತವು ರಚಿಸಲ್ಪಟ್ಟ ಬಂಗಾಲಿ ಮತ್ತು ಸಂಸ್ಕೃತ ಇವೆರಡು ಭಾಷೆಗಳೂ ತನಗೆ ಬರುವುದಿಲ್ಲವಾದರೂ ಅದನ್ನು ಕೇಳುವಾಗ ತನ್ನ ಮನಸ್ಸು ಅತಿ ಔನ್ನತ್ಯಕ್ಕೇರಿತು–ಎಂದರು. ಕೊಂಗ್ರೆಸ್ ಅಧಿವೇಶನದಲ್ಲಿ ಸೇರಿದ್ದ, ದೇಶದ ಇತರ ಪ್ರಾಂತ್ಯಗಳ ಜನರಿಗೆ ಈ ಗೀತದ ಶಬ್ದಾರ್ಥಗಳು ಪೂರ್ಣ ತಿಳಿಯಲಿಲ್ಲವೆಂದಾಗ, ಕೊಂಗ್ರೆಸ್ಸಿನ ಇನ್ನೋರ್ವ ಸ್ಥಾಪಕ ರಾಷ್ಟ್ರಗುರು ಸುರೇಂದ್ರನಾಥರು, ಅದರ ಅರ್ಥವನ್ನು ತಿಳಿಸಿದರೆಂದು ಹೇಳಲಾಗಿದೆ.

"ಉನ್ನತ ವಿಚಾರಗಳು ಹೃದಯದಿಂದ ಉದ್ಭವಿಸುತ್ತವೆ: ಮತ್ತು ಹೃದಯದ ಮೂಲಕವೇ ಅವು ಬುದ್ಧಿಯು ಸಂತ್ರ ಕ್ರಿಯಾಸಕ್ತವಾಗುತ್ತವೆ. ಬಂಕಿಮಚಂದ್ರರು ಇದನ್ನು ರಚಿಸುವಾಗ ಹಾಗೇ ಆಗಿದ್ದಿರಬೇಕು. ಮಾತೃಭೂಮಿಯ ದೃಶ್ಯ ಅವರ ಮುಂದೆ ಇತ್ತು. ಅದು, ಸ್ವರಗತಿಗಳಿಂದ ನಮ್ಮ ಹೃದಯಗಳನ್ನು ತುಂಬುವ ಈ ಘನತೆ-ಔನ್ನತ್ಯಗಳ ಗೀತದ ರೂಪಧಾರಣೆ ಮಾಡಿ, ಸರ್ವಶಕ್ತೆ ಮಾತೆಯು ಮುಂದೆ ನಾವು ಶರಣಾಗಿಸುವಂತೆ ಮಾಡಿತು........'ವಂದೇ ಮಾತರಂ' ಬರೀ ಒಂದು ಹಾಡಲ್ಲ, ಅದು ಋಷಿ ಬಂಕಿಮಚಂದ್ರರು ರಚಿಸಿದ ಪವಿತ್ರ ಮಂತ್ರ. ನಾನು ಒಂದು ಭವಿಷ್ಯ ನುಡಿಯನ್ನು ಹೇಳಬಹುದಾದರೆ, ಈ ಗೀತವು ಭಾರತೀಯ ರಾಜಕೀಯವನ್ನು ಅಧ್ಯಾತ್ಮಿಕವಾಗಿ ಸತ್ವಭರಿತವಾಗಿ ಮಾಡುವ ಕಾಲವು ದೂರವಿಲ್ಲ"—ಎಂಬುದಾಗಿ, ಕವೀಂದ್ರ ರವೀಂದ್ರರು, 'ವಂದೇ ಮಾತರಂ' ಗೀತದ ವಿಷಯವಾಗಿ ಚಿಕ್ಕ ಭಾಷಣ ಮಾಡಿದರು.

ಆದರೆ. ೧೯೦೬ರ ವರೆಗೆ "ವಂದೇ ಮಾತರಂ" ಗೀತವು ಅಖಿಲ ಭಾರತ ಸ್ವರೂಪದಲ್ಲಿ ರಾಷ್ಟ್ರಗೀತವಾಗಿ ಅಂಗೀಕರಿಸಲ್ಪಟ್ಟಿರಲಿಲ್ಲ. ೧೯೦೫ರಲ್ಲಿ ಕಾಶಿಯಲ್ಲಿ ಕೊಂಗ್ರೆಸ್ಸಿನ ವಾರ್ಷಿಕ ಅಧಿವೇಶನವು, ಗೋಪಾಲಕೃಷ್ಣ ಗೋಖಲೆಯವರ ಅಧ್ಯಕ್ಷತೆಯಲ್ಲಿ ಜರಗಿದಾಗ, ಆ ಅಧಿವೇಶನಕ್ಕೆ ಬಂದಿದ್ದ ಸಿಸ್ಟರ್ ನಿವೇದಿತಾರವರು, ಬಹಿರಂಗ ಅಧಿವೇಶನದಲ್ಲಿ ಅದನ್ನು ಹಾಡುವಂತೆ ಅನುಮತಿ ಕೊಡಬೇಕಾಗಿ ಅಧ್ಯಕ್ಷರನ್ನು ಕೇಳಿಕೊಂಡರು. ಗೋಖಲೆಯವರು ಸಮ್ಮತಿಸುತ್ತಲೇ, ರವೀಂದ್ರನಾಥರ ಸೋದರ ಸೊಸೆಯೊಬ್ಬಳಾದ ಸರಳಾದೇವಿ ಚೌಧುರಾಣಿಯವರು ಅದನ್ನು ಹಾಡಿದರು. ಅಂದಿನಿಂದ, ಕೊಂಗ್ರೆಸ್ ಅಧಿವೇಶನಗಳಾರಂಭವಾಗುವಾಗಲೆಲ್ಲ ಈ ಗೀತವನು ಹಾಡುವ ರೂಢಿ ಬಂತು. ಆ ಮೇಲೆ. ಗಾಂಧೀಯುಗದಲ್ಲಿ ಈ ಗೀತವು, ಸ್ವಾತಂತ್ರ್ಯಹೋರಾಟದ ರಣಗೀತವೆಂಬಂತೆ,ಕೊಂಗ್ರೆಸ್ ಪರಿಷ್ಕರಿಂದ ಸ್ವೀಕಾರ್ಯವಾಯಿತು, ಮಹಾತ್ಮಾಜಿಯವರು ಸ್ವತಹ ಈ ಗೀತಕ್ಕೆ ಮೋಹಪರವಶರಾಗಿದ್ದರು. ಒಮ್ಮೆ ರವೀಂದ್ರರಿಗೆ ಪತ್ರ ಬರೆವಾಗ ಮಹಾತ್ಮರು, ಇತರ ಯಾವ ಗೀತಕ್ಕಿಂತಲೂ ಭಾರತದ ರಾಷ್ಟ್ರಗೀತೆಯಾಗಿ "ವಂದೇ ಮಾತರಂ" ಗೀತವೇ ಆಯ್ದುಕೊಳ್ಳುವಂತೆ ತನ್ನ ಆಶೆ–ಎಂದೂ ಹೇಳಿದ್ದರು.

"ವಂದೇ ಮಾತರಂ'' ಗೀತವು, ಒಂದು ಹಿಂದೂ ದೇವತೆಯ ಮೂರ್ತಿಯನ್ನು ಮನಸ್ಸಿನಲ್ಲಿ ಕಲ್ಪಿಸಿ ಆ ಮಾದರಿ ಅಥವಾ ಆದರ್ಶದಲ್ಲೇ ರಚಿಸಲ್ಪಟ್ಟುದರಿಂದ, ಮುಂದೆ ಹಲವು ವರ್ಷಗಳ ನಂತರ ಇದರ ಬಗ್ಗೆ ವಾದ-ವಿವಾದಗಳಿದ್ದರೂ, ಮುಂದೆ ರವೀಂದ್ರನಾಥ ಠಾಕೂರರ "ಜನಗಣಮನ''ವು ಅಧಿಕೃತ ರಾಷ್ಟ್ರಗೀತೆಯಾಗಿ ಸ್ವೀಕೃತವಾದ ನಂತರವೂ ''ವಂದೇ ಮಾತರಂ'' ತನ್ನ ಸತ್ವ, ತೇಜಸ್ಸುಗಳನ್ನು ಪ್ರಕಾಶಮಾನವಾಗಿಯೇ ಇರಿಸಿಕೊಂಡು, ವಿಶಾಲಜನತೆಯಿಂದ ಭಕ್ತಿಗೌರವಗಳಿಂದ ಹಾಡಲ್ಪಡುತ್ತಿದೆ.

ಕನ್ನಡನಾಡಿನ ದಿವಂಗತ ಬಿ. ವೆಂಕಟಾಚಾರ್ಯರು (೧೮೪೫–೧೯೧೫) ಬಂಗಾಲಿ ಭಾಷೆಯಲ್ಲಿ ಪ್ರಾವೀಣ್ಯ ಪಡೆದು, ಬಂಕಿಮಚಂದ್ರರ ಹಲವು ಕಾದಂಬರಿಗಳನ್ನು ಕನ್ನಡಕ್ಕೆ ತರ್ಜುಮೆಮಾಡಿದ್ದರು, ಸುಮಾರು ಐವತ್ತೈದು ವರ್ಷಗಳ ಹಿಂದೆ. ನಮ್ಮ ಶಾಲಾದಿನಗಳಲ್ಲಿ ನಾವು ಆ ಕಾದಂಬರಿಗಳನ್ನು ಬಂಕಿಮಚಂದ್ರರ ಕಾದಂಬರಿಗಳೆನ್ನದೆ ವೆಂಕಟಾಚಾರ್ಯರ ಕಾದಂಬರಿಗಳೆಂದೇ ಹೇಳುತ್ತಿದ್ದೆವು. ನಮಗೆ, ಆ ಕಾಲದಲ್ಲಿ ದೊರೆವ ಕಥಾಸಾಹಿತ್ಯ ತೀರ ಕಡಿಮೆ––ಸಾಮಾಜಿಕ ಕಾದಂಬರಿಗಳೆಂದು ಹೇಳಬಹುದಾದ ಒಟ್ಟು ೭೫–೧೦೦ ಪುಸ್ತಕಗಳಿಗಿಂತ ಹೆಚ್ಚಿನವುಗಳನ್ನು ೧೯೨೫ರ ವರೆಗೆ ಕಂಡ ಕನ್ನಡಿಗರು ಕಡಿಮೆ.

ಬಂಕಿಮಚಂದ್ರ ಚತರ್ಜಿಯವರು ೧೮೩೮ನೇ ಜೂನ್ ತಾ. ೨೭ರಲ್ಲಿ ಕುಲೀನ ವಂಶದ ಬ್ರಾಹ್ಮಣರಲ್ಲಿ ಹುಟ್ಟಿದರು. ತಂದೆ ಯಾದವಚಂದ್ರ ಚಟರ್ಜಿ. ತಂದೆ ಡೆಪ್ಯುಟಿ ಕಲೆಕ್ಟರರಾಗಿದ್ದು ೧೮೫೭ರಲ್ಲಿ ನಿವೃತ್ತರಾದರು. ಮುಂದೆ ಬಂಕಿಮಚಂದ್ರರನ್ನು ಬಂಗಾಲದ ಲೆಫ್ಟಿನೆಂಟ್ ಗವರ್ನರರು ಹೇಳಿಕಳಿಸಿ ಕರೆಸಿ, ಡೆಪ್ಯುಟಿ ಕಲೆಕ್ಟರ ಕೆಲಸ ಕೊಡಿಸಿದರೆಂದೂ, ಬಂಕಿಮಚಂದ್ರರು ತಂದೆಯ ಇಚ್ಛೆಯಂತೆ ಅದಕ್ಕೊಪ್ಪಿದರೆಂದೂ ತಿಳಿಯುತ್ತದೆ. ೧೯೩೮ರಲ್ಲಿ ಬಂಗಾಲವು ಬಂಕಿಮರ ನೂರನೇ ಹುಟ್ಟುಹಬ್ಬವನ್ನು ಆಚರಿಸಿತು. ವಂಗೀಯ ಪರಿಷತ್ತು ಬಂಕಿಮರ ಎಲ್ಲ ಲೇಖನಗಳನ್ನು ಶೇಖರಿಸಿ, ಪೀಠಿಕೆ ಟಿಪ್ಪಣಿಗಳೊಡನೆ ಒಂಭತ್ತು ದೊಡ್ಡ ಸಂಪುಟಗಳಾಗಿ ಪ್ರಕಟಿಸಿತು. ಅವುಗಳ ಪುಟ ಸಂಖ್ಯೆ (ಕ್ರೌನ್ ¼) ೩೮೦೦ರಷ್ಟು ಆಗುತ್ತದೆ. ಬಂಕಿಮರು, ಹೂಗ್ಲಿ ಕೊಲೇಜಿನಲ್ಲಿ ವಿದ್ಯಾರ್ಥಿಯಾಗಿದ್ದಾಗ, ಕವಿತೆಗಳನ್ನು ಬರೆದು ಲೇಖನ ಜೀವನವನ್ನಾರಂಭಿಸಿದರು. ಆದರೆ, ಅವರು ಪ್ರಸಿದ್ಧವಾದುದು ಅವರ ಕಾದಂಬರಿಗಳಿಂದ. ಕಾದಂಬರಿಗಳಲ್ಲಿ ವಿಷವೃಕ್ಷ, ಕೃಷ್ಣಕಾಂತನ ಉಯಿಲು, ರಜನಿ. ದುರ್ಗೇಶನಂದಿನಿ, ಕಪಾಲಕುಂಡಲಾ, ಮೃಣಾಳಿನೀ, ರಾಜಸಿಂಹ, ಆನಂದಮಠ, ದೇವಿ ಚೌಧುರಾಣಿ––ಇವು ಮತ್ತೆ ಕೆಲವು, ಕನ್ನಡಕ್ಕೆ ತರ್ಜುಮೆಯಾಗಿವೆ,

ಬಂಕಿಮರ 'ವಂದೇ ಮಾತರಂ' ಕುರಿತಾದ ಮೇಲಿನ ಲೇಖನವನ್ನು, ಸಪ್ಟಂಬರ ೨೬, ೧೯೭೬ರ "ಭವನ್ಸ್ ಜರ್ನಲ್"ದಲ್ಲಿ ಮೋನಿ ಬಾಗ್ಚಿಯವರು ಬರೆದ ಲೇಖನವನ್ನಾಧರಿಸಿ. ಸಂಕ್ಷೇಪಿಸಿ ಬರೆಯಲಾಗಿದೆ.

ಬಂಕಿಮಚಂದ್ರರ "ವಂದೇ ಮಾತರಂ" ಗೀತವನ್ನು ಅರವಿಂದ ಘೋಷರು ಇಂಗ್ಲಿಷಿನಲ್ಲಿ ಕಾವ್ಯರೂಪಕ್ಕೆ ತರ್ಜುಮೆಮಾಡಿದ್ದರು; ಹಾಗೆಯೇ ಗದ್ಯದಲ್ಲಿ (ಇಂಗ್ಲಿಷಿನಲ್ಲೇ, ಅದರ ತಾತ್ಪರ್ಯವನ್ನೂ ಕೊಟ್ಟಿದ್ದರು. ಬಂಕಿಮರ 'ವಂದೇ ಮಾತರಂ' ಗೀತವನ್ನೂ, ಅರವಿಂದರ ಇಂಗ್ಲಿಷ್ ಭಾಷಾಂತರವನ್ನೂ ಈ ಸಂಚಿಕೆಯಲ್ಲಿ ಕೊಟ್ಟಿರುವೆವು.

— ಸಂಪಾದಕ, ಪ್ರಭಾತ.

"ವಂದೇ ಮಾತರಂ"

ವಂದೇ ಮಾತರಂ
ಸುಜಲಾಂ ಸುಫಲಾಂ
ಮಲಯಜ ಶೀತಲಾಂ
ಸಸ್ಯಶ್ಯಾಮಲಾಂ ಮಾತರಂ

ಶುಭ್ರಜ್ಯೋತ್ಸ್ನಾ ಪುಲಕಿತಯಾಮಿನೀಂ-
ಫುಲ್ಲಕುಸುಮಿತ ದ್ರುಮದಲ ಶೋಭಿನೀಂ
ಸುಹಾಸಿನೀಂ ಸುಮಧುರ ಭಾಷಿಣೀಂ
ಸುಖದಾಂ ವರದಾಂ ಮಾತರಂ

ಸಪ್ತಕೋಟಿಕಂಠ ಕಲಕಲನಿನಾದಕರಾಲೇ,
ದ್ವಿಸಪ್ತಕೋಟಿ ಭುಜೈರ್ಧೃತಖರ
ಕರವಾಲೇ,
ಅಬಲಾ ಕೇನ ಮಾ ಎತಬಲೇ ॥
ಬಹುಬಲ ಧಾರಿಣೀಂ
ನಮಾಮಿ ತಾರಿಣೀಂ
ರಿಪುದಲ ವಾರಿಣೀಂ ಮಾತರಂ ॥

ತುಮಿ ವಿದ್ಯಾ ತುಮಿ ಧರ್ಮ
ತುಮಿ ಹೃದಿ ತುಮಿ ಧರ್ಮ
ತ್ವಂ ಹಿ ಪ್ರಾಣಾಃ ಶರೀರೇ ॥
ಬಾಹುತೇ ತುಮಿ ಮಾ ಶಕ್ತಿ
ಹೃದಯೇ ತುಮಿ ಮಾ ಭಕ್ತಿ
ತೋಮಾರಈ ಪ್ರತಿಮಾಗಡಿ
ಮಂದಿರೇ ಮಂದಿರೇ ॥
ವಂದೇ ಮಾತರಂ ॥

ತ್ವಂ ಹಿ ದುರ್ಗಾ ದಶಪ್ರಹರಣಧಾರಿಣೀ ।
ಕಮಲಾ ಕಮಲದಲ ವಿಹಾರಿಣೀ
ವಾಣೀ ವಿದ್ಯಾದಾಯಿನೀ
ನಮಾಮಿ ತ್ವಾಂ
ನಮಾಮಿ ಕಮಲಾಂ
ಅಮಲಾಂ ಅತುಲಾಂ
ಸುಜಲಾಂ ಸುಫಲಾಂ
ಮಾತರಂ
ವಂದೇ ಮಾತರಂ
ಶ್ಯಾಮಲಾಂ ಸರಲಾಂ
ಸುಸ್ಮಿತಾಂ ಭೂಷಿತಾಂ
ಧರಣೀಂ ಭರಣೀಂ ಮಾತರಂ ॥

——

(ಕೆಳಗೆ, ಮಹರ್ಷಿ ಅರವಿಂದರ ಇಂಗ್ಲಿಷ್ ಭಾಷಾಂತರ ಕೊಡಲಾಗಿದೆ)

HYMN TO THE MOTHER

Mother, I bow to thee!
Rich with thy hurrying streams,
Bright with thy orchard gleams
Cool with thy winds of delight.
Dark fields waving Mother of might,
Mother free

Glory of moonlight dreams,
Over thy branches and lordly streams
Clad in thy blossoming trees,
Mother giver of ease.
Laughing low and sweet!
Mother I kiss thy feet
Speaker sweet and low,
Who hath said thou art weak in thy lands,
When the sword flash out in seventy million hands
And seventy million voices roar:
Thy dreadful name from shore to shore?

With many strengths who art mighty and stored,
To thee I call Mother and Lord!
Thou who savest, arise and save!
To her I cry who ever her foemen drave
Back from plain and sea
And shook herself free

Thou art wisdom thou art law.
Thou art heart, our soul our breath,
Thou the love divine, the awe
In our hearts that conquers death.
Thine the strength that nerves the arm,
Thine the beauty, thine the charm
Every image made divine
In our temples is but thine
Thou art Durga, Lady and Queen,
With her hands that strike and her swords of sheen,
Thou art Lakshmi lotus-throned
And the Muse a hundred-toned

Pure and perfect without peer,
Mother lend thine ear,
Rich with thy hurrying streams
Bright with thy orchard gleams.
Dark of hue, O candid-fair.
In thy soul, with jewelled hair
And thy glorious smile divine,
Loveliest of all earthly lands,
Showering wealth from well stored hands!
Mother, mother mine!
Mother sweet, I bow to thee.
Mother great and free!

(By Aurobindo)

ಕ್ಷಮಾ ಧರ್ಮಃ ಕ್ಷಮಾ ಯಜ್ಞಃ……

ಯುಧಿಷ್ಠಿರನು ದ್ರೌಪದಿಗೆ ಬೋಧಿಸಿದ ಕ್ಷಮಾಗುಣದ ಸಾರ

ಕ್ಷಂತವ್ಯಂ ಪುರುಷೇಣೇಹ ಸರ್ವಾಪತ್ಸು ಸುಶೋಭನೇ ।
ಕ್ಷಮಾವತೋ ಹಿ ಭೂತಾನಾಂ ಜನ್ಮ ಚೈವ ಪ್ರಕೀರ್ತಿತಮ್ ॥

ಸುಶೋಭನೇ! ಆಪತ್ಕಾಲಗಳಲ್ಲಿಯೂ ಸಹ ಕ್ಷಮಾಗುಣವನ್ನು ಖಂಡಿತವಾಗಿಯೂ ತ್ಯಜಿಸಬಾರದು. ಕ್ಷಮಾವಂತನಿಂದಲೇ ಪ್ರಾಣಿಗಳ ಜೀವನನಿರ್ವಹಣೆಯೂ ಆಗುವುದು.

ಆಕ್ರುಷ್ಟಸ್ತಾಡಿತಃ ಕ್ರುದ್ಧಃ ಕ್ಷಮತೇ ಯೋ ಬಲೀಯಸಾ ।
ಯಶ್ಚ ನಿತ್ಯಂ ಜಿತಕ್ರೋಧೋ ವಿದ್ವಾನುತ್ತಮಪೂರುಷಃ ॥

ಯಾವನು ಬಲಿಷ್ಠನಾದವನಿಂದ ನಿಂದಿಸಲ್ಪಟ್ಟರೂ ಅಥವಾ ಪೀಡಿಸಲ್ಪಟ್ಟರೂ ಸಹ ಕೋಪಗೊಳ್ಳದೇ ಸಹನೆಯಿಂದಿರುವನೋ ಅವನೇ ನಿಶ್ಚಯವಾಗಿಯೂ ವಿದ್ವಾಂಸನು ಮತ್ತು ಉತ್ತಮಪುರುಷನು.

ಕ್ಷಮಾಗುಣದ ಮಹತ್ತ್ವವು ಮಹಾತ್ಮರಾದ ಕಾಶ್ಯಪರಿಂದ ಗೀತೆಯ ರೂಪದಲ್ಲಿ ಹೇಳಲ್ಪಟ್ಟಿದೆ. ಅವರು ಹೇಳಿರುವುದನ್ನು ಯಥಾಪ್ರಕಾರವಾಗಿ ಹೇಳುವೆನು ಕೇಳು, ದ್ರೌಪದಿ!

ಕ್ಷಮಾ ಧರ್ಮಃ ಕ್ಷಮಾ ಯಜ್ಞಃ ಕ್ಷಮಾ ವೇದಾಃ ಕ್ಷಮಾ ಶ್ರುತಮ್ ।
ಯ ಏತದೇವಂ ಜಾನಾತಿ ಸ ಸರ್ವಂ ಕ್ಷಂತುಮರ್ಹತಿ ॥

ಕ್ಷಮಾ ಬ್ರಹ್ಮ ಕ್ಷಮಾ ಸತ್ಯಂ ಕ್ಷಮಾ ಭೂತಂ ಚ ಭಾವಿ ಚ ।
ಕ್ಷಮಾ ತಪಃ ಕ್ಷಮಾ ಶೌಚಂ ಕ್ಷಮಯೇದಂ ಧೃತಂ ಜಗತ್ ॥

ಅತಿ ಯಜ್ಞವಿದಾಂ ಲೋಕಾನ್ ಕ್ಷಮಿಣಃ ಪ್ರಾಪ್ನುವಂತಿ ಚ ।
ಅತಿ ಬ್ರಹ್ಮವಿದಾಂ ಲೋಕಾನತಿ ಚಾಪಿ ತಪಸ್ವಿನಾಮ್ ॥

ಅನ್ಯೇ ವೈ ಯಜುಷಾಂ ಲೋಕಾಃ ಕರ್ಮಿಣಾಮಪರೇ ತಥಾ ।
ಕ್ಷಮಾವತಾಂ ಬ್ರಹ್ಮಲೋಕೇ ಲೋಕಾಃ ಪರಮಪೂಜಿತಾಃ ॥

ಕ್ಷಮಾ ತೇಜಸ್ವಿನಾಂ ತೇಜಃ ಕ್ಷಮಾ ಬ್ರಹ್ಮ ತಪಸ್ವಿನಾಮ್ ।
ಕ್ಷಮಾ ಸತ್ಯಂ ಸತ್ಯವತಾಂ ಕ್ಷಮಾ ಯಜ್ಞಃ ಕ್ಷಮಾ ಶಮಃ ॥

ಕ್ಷಮಾಗುಣವೇ ಮನುಷ್ಯನ ಮುಖ್ಯ ಧರ್ಮ. ಕ್ಷಮೆಯಿಂದಿರುವುದೇ ಯಜ್ಞ. ಕ್ಷಮೆಯೇ ವೇದಗಳು. ಕ್ಷಮೆಯೇ ಶಾಸ್ತ್ರ. ಈ ಸೂಕ್ಷ್ಮವನ್ನು ತಿಳಿದವನು ನಿಶ್ಚಯವಾಗಿಯೂ ಕ್ಷಮಾವಂತನಾಗುತ್ತಾನೆ. ಕ್ಷಮೆಯೇ ಬ್ರಹ್ಮ. ಕ್ಷಮೆಯೇ ಸತ್ಯ. ಈ ಹಿಂದೆ ನಡೆದ ಮತ್ತು ಮುಂದೆ ನಡೆಯುವ ಪ್ರಪಂಚದ ವಿದ್ಯಮಾನಗಳಿಗೆಲ್ಲಾ ಕ್ಷಮಾಗುಣವೇ ಆಧಾರಭೂತವಾಗಿದೆ, ಕ್ಷಮೆಯೇ ತಪಸ್ಸು. ಕ್ಷಮೆಯೇ ಸದಾಚಾರಕ್ಕೆ ಮೂಲವಾದ ಮುಖ್ಯಗುಣ. ಕ್ಷಮೆಯಿಂದಲೇ ಈ ಪೃಥ್ವಿಯು ಪರ್ವತ–ಗಿರಿ–ದುರ್ಗಗಳನ್ನೂ, ನದೀ–ನದ–ಸರೋವರಗಳನ್ನೂ, ಜೀವಕೋಟಿಯನ್ನೂ ಹೊತ್ತು ನಿಂತಿದೆ. ವಾಜಪೇಯಾದಿ ಯಾಗಗಳನ್ನು ಮಾಡಿದವರಿಗೆ, ಬ್ರಹ್ಮನಿಷ್ಠರಿಗೆ, ತಪಸ್ವಿಗಳಿಗೆ—ಯಾವ ಲೋಕಗಳು ಪ್ರಾಪ್ತವಾಗುವುವೋ ಅವೆಲ್ಲಕ್ಕಿಂತಲೂ ಉತ್ತಮವಾದ ಲೋಕಗಳು ಕ್ಷಮಾವಂತರಿಗೆ ಲಭಿಸುವುವು. ಯಜ್ಞ–ಯಾಗಾದಿ ಕಾಮ್ಯಕರ್ಮಗಳನ್ನು ಮಾಡಿದವರಿಗೂ ವಾಪೀ–ಕೂಪ ತಟಾಕಾದಿ ನಿಷ್ಕಾಮ ಕರ್ಮಗಳನ್ನು ಮಾಡಿದವರಿಗೂ ಬೇರೆ ಬೇರೆ ಲೋಕಗಳಿವೆ. ಆದರೆ, ಕ್ಷಮಾವಂತರಿಗೆ ಪರಮಪೂಜ್ಯವಾದ ಬ್ರಹ್ಮಲೋಕದಲ್ಲಿಯೇ ಶಾಶ್ವತಸ್ಥಾನವು ಲಭಿಸುತ್ತದೆ. ಬಲಿಷ್ಠರಾದವರಿಗೆ ಕ್ಷಮೆಯೇ ತೇಜಸ್ಸು. ತಪಸ್ವಿಗಳಿಗೆ ಕ್ಷಮೆಯೇ ಬ್ರಹ್ಮ. ಸತ್ಯನಿಷ್ಠರಿಗೆ ಕ್ಷಮೆಯೇ ಸತ್ಯ. ಕ್ಷಮಾಗುಣದ ಪರಿಪಾಲನೆಯೇ ಯಜ್ಞ. ಕ್ಷಮೆಯೇ ಶಮ ಅಥವಾ ಶಾಂತಿ.

ಕ್ಷಂತವ್ಯಮೇವ ಸತತಂ ಪುರುಷೇಣ ವಿಜಾನತಾ
ಯದಾ ಹಿ ಕ್ಷಮತೇ ಸರ್ವಂ ಬ್ರಹ್ಮ ಸಂಪದ್ಯತೇ ತದಾ ॥

ವಿದ್ವಾಂಸನಾದವನು ಕ್ಷಮಾವಂತನಾಗಿರಬೇಕು. ಎಂತಹ ಮಹಾಪರಾಧವನ್ನು ಮಾಡಿದರೂ ಕ್ಷಮಿಸಬೇಕು. ಸಕಲವನ್ನೂ ಕ್ಷಮಿಸುವ ಶಕ್ತಿಯಿರುವವನು ಬ್ರಹ್ಮಭಾವವನ್ನು ಹೊಂದುತ್ತಾನೆ.

ಸತ್ಯ

ಸತ್ಯಕ್ಕಾಗಿ ಸರ್ವವನ್ನೂ ಸಮರ್ಪಿಸಬಹುದು. ಆದರೆ, ಸತ್ಯವನ್ನು ಮತ್ತಾವುದಕ್ಕೂ ತೆರುವುದಕ್ಕೆ ಆಗುವುದಿಲ್ಲ.

— ವಿವೇಕಾನಂದ.

ಭಿಕ್ಷೆ ಯಾರಿಗೂ ಏನನ್ನೂ ಕೊಟ್ಟಿಲ್ಲ

ಭಿಕ್ಷೆಯಿಂದ ಯಾರಿಗೂ ಏನೂ ದೊರಕಿಲ್ಲ. ನಾವು ಯಾವುದಕ್ಕೆ ಯೋಗ್ಯರೋ ಅದು ಮಾತ್ರ ನಮಗೆ ದೊರಕುವುದು.

— ವಿವೇಕಾನಂದ.

ಶ್ರೀಮಂತರ ಆರಾಧನೆ

ಶ್ರೀಮಂತರ ಆರಾಧನೆ ಪ್ರವೇಶಿಸಿದೊಡನೆಯೇ ಒಂದು ಧಾರ್ಮಿಕ ಪಂಗಡದ ಅವನತಿ ಪ್ರಾರಂಭವಾದಂತೆ.

— ವಿವೇಕಾನಂದ.

ಧರ್ಮಕ್ಕಾಗಿ ಹುಟ್ಟುವುದಿಲ್ಲ

ಯಾರೂ ಧರ್ಮಕ್ಕಾಗಿ ಹುಟ್ಟುವುದಿಲ್ಲ. ಅವರು ಅನಂತರ (ಹುಟ್ಟಿದ ನಂತರ) ಅದನ್ನು ಅರಿಸಿಕೊಳ್ಳಬೇಕಾಗಿದೆ.

— ವಿವೇಕಾನಂದ.

ವರ್ಷ ಭವಿಷ್ಯ

(1976ನೇ ದೀಪಾವಳಿಯಿಂದ 1977ನೇ ದೀಪಾವಳಿಯ ವರೆಗೆ.)

(ಎಂ. ಸುಬ್ರಾಯನ್, ಮಂಗಳೂರು-6).

ಮೇಷ:

ಜೀವನದಲ್ಲಿ ಉನ್ನತಿಗಿರುವ ಕಲ್ಪನೆ, ಅದಕ್ಕಿರಬೇಕಾದ ಯತ್ನಗಳಿಂದ ಮುಂದರಿಯುವಿರಿ. ಸಮಾಜದಲ್ಲಿ ಗೌರವವಿದೆ. ಬಂಧುವರ್ಗದ ಕಡೆಯಿಂದ ಅಲ್ಪ ತಾಕಲಾಟಗಳಿರಬಹುದು. ಆದರೆ, ನೀವು ಜಯಿಸಿ ಬರುವಿರಿ. ಮಿತ್ರರ ಭೇಟಿ; ಅವರಿಂದ ಸಹಾಯ ದೊರೆಯಲಿದೆ. ಚತುರ್ಥದ ಶನಿಯು ಗೃಹಸಮಸ್ಯೆಯಲ್ಲಿ ಒಳ್ಳೆಯದನ್ನೆ ಮಾಡುವನು. ಸಪ್ತಮದಲ್ಲಿ ಕುಜರಾಹುಯುತಿ ಆಗಿದ್ದು, ಆದಿಭಾಗದಲ್ಲಿ ಅಹಿತಕರವೆನಿಸುವ ಘಟನೆಗಳಿದ್ದರೂ ಸುಲಭದಲ್ಲೇ ನಿವೃತ್ತಿಯಾಗಲಿದೆ. ಮುಂಗುಸಿಯ ಮೇಲೆ ಹೇಗೆ ಸರ್ಪದ ಪರಿಣಾಮವಾಗಲಾರದೋ ಹಾಗೇ ನಿಮಗೊದಗುವ ವಿಷಮುಪರಿಸ್ಥಿತಿಯಿಂದ ನೀವು ನಿರ್ಬಾಧಿತರಾಗುವಿರಿ. ಸಂಸ್ಥಾ ವ್ಯವಸಾಯಿಗಳು ಉನ್ನತಿಗೆ ಬರುವರು. ವಿದ್ಯಾರ್ಥಿಗಳಿಗೆ ಶಿಕ್ಷಣದಲ್ಲಿ ಪ್ರಗತಿ. ವೈದ್ಯಕೀಯ ವ್ಯವಸಾಯ ಮತ್ತು ಯಾಂತ್ರಿಕ ವ್ಯವಸಾಯದವರಿಗೆ ಈ ವರ್ಷ ಉತ್ತಮ. ರಿಕಾರ್ಡು ವ್ಯವಹಾರಗಳಲ್ಲಿ ಇಷ್ಟಸಿದ್ಧಿ. ಲೇಖಕವರ್ಗದವರಿಗೂ ಬೋಧಕರಿಗೂ ಈ ವರ್ಷದ ಉತ್ತರಾರ್ಧ ಉತ್ತಮ; ವ್ಯಾಪಾರಿಗಳಿಗೆ, ಈ ವರ್ಷದ ಆದಿಭಾಗಕ್ಕಿಂತ ಮಧ್ಯ ಮತ್ತು ಅಂತ್ಯಭಾಗಗಳು ಅಭಿವೃದ್ಧಿಕರ. ಅವಿವಾಹಿತರಿಗೆ ವೃಷಭದ ಗುರುಚಾರವು ದಾಂಪತ್ಯಸುಖಕ್ಕನುಕೂಲ. ಈ ವರ್ಷದಲ್ಲಿ ಆಕಸ್ಮಿಕ ಘಟನೆ, ಸ್ಥಿತ್ಯಂತರಗಳಿವೆ.

ವೃಷಭ:

ಈ ರಾಶಿಯವರು, ಕಾರಣಾಂತರ ತಮ್ಮಲ್ಲುಂಟಾದ ಕೊರಗು ಮನಸ್ಸಿನಿಂದ ಅಶಾಂತಿಯಲ್ಲಿರುವರು. ಈ ವೇಳೆ, ಬೇರೆ ಬೇರೆ ಜನರು ಸಹಾಯಕರಂತೆ ಮುಂಬಂದು, ಅದಕ್ಕಾಗಿ ಸಂಪತ್ತಿನ ಚೆಲ್ಲುವಿಕೆಗೆ ಕಾರಣವಾದೀತು. ಸಹೋದರ, ಬಂಧುವರ್ಗೀಯರಲ್ಲಿ ಅನಿಷ್ಟಘಟನೆಗಳು ಕಂಡುಬಂದಾವು. ಶತ್ರುಗಳೊಡನೆ ಹೋರಾಡುವಿರಿ. ಉನ್ನತ ಸ್ಥಾನಗತರು ಕರ್ಮದಲ್ಲಿ ಯಶಸ್ವಿಗಳಾಗುವರು. ಸ್ಥಾನಾಂತರದ ಸಾಧ್ಯತೆಯಿದೆ. ಕುಟುಂಬೀಯರ ದೇಹಾರೋಗ್ಯ ಚೆನ್ನಾಗಿರದು. ವಿದ್ಯಾರ್ಥಿಗಳಿಗೆ ಉನ್ನತಿಯಿದೆ. ಈ ವರ್ಷ ಆದಿಭಾಗಕ್ಕಿಂತ ಅಂತ್ಯಭಾಗವು, ಶುಭಘಟನೆಗಳಿಂದೊಡಗೂಡಿದೆ. ಕೃಷಿವ್ಯವಸಾಯಿಗಳು ಆರ್ಥಿಕಮಟ್ಟದಲ್ಲಿ ಸುಸ್ಥಿತಿ ಕಾಣುವರು. ಅರರ ರಾಹು ನಿಮಗೆ ಹಲವಾರು ಹೋರಾಟಗಳನ್ನು ವರ್ಷದ ಆದಿಭಾಗದಲ್ಲಿ ಕೊಡುವನು. ನೌಕರರಿಗೆ ಪ್ರಗತಿಯಿದೆ; ವೈದ್ಯಕೀಯ ವ್ಯವಸಾಯದವರಿಗೆ ಉನ್ನತಿ. ತೃತೀಯದ ಶನಿಯು ಧನ ಮತ್ತು ಮಕ್ಕಳ ಬಗ್ಗೆ ಚಿಂತನೆ ತಂದಾನು. ಲೇಖಕರು ಯಶಸ್ವಿಗಳಾಗುವರು. ತರುಣ–ತರುಣಿಯರಿಗೆ ದಾಂಪತ್ಯ ಸುಖಕ್ಕಿರುವ ಸಂಘಟನೆಯಿರುತ್ತದೆ.

ಮಿಥುನ:

ವಿಭಿನ್ನ ಕರ್ಮಗಳಿಂದ ಕೂಡಿರುವಿರಿ; ಇದರಿಂದ ವಿರಾಮ ಕಡಿಮೆ. ಸಂಪತ್ತಿನ ಪ್ರಗತಿ ಬಹುವಾಗಿ ಉಂಟಾಗಲಿರುತ್ತದೆ. ದೂರಗತ ಬಂಧುಜನರ ಭೇಟಿ, ಸಹಾಯಗಳು ಲಭಿಸುವುವು. ಉತ್ತಮ ವಿಚಾರಗಳಿಂದ ಕೂಡಿದವರಾಗಿ ಪ್ರಗತಿಪರ ವ್ಯವಸಾಯಗಳು ಬೆಳೆದು ಬರುವುವು. ನಷ್ಟಸಂಪತ್ತು ಪುನಃ ಲಭಿಸುವುದು. ಮನೆಕಟ್ಟಡಗಳ ನಿರ್ಮಾಣ ಅಥವಾ ಅವುಗಳ ಅದಲುಬದಲಾವಣೆ– ಕೂಡಿಕೆಗಳ ಚಟುವಟಿಕೆಗಳಿವೆ. ವ್ಯಾಪಾರಿಗಳಿಗೆ, ವರ್ಷದ ಪೂರ್ವಾರ್ಧಕ್ಕಿಂತ ಉತ್ತರಾರ್ಧ ಉತ್ತಮ. ಲೇಖಕ–ಲೇಖಕಿಯರಿಗೆ ಯಶಸ್ಸು. ಮೇಷದ ಗುರುಚಾರದಲ್ಲಿ ತರುಣ–ತರುಣಿಯರಿಗೆ ದಾಂಪತ್ಯ ಸಂಘಟನೆ ಸಫಲವಾಗುವುದು. ವೈದ್ಯಕೀಯ ವೃತ್ತಿಯವರಿಗೆ ಈ ವರ್ಷ ಉತ್ತಮವೇ ಇದೆ. ವೈದ್ಯಕೀಯ ಹಾಗೂ ಯಾಂತ್ರಿಕ ವಿಷಯಗಳಲ್ಲಿ ಪ್ರೌಢ ಶಿಕ್ಷಣಕ್ಕಾಗಿ ದೂರ ಪ್ರವಾಸಗಳಿವೆ; ಯಶಸ್ಸೂ ಇದೆ. ಪಂಚಮದ ರಾಹು ಮತ್ತು ದ್ವಿತೀಯದ ಶನಿ—ಇವರು ಸ್ತ್ರೀಯರಿಂದ ಅಪವಾದ ತರಬಹುದು.

ಕರ್ಕಟಕ:

ನಿಮ್ಮ ಕರ್ಮಪಥದಲ್ಲಿ ಸಫಲತೆಗಿರುವ ದಾರಿಗಳು ನೇರವಾಗಿರದೆ, ತೊಳಲುವಿಕೆ ಇದ್ದೀತು. ನಿಮಗೆ ಶನಿಯು ಕರ್ಕಟಕದವನು ವಕ್ರಿಯಾದಾಗ ಕಷ್ಟಗಳು ಕಂಡುಬರುವುವು. ನವಂಬರ ಅಂತ್ಯದಿಂದ ಶನಿಯು ವಕ್ರಿಯಾಗಿ ನೆಲಸುವನು; ಈ ವಕ್ರದಿಂದ ಮಾರ್ಚ ತಿಂಗಳಲ್ಲಿ ಬಿಡುಗಡೆ; ಅಲ್ಲಿಯ ವರೆಗೆ ಕೆಲವು ವ್ಯವಹಾರಗಳಲ್ಲಿ ಸಮಸ್ಯೆಗಳನ್ನು ಬಿಡಿಸಿಕೊಳ್ಳುವ ಪರಿಶ್ರಮವಿದೆ. ಏಕಾದಶದ ಗುರು, ಮಕ್ಕಳಿಗೆ ಅಭ್ಯುದಯಕಾರಕನು. ದೇಹಾರೋಗ್ಯ ಸಂಬಂಧ ಆಕಸ್ಮಿಕ ಘಟನೆಗಳಿರಬಹುದು. ಬಂಧುಶೋಕ ಫಲಗಳು ವೃಷಭದ ಗುರುವಿನಿಂದ ಇವೆ. ಲೇಖಕ-ಲೇಖಕಿಯರಿಗೆ ಸಾಮಾನ್ಯ. ಆಹಾರವಸ್ತು, ಜಲವಸ್ತು, ಔಷಧಗಳು, ಕಲಾವಸ್ತು —ಇವುಗಳ ವ್ಯವಸಾಯದವರಿಗೆ ಆರ್ಥಿಕ ಉನ್ನತಿ ಕಂಡುಬರುವುದು. ನಾಲ್ಕರ ರಾಹು, ಗೃಹವಾತಾವರಣದಲ್ಲಿ ಅಶಾಂತಿಯುಂಟುಮಾಡುವನು. ದೂರಪ್ರವಾಸಗಳಿವೆ. ಪ್ರಯಾಣದಲ್ಲಿ ಜಾಗರೂಕರಾಗಿರಿ. ಕರ್ಕಟಕದ ಶನಿಯು, ವೈದ್ಯಕೀಯ ವ್ಯವಸಾಯಿಗಳಿಗೆ ಉತ್ತಮ ಫಲದಾಯಕನು.

ಸಿಂಹ:

ಆಲಸ್ಯವನ್ನು ಬಿಟ್ಟು, ಉತ್ಸಾಹದಿಂದ ಚಟುವಟಿಕೆಗಳಿಗೆ ಇಳಿಯಿರಿ; ಇದರಿಂದ ನಿಮಗೆ ನಿಶ್ಚಯವಾಗಿ ಯಶಸ್ಸಿದೆ. ಕೌಟುಂಬಿಕ ಸಂಬಂಧವಾದ ಹಲವಾರು ಕಷ್ಟಗಳು ಪರಿಹಾರವಾಗುವುವು. ಸಂಪತ್ತಿನ ದೃಷ್ಟಿಯಿಂದಲೂ ಗೆಲುವೇ ಇದೆ. ಗೌರವದಿಂದ ಬಾಳುವಿರಿ. ಆರೋಗ್ಯವು ತುಸ ಕೆಟ್ಟರೂ, ಶಯ್ಯಾಗ್ರಸ್ತರಾಗುವುದಿಲ್ಲ. ದೊಡ್ಡ ಮನುಷ್ಯರ ಸ್ನೇಹ ಸಹಾಯ ಸಂಪರ್ಕಗಳಿವೆ. ಈ ದೀಪಾವಳಿಯಿಂದ ಎರಡು ತಿಂಗಳೊಳಗೆ ನಿಮ್ಮ ಕಷ್ಟಗಳು ದೂರವಾಗಿ, ಉನ್ನತಿಯ ಅಧ್ಯಾಯ ತೆರೆವುದು. ಶನಿರಾಯನು ಅಪವಾದ, ವಿವಿಧ ಕ್ಲೇಶಗಳನ್ನು ಬಗೆಹರಿಸಿ ಅಭಿವೃದ್ಧಿಪಥಕ್ಕೆ ಸಾಗಿಸುವನು. ಉದ್ಯೋಗಜೀವನದಲ್ಲಿರುವವರಿಗೆ ಅಧಿಕಾರ ಸ್ಥಾನ ಭೀತಿ, ಕರ್ಮಭೀತಿಗಳುಂಟಾಗುವ ಸಂಭವವಿದೆಯಾದರೂ, ವೃಶ್ಚಿಕದ ಕುಜನ ಚಾರದಿಂದ ಅವು ಬಗೆಹರಿಯುವುವು. ತರುಣ—ತರುಣಿಯರಿಗೆ ದಾಂಪತ್ಯಸುಖಸಿದ್ಧಿಗಿರುವ ಅವಕಾಶವು ದಶಂಬರದ ನಂತರ ಸಂಭವಿಸುವುದು. ವಿವಾಹಿತ ತರುಣರಿಗೆ ಕರ್ಮದ ಗುರು ಸಂತಾನ ಸುಖಪ್ರಾಪ್ತಿಕಾರಕನು.

ಕನ್ಯಾ:

ಈ ವರ್ಷದ ಆದಿಭಾಗವು ಬಂಧುಜನರ ಕೂಡಿಕೆ, ಸುಖವಾರ್ತಾಲಾಪಗಳಿಂದ ಕಳೆದುಹೋಗುವುದು. ವಿದ್ಯಾರ್ಥಿಗಳಲ್ಲಿ ನವಮದ ಗುರು, ಜ್ಞಾನಸಾಧನೆಗೆ ಅಧಿಕ ಪ್ರೇರಣೆಕೊಡುವನು. ಕುಟುಂಬದಲ್ಲಿ ನವೀನತೆಯ ವಾತಾವರಣ ಕಂಡುಬರಲಿದೆ. ಪತ್ರವ್ಯವಹಾರ, ರಿಕಾರ್ಡು ವ್ಯವಹಾರಗಳು ಹೆಚ್ಚುವುವು. ಪರಿಷ್ಕರೊಡನೆ ಉಂಟಾದ ತಾಕಲಾಟಗಳು ದೂರಗೊಳ್ಳುವುವು. ವೈದ್ಯಕೀಯ ಹಾಗೂ ಯಾಂತ್ರಿಕ, ರಾಸಾಯನಿಕ ವಿಷಯದ ವಿದ್ಯಾವಂತರಿಗೆ ತೃತೀಯದ ರಾಹುವಿನಿಂದ, ಉಚ್ಚವ್ಯಾಸಂಗಕ್ಕಾಗಿ ವಿದೇಶ ಪ್ರವಾಸಯೋಗವಿದೆ. ಸಹೋದರ, ಬಂಧುವರ್ಗೀಯರಲ್ಲಿ ಜನ್ಮತಾರಾಹು ಅನಿಷ್ಟನಾಗಿದ್ದರೆ ಅನಿಷ್ಟಪರಿಣಾಮವನ್ನುಂಟು ಮಾಡುವನು, ನಿಮಗೆ ಈ ವರ್ಷದಲ್ಲಿ ದಶಂಬರ, ಫೆಬ್ರವರಿ, ಮಾರ್ಚ, ಮೇ ತಿಂಗಳುಗಳು ಒಳ್ಳೆಯದಕ್ಕಿರುವ ಘಟನೆಗಳ ತಿಂಗಳುಗಳಾ

ಗಿವೆ. ರಾಹು ಕುಜ ಶನಿಗಳಿಂದ ಈ ವರ್ಷದಲ್ಲಿ ವಿವಿಧ ಕ್ಲೇಶಗಳು ತಲೆದೋರುವುವು. ಕೌಟುಂಬಿಕ ಜೀವನದವರಿಗೆ ಸಂತಾನ ಸುಖ ಪ್ರಾಪ್ತಿಯಿದೆ.

ತುಲಾ:

ನಿಮ್ಮವರೇ ನಿಮಗೆ ಗುಪ್ತಶತ್ರುಗಳಾಗಿರುವರು. ಅದನ್ನು ನೀವರಿತು ಜಾಣತನದಿಂದ ಕರ್ಮವನ್ನು ಸಾಧಿಸಿ, ಯಶಸ್ವಿಗಳಾಗುವಿರಿ. ದೊಡ್ಡ ಮನುಷ್ಯರ ಸ್ನೇಹ, ಸಹಾಯ, ಒಡನಾಟಗಳನ್ನು ಹೊಂದಿದವರಾಗಿ ನೆಲಸಿರುವಿರಿ. ದೊಡ್ಡ ಸಂಸ್ಥೆಯ ವ್ಯವಸಾಯಕ್ಕಿರುವ ವಿಚಾರ ಕಲ್ಪನೆ, ಆ ಯೋಜನೆಯ ನಿರ್ಮಾಣಕ್ಕಿರುವ ಸಂಪರ್ಕ—ಇದು ಕರ್ಮದ ಶನಿಯಿಂದ ಕಂಡು ಬರುವುದು. ನಿಮ್ಮ ಶತ್ರುಗಳು ತನ್ನಿಂತಾನೆ ಹಾಳಾಗುವರು. ಉದ್ಯೋಗದಲ್ಲಿರುವವರಿಗೆ ಅಧಿಕಾರದಲ್ಲಿ ಹೆಚ್ಚಳದ ಸ್ಥಾನಮಾನಗಳು ಲಭಿಸುವುವು; ಜನ್ಮನಾಶನಿಯು ಚೆನ್ನಾಗಿದ್ದರೆ ಈ ಫಲ ಕಂಡುಬರುವುದಾಗಿದೆ. ಈ ವರ್ಷ ವ್ಯಯದಲ್ಲಿ ನಿಮಗೆ ಪಾಪಸಂಪರ್ಕ ಕಡಿಮೆ; ಇದರಿಂದ ಕೆಟ್ಟ ಪರಿಣಾಮಗಳಿಲ್ಲ. ಈಗಣ ತುಲಾ ರಾಹುವು ಒಳಿತನ್ನೇ ಮಾಡುತ್ತಾನೆ. ಜೀವನದಲ್ಲಿ ಮಹತ್ವಿಕೆಗಿರುವ ಸಂಘಟನೆಯಾಗುವುದು; ದೂರದರ್ಶಿತ್ವದ ಶಕ್ತಿ ಬೆಳೆವುದು.

ವೃಶ್ಚಿಕ:

ವಾದ-ಪ್ರತಿವಾದಗಳಿಗೆಡೆಕೊಡದಿರಿ. ಎದುರಾಗುವ ಸಮಸ್ಯೆಗಳಿಗೆ ವಿವೇಕದಿಂದ ಪರಿಹಾರ ಮಾರ್ಗ ಕಂಡುಕೊಳ್ಳುವುದು ಶ್ರೇಯಸ್ಕರ. ನಿಮ್ಮ ಭಾಗ್ಯದ ಶನಿರಾಯನು ಉನ್ನತವಿಚಾರ ಕಲ್ಪನೆಗಳನ್ನೇ ಕೊಡುವನು. ಆರ್ಥಿಕದಲ್ಲಿ ಬರಬಹುದಾದ ಸಮಸ್ಯೆಗಳಿಗೆ ಪರಿಹಾರವುಂಟಾಗುವುದು. ಕುಟುಂಬದಲ್ಲಿ ಶುಭಕಾರ್ಯಗಳಿವೆ. ವ್ಯಯದ ರಾಹುವು, ಧಾರ್ಮಿಕ ವಿಷಯಗಳ ಕಡೆಗೆ ಗಮನ ಹರಿಯಿಸುವನು. ಅಧಿಕಾರ ಸ್ಥಾನದಲ್ಲಿರುವವರು ಊರ್ಜಿತಾವಸ್ಥೆಗೆ ಬರುವರು. ಲೇಖಕ-ಲೇಖಕಿಯರಿಗೆ ಈ ವರ್ಷ ಉಜ್ವಲ ಭವಿಷ್ಯವಿದೆ. ತರುಣ-ತರುಣಿಯರಿಗೆ ವಿವಾಹ ವಿಷಯದಲ್ಲಿ ಮಾಡಿದ ಯತ್ನ—1977ರ ಫೆಬ್ರವರಿ ಮೇಲಣ ಕಾಲದಲ್ಲಿ ಜಯಸಿದ್ಧಿ ತರುವುದು. ವ್ಯಾಪಾರಿಗಳಿಗೆ ಹೊಸ ಸಂಸ್ಥೆಯ ವ್ಯವಸಾಯಕ್ಕಿರುವ ಘಟನೆಯಿದೆ. ಯಾಂತ್ರಿಕ ವ್ಯವಸಾಯ, ಕಾಡುತ್ಪತ್ತಿ, ಕೃಷಿಕರಿಗೆ ಕಳೆದ ವರ್ಷಕ್ಕಿಂತ ಈ ವರ್ಷವು ಅಭಿವೃದ್ಧಿಕರ.

ಧನು:

ನಿಮಗೆ ಲಾಭದ ರಾಹು ಶುಭಕಾರಕನಿದ್ದರೂ, ಎಂಟರ ಶನಿರಾಯನು ತುಂಬಾ ತಾಕಲಾಟಗಳನ್ನೂ ಎದುರಾಳಿಗಳೊಡನೆ ವೈಷಮ್ಯ ತೆಗಿರುವ ಸಂಘಟನೆಗಳನ್ನೂ ಉಂಟುಮಾಡಬಹುದು. ಆರ್ಥಿಕದೊಂದಿಗೆ ರಿಕಾರ್ಡು ವ್ಯವಹಾರಗಳೂ ಹೆಚ್ಚುವುವು. ಕುಜನು, ಧನು ಕನ್ಯಾ ಮಿಥುನಗಳಲ್ಲಿರುವಾಗ ವಾಹನಾದಿಗಳ ಅಪಘಾತ ಹಾಗೂ ಅಸ್ತ್ರ ಭಯಗಳನ್ನುಂಟುಮಾಡುವ ಸಂಭವವಿದೆ. ಪಣಿಜರಿಗೆ ನಷ್ಟಸಂಪತ್ತಿನ ಕೂಡಿಕೆ ಆರ್ಥಿಕದ ಹೆಚ್ಚಳಗಳುಂಟಾಗುತ್ತವೆ. ಸುಸ್ಥಾನಿರ್ಮಾಣ ಹೊಣೆಗಾರಿಕೆಗಳು ಹೊಂದಿಬರಲಿವೆ—ಜನ್ಮನಾ ಶನಿ ಚೆನ್ನಾಗಿದ್ದರೆ ಈ ಶುಭ ಫಲಗಳಿರುವುವು, ಅನ್ಯಥಾ ಅನಿಷ್ಟಫಲಗಳಾಗುವುವು. ಆರರ ಗುರು ಶತ್ರುಗಳೊಡನೆ ಹೋರಾಟವುಂಟುಮಾಡುವನಾದರೂ, ನಿಮ್ಮ ರಾಶ್ಯಧಿಪ ಗುರು ಶತ್ರುಸಂಪರ್ಕಗತವಾಗುವುದರಿಂದ ದೇಹಸುಖಾರೋಗ್ಯ ಭೀತಿ ನಿರ್ಮಾಣಗಳು ದಶಂಬರ ವರೆಗೆ ಹೆಚ್ಚಿರುತ್ತವೆ. ಚಿನ್ನ ಬೆಳ್ಳಿ ಆಭರಣ ವಸ್ತು ವ್ಯಾಪಾರಿಗಳಿಗೆ ತುಂಬ ವೃದ್ಧಿ.

ಮಕರ:

ಗುಣ, ಶೀಲ, ಕರ್ಮಗಳಿಂದ ಜೀವನವನ್ನು ಉತ್ತಮಗೊಳಿಸುವ ನಿಮ್ಮ ಶ್ರದ್ಧೆಯಿಂದ, ಘನತೆಯ ವ್ಯವಸಾಯ ಚಿಂತನೆ ನಿಮ್ಮಲ್ಲಿ ಬೆಳೆವುದು. ರಿಕಾರ್ಡು ವ್ಯವಹಾರಗಳಲ್ಲಿ ಜಯಸಿದ್ಧಿ. ಪ್ರವಾಸಯುಕ್ತರಾಗಿ ಕಂಡುಬರುವಿರಿ. ಮಕ್ಕಳ ಆರೋಗ್ಯದ ವಿಷಯದಲ್ಲಿ ಜಾಗರೂಕರಾಗಿರಿ. ವ್ಯಾಪಾರೀವರ್ಗದವರಿಗೆ ಅಭಿವೃದ್ಧಿ ಇದೆ, ಆದರೆ ಮಾನಸಿಕ ಶಾಂತಿಯು ಯಾವಾಗಲೂ ಕಡಿಮೆ. ಅಲ್ಲಿ-ಇಲ್ಲಿ ಸಂಚಾರ ಕೆಲಸಗಳ ತಾಕಲಾಟಗಳು ಬಹುವಾಗಿದ್ದರೂ ಮಾನಕ್ಕೆ ಕುಂದಿಲ್ಲದೆ ಮುಂದರಿಯುವಿರಿ. ನಿವಾಸಸ್ಥಾನ ಕಟ್ಟಡ ಯಾ ದುರಸ್ತಿಗೆ ಕೈಹಚ್ಚುವಿರಿ. ಈ ಮೊದಲು ವಿದ್ಯೆಯಲ್ಲಿ ಹಿಂದುಳಿದ ಈ ರಾಶಿಯ ವಿದ್ಯಾರ್ಥಿಗಳು ಈ ವರ್ಷ ಪ್ರಗತಿ ಹೊಂದುವರು. ಬೋಧಕವರ್ಗಕ್ಕೆ ಈ ವರ್ಷವು ಸಾಮಾನ್ಯ. ಆಹಾರವಸ್ತು, ಕಲಾವಸ್ತು ವ್ಯವಸಾಯಿಗಳಿಗೆ ಉನ್ನತಿಯಿದೆ. ನಿಮಗೆ ನಿಮ್ಮ ಜನ್ಮಮಾಸದ 3-5-9-10ನೇ ತಿಂಗಳುಗಳಲ್ಲಿ ರಿಕಾರ್ಡು ವ್ಯವಹಾರದಲ್ಲಿ ಅನುಕೂಲ; ಪ್ರವಾಸಗಳಿರುತ್ತವೆ.

ಕುಂಭ:

ನಿಮ್ಮ ಕರ್ಮದಲ್ಲಿ ಶ್ರೇಷ್ಠತೆ, ಘನತೆ, ನೈಪುಣ್ಯಗಳು ತುಂಬಿ ಬರುವ ಸತತ ಯತ್ನದಲ್ಲೇ ಇದ್ದು, ಇದರಿಂದ ಯಶಸ್ವಿಯಾಗುವಿರಿ. ಆತ್ಮೀಯ ಬಂಧುವರ್ಗೀಯರೇ ವಿರೋಧಿಗಳಾಗಿದ್ದರೂ, ಅವರಿಂದ ಬಂದ ಕಿರುಕುಳಗಳು ಅವರಿಗೇ ಮರಳಿ ಹೊಡೆವುವು. ಸಂಪತ್ತಿನ ವಿಚಾರದಲ್ಲಿ ಉಂಟಾಗಿರುವ ಚಿಂತೆಯು ದೂರ ಸರಿದು, ಅಭ್ಯುದಯಕ್ಕಿರುವ ಶುಭದಿನಗಳು ಮೂಡುವುವು. ದೊಡ್ಡ ಸ್ಥಾನಮಾನಗಳಲ್ಲಿರುವವರ ಸಹಾಯ ಸಂಪರ್ಕಗಳು, ದಶಂಬರ ತಿಂಗಳ ನಂತರ ಸಿದ್ಧಿಸಿ, ಪ್ರಗತಿಯೇ ಕಂಡುಬರುವುದು. ಕೈಗಾರಿಕೆ, ಕೃಷಿ, ಕಲೆ, ವೈದ್ಯಕೀಯ ಸಂಸ್ಥಾ ವ್ಯವಸಾಯದವರಿಗೆ ಈ ವರುಷವು ಶನಿ ಕುಜರಿಂದ ಉತ್ತಮಫಲದಾಯಕವಾಗಲಿದೆ. ಮಾತ್ರವಲ್ಲದೆ, ದಶಂಬರ, ಜನವರಿ, ಮೇ, ಅಗೋಸ್ತು, ಸಪ್ಟೆಂಬರ ತಿಂಗಳುಗಳು ವಿಶೇಷ ಉನ್ನತಿಯವು. ಜನ್ಮನಾ ಕರ್ಕಟಕ, ವೃಶ್ಚಿಕ, ಮೀನ, ಮೇಷ, ಸಿಂಹ, ಧನುಗಳಲ್ಲಿ ಶನಿ ಇದ್ದವರಿಗೆ ಮತ್ತು ಅವನು ಶುಭ ಸ್ಥಾನ ಸಂಪರ್ಕ ಹೊಂದಿದಂಥವರಿಗೆ ಈ ವರ್ಷವು ಜೀವನದಲ್ಲಿ ಮಹತ್ವಿಕೆಯ ವರ್ಷವೇ ಆಗಿದೆ.

ಮೀನ:

ಕೃಷಿ ಯಾ ವ್ಯಾಪಾರೋದ್ಯೋಗಗಳಲ್ಲಿ ಬೆಳವಣಿಗೆಯ ಯಶಸ್ಸನ್ನು ಹೊಂದಿದವರಾಗಿರುವಿರಿ. ರಿಕಾರ್ಡು ವ್ಯವಹಾರಗಳು ಈ ವರ್ಷದ ಜನವರಿಯ ವರೆಗೆ ಅಪೂರ್ಣವಾಗಿ ಉಳಿದು, ಮುಂದಣ ಕಾಲ ಎಲ್ಲವೂ ಅನುಕೂಲಕ್ಕೆ ಬರುವುದು. ಐದರಲ್ಲಿರುವ ಶನಿಯು ಮಕ್ಕಳ ಮತ್ತು ಬಂಧುವರ್ಗೀಯರ ಆರೋಗ್ಯಕ್ಕಾಗಿ ವ್ಯಯವನ್ನುಂಟುಮಾಡಿಸುವನು. ವಿದ್ಯಾರ್ಥಿಗಳು ತಕ್ಕ ಪರಿಶ್ರಮದಿಂದ ಈ ವರ್ಷ ಜಯ ಸಾಧಿಸುವರು. ಆಹಾರವಸ್ತು, ರಾಸಾಯನಿಕ ವಸ್ತು ವ್ಯವಸಾಯದವರಿಗೆ ಅಭಿವೃದ್ಧಿಯಿದೆ. ದೇವತಾನುಗ್ರಹದ ಧರ್ಮಕಾರ್ಯಗಳು ನಡೆಯುವುವು. ರಾಜಕೀಯ ವಿಷಯದವರಿಗೆ ಈ ವರುಷ ಮನಸ್ಸಿಗೆ ನೆಮ್ಮದಿಯಿಲ್ಲ. ನ್ಯಾಯವಾದಿಗಳಿಗೆ ಪ್ರಗತಿಪರ ವರ್ಷವಿದು. ಅನೇಕ ಪ್ರವಾಸಗಳ ಸಂಭವವಿದೆ. ಕುಟುಂಬದಲ್ಲಿ ಶುಭಕಾರ್ಯಗಳು ನಡೆಯುವುವು. ಕೃಷಿಕರಿಗೆ ಈ ವರ್ಷ, ಕಳೆದ ವರ್ಷಕ್ಕಿಂತ ಲಾಭಪ್ರದ; ಮಾತ್ರವಲ್ಲ; ಕೃಷಿವ್ಯವಸಾಯವನ್ನು ಮತ್ತೂ ಊರ್ಜಿತಕ್ಕೆ ತರುವ ಉತ್ಸಾಹ ಹೆಚ್ಚುವುದು.

—o—

ಬಲಾತ್ಕಾರವಾಗಿ ಸುಧಾರಿಸಲು ಮಾಡಿದ ಯತ್ನವೆಲ್ಲಾ ಸುಧಾರಣೆಯನ್ನೇ ತಡೆಯುವುದು. "ನೀನು ಕೆಟ್ಟವನು"— ಎಂದು ಹೇಳಬೇಡಿ. "ನೀನು ಒಳ್ಳೆಯವನು, ಮತ್ತಷ್ಟು ಒಳ್ಳೆಯವನಾಗು"— ಎನ್ನಿ.

—ವಿವೇಕಾನಂದ.

——



ಬೆಳಕಿನ ಕಾಣಿಕೆಗಾಗಿ

ಜಗತಿಗೆ ತಿಳಿವಿನ ಬೆಳಕನು ಹಿಡಿದು
ಮನದಲಿ ತುಂಬಿದ ಕತ್ತಲೆ ಕಳೆದು
ಅನುದಿನ ಕರ್ಮದ ಮಾರ್ಗದೆ ಬೆಳೆದು
ಮನುಕುಲಕಾಗಿಹ ಬನ್ನವ ತೊಡೆದು
ಜನಗಣ ತಂತ್ರ ನೀತಿಯ ಸಾರ್ದು
ತನುಮನಕಾಯದಿ ಸತ್ಕಕೆ ಪಡೆದು
ಘನತೆಯ ಜೀವನದೈಸಿರಿ ತಂದು
ಕೊನರಿಸಿ ಬಿಡುತೆಯ ಘೋಷಣೆ ಭುವಿಗೆ
ಸಗ್ಗದ ಸೃಷ್ಟಿಗೆ ದಿವಿಜರ ನೆಲೆಗೆ
ಜಗ್ಗದೆ ಎಲ್ಲರು ಹಿಡಿಯುವ ದೀವಿಗೆ
ಹಿಗ್ಗುವ ಕಾರ್ಯವು ಇದುವೇ ನಮಗೆ
ಒಗ್ಗದೆ ಕುಹಕದ ತಂತ್ರದ ಪಡೆಗೆ
ಬಗ್ಗದೆ ಧೃತಿಯನು ಎಂದೂ ಕೆಡದೆ
ಸುಗ್ಗಿಯ ಸುಖಕಿಹ ಸಾಧನೆ ಜಡದೆ
ಇದುವೇ ನಮಗಿಹ ದೀಪಿಕೆಯಾಗಿ
ಒದಗಲಿ ಬೆಳಕಿನ ಕಾಣಿಕೆಗಾಗಿ

—ಎಮ್. ಸುಬ್ರಾಯನ್

ರಾಜಕುಮಾರಿ

(ಯೂರಿ ಕುರನೋವ್)

ಅಂಗಳದಲ್ಲಿ ಬಾವಿಯೊಂದನ್ನು ತೋಡಲಾಗಿದ್ದಿತು. ಅದರ ಬಳಿಯಲ್ಲಿ ಪುಟ್ಟ ಕಪ್ಪೆಯೊಂದು ವಾಸಕ್ಕಾರಂಭಿಸಿತು.

ಇಡೀ ದಿನವನ್ನು ಬಾವಿಯ ಕರಿನೆರಳಲ್ಲಿ ಕಳೆಯುತ್ತಿದ್ದ ಕಪ್ಪೆ, ಯಾರಾದರೂ ಬಂದೊಡನೆ ಹಳೆಯ ಬಕೆಟ್ಟೊಂದರ ಅಡಿಯಲ್ಲಿ ಅಡಗಿಕೊಳ್ಳುತ್ತಿತ್ತು.

ಒಂದು ದಿನ ಪುಟ್ಟ ಕೊಲ್ಯಾ ನೀರಿಗೆಂದು ಬಾವಿಗೆ ಬಂದಾಗ ಹಳೆಯ ಬಕೆಟ್ ಬಳಿಯಲ್ಲಿ ಏನೊ ನೆಗೆಯುತ್ತಿರುವುದು ಗಮನಕ್ಕೆ ಬಂದಿತು. ಕೊಲ್ಯಾಗೆ ಮೊದಲು ಭಯವಾಯಿತು. ನಂತರ ಮೆತ್ತಗೆ ಇಟ್ಟಿಗೆ ಚೂರೊಂದನ್ನು ಎತ್ತಿಕೊಂಡು ಬಕೆಟ್ ಬಳಿ ತೆರಳಿದಾಗ ಅದರಡಿಯಲ್ಲಿಂದ ಕಪ್ಪೆ ಹೊರಕ್ಕೆ ಬಂದು ಕಾಣಿಸಿಕೊಂಡಿತು. ಪಾರಾಗಲು ಅದಕ್ಕೆ ದಾರಿಯೇ ಇರಲಿಲ್ಲ. ನೆಲಕ್ಕೆ ಒತ್ತೊತ್ತಾಗಿ ಕುಳಿತುಕೊಂಡು ಭಯಭೀತಿಯಿಂದ, ತೆರೆದ ದೊಡ್ಡ ಕಣ್ಣುಗಳಿಂದ ಕೊಲ್ಯಾನನ್ನೆ ನೋಡತೊಡಗಿತು.

ಚಕಿತನಾಗಿ ನಿಂತುಕೊಂಡಿದ್ದ ಕೊಲ್ಯಾಗೆ ಒಮ್ಮೆಲೆ ಯಕ್ಷಿಣಿ ಕಥೆಯೊಂದು ನೆನಪಾಯಿತು. ನೀಚ ಮಾಂತ್ರಿಕನೊಬ್ಬನಿಂದ ಕಪ್ಪೆಯಾಗಿ ಮಾರ್ಪಟ್ಟಿದ್ದ ಸುಂದರ ರಾಜಕುಮಾರಿಯೊಬ್ಬಳನ್ನು ರಾಜಕುಮಾರ ಇವಾನ್ ಹೇಗೆ ರಕ್ಷಿಸಿದನೆಂಬುದನ್ನು ಕಥೆ ಹೇಳುತ್ತಿತ್ತು.

ಕೈಯಲ್ಲಿ ಇಟ್ಟಿಗೆ ಚೂರನ್ನು ಹಿಡಿದುಕೊಂಡೇ ಕೊಲ್ಯಾ ಇನ್ನೊಂದು ಹೆಜ್ಜೆ ಮುಂದೆ ಬಂದು, ಮೆತ್ತಗಿನ ಧ್ವನಿಯಲ್ಲಿ ಹೇಳಿದ:

"ಅಂಜಬೇಡ!"

ಕ್ಷಣಕಾಲ ಮೌನವಾಗಿದ್ದು ಮತ್ತೆ ಕೇಳಿದ:

"ನೀನು ರಾಜಕುಮಾರಿಯೇ?"

ಕಪ್ಪೆ ತನ್ನ ದೊಡ್ಡದಾದ ಗುಂಡಗಿನ ಕಪ್ಪುಗಣ್ಣುಗಳಿಂದ ನೋಡುತ್ತಲೆ ಇತ್ತು. ಕೊರಳ ಕೆಳಗಿನ ಆದರ ಬಿಳಿ ಚೀಲ ರಭಸದಿಂದ ಹಿಂದೆ ಮುಂದೆ ಸರಿದಾಡಲಾರಂಭಿಸಿತು—ಅದು ಮಾತನಾಡಲು ಪ್ರಯತ್ನಿಸುತ್ತಿದೆಯೋ ಏನೋ ಎಂಬಂತೆ!

"ಈ ಮಾಟದಿಂದ ನಿನಗೆಂದು ಮುಕ್ತಿ?"

ಕಥೆಯಲ್ಲಿಯ ಭಾಷೆಯಂತೆಯೇ ಕೊಲ್ಯಾ ಮಾತನಾಡುತಿದ್ದ.

ಕಪ್ಪೆಯ ಚೀಲ ಹಿಂದೆ ಮುಂದೆ ತೂಗುತ್ತಲೇ ಇತ್ತು.

"ಪರವಾಗಿಲ್ಲ, ಈಗ ಏನೂ ಹೇಳಬೇಡ, ಬಿಡು!" ಎಂದ ಕೊಲ್ಯಾ. "ನಾನು ದೊಡ್ಡವನಾದಾಗ ನೀನು ಇಡೀ ಕಥೆಯನ್ನೇ ನನಗೆ ಹೇಳುವೆಯಂತೆ. ಅಲ್ಲಿಯವರೆಗೂ ಬಾವಿಯ ಹತ್ತಿರ ಇಲ್ಲವೆ ಆ ಮುಖಮಂಟಪದ ಬಳಿ ವಾಸವಾಗಿರು."

ಕೊಲ್ಯಾ ಇಟ್ಟಿಗೆ ಚೂರನ್ನು ದೂರ ಎಸೆದ. ನೀರು ತೆಗೆದುಕೊಂಡು ಮನೆಯ ಕಡೆಗೆ ಹೊರಟಾಗ ಇದ್ದಕ್ಕಿದ್ದಂತೆ ಮೂಕ ವಿಸ್ಮಿತನಾಗಿ ನಿಂತುಕೊಂಡ. ಕಪ್ಪೆ ಕೂತುಕೊಂಡಿದ್ದ ಸ್ಥಳದಲ್ಲಿ ಈಗ ಪುಟ್ಟ ಹುಡುಗಿಯೊಬ್ಬಳು ನಿಂತಿರುವುದು ಕಾಣಿಸುತ್ತಿದೆ! ಕೊಲ್ಯಾಗಿಂತ ಸ್ವಲ್ಪ ಚಿಕ್ಕವಳು, ಲಕ್ಷಣವಂತೆ, ಚೂಪಾದ ಮೂಗು, ಮೊಳಕಾಲವರೆಗೆ ತೊಟ್ಟ ಅರುಣವರ್ಣದ ಫ್ರಾಕು, ಕೈಯಲ್ಲೊಂದು ಸಣ್ಣ ಪಾತ್ರೆ. ಕೊಲ್ಯಾ ಚುರುಕು ಕಣ್ಣಿನಿಂದ, ಅವಳು ನಿಂತುಕೊಂಡಿದ್ದ ನೆಲವನ್ನು ಹುಡುಕುನೋಟದಿಂದ ನೋಡಿದ. ಆದರೆ, ಅಲ್ಲಿ ಕಪ್ಪೆ ಇರಲಿಲ್ಲ.

"ಈಗಾಗಲೆ ನಿನಗೆ ಮಾಟದಿಂದ ಮುಕ್ತಿಯಾಯಿತೇ?" ಕೊಲ್ಯಾ ಕೇಳಿದ.

"ಏನು ಹಾಗೆಂದರೆ? ಯಾವಾಗ?" ಹುಡುಗಿ ಅಚ್ಚರಿಯಿಂದ ಕೇಳಿದಳು.

"ಯಾವಾಗ? ಈಗ ತಾನೆ!"

"ಇಲ್ಲ, ಪ್ರಯಾಣದಿಂದ ಬಂದಬಳಿಕ ಈಗಷ್ಟೆ ಬದಲಾಯಿಸಿದೆ."

"ಅದನ್ನು 'ಬದಲಾಯಿಸಿದೆ' ಎಂದು ಹೇಳುತ್ತೀಯಾ?" ಕೊಲ್ಯಾ ಸೊರಗುಟ್ಟಿದ; "ನಮಗೇನು ಗೊತ್ತಾಗುತ್ತೆ?"

"ಏನಿಲ್ಲ ಬಿಡು, ನಾನು ಒಂದಿಷ್ಟು ನೀರು ತಗೊಳ್ಳಬೇಕು" ಎಂದುತ್ತರಿಸಿದಳು ಪುಟ್ಟ ಹುಡುಗಿ.

ಕೊಲ್ಯಾ ಪಕ್ಕಕ್ಕೆ ಸರಿದು ಮತ್ತೆ ಕೇಳಿದ.

"ನೀನೆಂಥ ರಾಜಕುಮಾರಿ?"

"ನಂಗೊತ್ತಿಲ್ಲ" ಎಂದಳವಳು.

ನೀರು ಎತ್ತಿಕೊಂಡು ಆಕೆ ಗೇಟಿನ ಕಡೆಗೆ ನಡೆದಳು.

"ಎಲ್ಲಿ ಹೋಗುತಿದ್ದಿಯಾ?" ಎಂದು, ಕೊಲ್ಯಾ ಕೊಂಚ ಸಿಡುಕಿನಿಂದ ಕೇಳಿದ.

"ಮನೆಗೆ" ಎಂದಳು ಹುಡುಗಿ. "ನಾವು ಇಲ್ಲೇ ಇದ್ದೇವೆ—ಮುಂದಿನ ಮನೆಯಲ್ಲಿ, ಈ ದಿನವೆ ಹೊಸ ಮನೆಗೆ ಬಂದಿದ್ದೇವೆ. ನೆಲವನ್ನು ಸ್ವಚ್ಛಮಾಡಲು ನೀರು ಬೇಕಾಗಿದೆ."

ಹುಡುಗಿ ನಿಧಾನವಾಗಿ ಗೇಟು ದಾಟಿಕೊಂಡು ಹೋದಳು—ತನ್ನ ಕೈಯಲ್ಲಿಯ ಪಾತ್ರೆಯಿಂದ ನೀರು ಬೀಳುತ್ತಿರುವ ಪರಿವೆಯಿಲ್ಲದೆ ಆಕೆ ಹೋಗುತಿದ್ದಳು.

('ಸ್ಪುತ್ನಿಕ್' ಪತ್ರಿಕೆಯಿಂದ)

NOTICE

Civil Judge's Court,
Mangalore.

S. C. 101/1976.

Syndicate Bank ... Plaintiff

and

H. K. Hasanabba &
another .... Defendants.

To

1) H. K. Hasanabba
S/o Puthabba, Pan Beeda Shop, near Milagres Church, Mangalore.

2) H. K. Ahmed, S/o Puthabba, H. K. Stall, Impala Building, Kankanady, Mangalore.

Please take notice that the suit filed for recovery of amount due is posted to 15–11–1976. If you fail to appear on that date at 11 A. M. the suit will be decreed declaring you exparte.

(By order)

U. R. KINI,
Advocate for Plaintiff.

Mangalore, 19-10-1976.

ಪೋರ್ಟ್ ಟ್ರಸ್ಟಿಗೆ ಚೇಂಬರಿನಿಂದ ಆಯ್ಕೆ

ಕೆನರಾ ಚೇಂಬರ್ ಒಫ್ ಕೊಮರ್ಸ್ ಎಂಡ್ ಇಂಡಸ್ಟ್ರಿಯ ಪರವಾಗಿ ಮಂಗಳೂರು ಪೋರ್ಟ್ ಟ್ರಸ್ಟ್ ಬೋರ್ಡಿಗೆ, ಓರ್ವ ಸದಸ್ಯರಾಗಿದ್ದ ಶ್ರೀ। ದಾಮೋದರ ಎಮ್. ಪೈಯವರ ನಿಧನದಿಂದ ತೆರವಾದ ಸ್ಥಾನಕ್ಕೆ, ಶ್ರೀ। ಎಮ್. ಬಾಲಕೃಷ್ಣ ಕಾಮತ್‌ರವರು ಮುಂದಿನ ಎರಡು ವರ್ಷಗಳಿಗೆ, ತಾ. ೨೭-೧೦-'೭೬ರಲ್ಲಿ ಸೇರಿದ ಚೇಂಬರಿನ ಸಭೆಯಲ್ಲಿ ಆರಿಸಲ್ಪಟ್ಟಿರುವರು.

ಕಾರ್ಕಳ ಲಕ್ಷದೀಪೋತ್ಸವ

ಕಾರ್ಕಳ ಶ್ರೀ ವೆಂಕಟರಮಣ ದೇವಸ್ಥಾನದ ಲಕ್ಷದೀಪೋತ್ಸವವು, ತಾರೀಕು ೩-೧೧-'೭೬ನೇ ಬುಧವಾರ ಉತ್ಥಾನ ದ್ವಾದಶಿಯಂದು ಪ್ರಾರಂಭವಾಗಿ ತಾ. ೧೩-೧೧-೭೬ರಂದು "ಮರುದೀಪೋತ್ಸವ"ದಿಂದ ಮುಕ್ತಾಯವಾಗುವುದು. (ತಾ. ೫ ಮತ್ತು ೬ರಂದು ಸಂತರ್ಪಣೆ; ತಾ. ೧೧ರಂದು ಕೆರೆ ದೀಪೋತ್ಸವ. ತಾ. ೧೨ರಂದು ವನಭೋಜನ.—ರಾತ್ರೆ ದೀಪೋತ್ಸವ).

NOTICE

District Judge's Court, Mangalore.

P. & S. C. 68/1976.

Panbala Kanchan and others ... Petitioners.

To: All concerned.

Whereas the Petitioners have applied for succession certificate in respect of the estate belonging to late Korapolu Bengsu and the same is posted to 5-11-1976. If anybody has got objection, they should appear on that date at 11 A. M. and file the same. In default the matter will be decided as prayed for.

A. Krishna Rao,
Advocate for Petitioner.

Mangalore, 16-10-1976.

NOTICE

District Judge's Court, Mangalore.

P. & S. C. 69/1976.

A. Sheshagiri Hebbar and others ... Petitioners.

To: All concerned,

Whereas the Petitioners have applied for succession certificate in respect of the estate belonging to late Amsadi Ananthaya Hebbar and the same is posted to 8—11—1976. If anybody has got objection, they should appear on that date at 11 A. M. and file the same In default the matter will be decided as prayed for.

A Krishna Rao,
Advocate for Petitioner.

Mangalore, 16-10-1976.

ಉಡುಪಿ ಪುರಸಭೆಗೆ ಅಧ್ಯಕ್ಷ - ಉಪಾಧ್ಯಕ್ಷರುಗಳ ಆಯ್ಕೆ

ಉಡುಪಿ ನಗರಸಭೆಯ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಗಳಿಗೆ ಚುನಾವಣೆಯು ತಾ. ೨೭-೧೦.೭೬ನೇ ಬುಧವಾರ. ಉಡುಪಿ ತಹಶೀಲ್ದಾರ ಶ್ರೀ। ಶಾಂತಿರಾಜ್‌ರವರು ಚುನಾವಣಾಧಿಕಾರಿಯಾಗಿ ನಿರ್ವಹಿಸಿ-ಜನ ಸಂಘದ ಶ್ರೀ। ಯು. ಮೋಹನದಾಸರವರು ಅಧ್ಯಕ್ಷರಾಗಿಯೂ. 'ರಾಯಭಾರಿ'ಯ ಸಂಪಾದಕ ಶ್ರೀ। ಎಸ್. ಎಲ್. ನಾರಾಯಣ ಭಟ್‌ರವರು ಉಪಾಧ್ಯಕ್ಷರಾಗಿಯೂ ಆಯ್ಕೆ ಹೊಂದಿದರು. (ಮತದಾನದಲ್ಲಿ ಒಟ್ಟು ಒಂಭತ್ತು ಮಂದಿ ಸದಸ್ಯರು ಭಾಗವಹಿಸಿದ್ದರೆಂದೂ, ಕೊಂಗ್ರೆಸ್ ಪಕ್ಷೀಯ ಸದಸ್ಯರು ಮತದಾನದಲ್ಲಿ ಭಾಗವಹಿಸಿಲ್ಲವೆಂದೂ ತಿಳಿಯಲಾಗಿದೆ).

ಬಂಟವಾಳದಲ್ಲಿ ಕೊರ್ಪೊರೇಶನ್ ಬೇಂಕಿನ 204ನೇ ಶಾಖೆ

ಕೊರ್ಪೊರೇಶನ್ ಬೇಂಕಿನ ೨೦೪ನೇ ಶಾಖೆಯು, ತಾ. ೨೭ನೇ ಬುಧವಾರ, ಶ್ರೀ। ಬಂಟವಾಳ ಮಾಧವ ಶೆಣೈಯವರಿಂದ ಉದ್ಘಾಟಿಸಲ್ಪಟ್ಟಿತು. ಕೊರ್ಪೊರೇಶನ್ ಬೇಂಕು ಕಳೆದ ೭ ವರ್ಷಗಳಲ್ಲಿ ಗಣನೀಯ ಅಭಿವೃದ್ಧಿ ಸಾಧಿಸಿದುದನ್ನು ಶ್ರೀ। ಮಾಧವ ಶೆಣೈಯವರು ಪ್ರಶಂಸಿಸಿ, ಈ ಹೊಸ ಶಾಖೆಗೆ ಯಶಸ್ಸು ಕೋರಿದರು. ಮಂಗಳೂರು ರೋಟರಿ ಕ್ಲಬ್ಬಿನ ಅಧ್ಯಕ್ಷ ಶ್ರೀ। ಬಿ. ದಾಮೋದರ ಪ್ರಭುಗಳವರು ಬೇಂಕುಗಳಲ್ಲಿ ಠೇವಣಿದಾರರೂ ಸಾಲ ಸೌಲಭ್ಯ ಪಡೆವವರೂ ಒಂದು ರಥದ ಎರಡು ಚಕ್ರಗಳಂತೆ-ಎನ್ನುತ್ತ, ಆರ್ಥಿಕವಾಗಿ ಹಿಂದುಳಿದವರೂ ಬೇಂಕುಗಳಿಂದ ಇಂದು ಅನೇಕ ಸವಲತ್ತುಗಳನ್ನು ಪಡೆಯಬಹುದಾಗಿದೆ. ಕೊರ್ಪೊರೇಶನಿನ ಈ ಶಾಖೆಯು ಅಂಥ ಸೌಲಭ್ಯಗಳನ್ನು ವಿಸ್ತರಿಸಲಿ-ಎಂದಾಶಿಸಿದರು, ಬಂಟವಾಳ ಪುರಸಭಾ ಅಧ್ಯಕ್ಷ ಶ್ರೀ। ಎಸ್. ವಿಠ್ಠಲರಾವ್‌ರವರೂ, ಶ್ರೀ। ಪಿ. ಲಕ್ಷ್ಮಣ ಪ್ರಭುಗಳವರೂ ಬೇಂಕಿಗೆ ಶುಭ ಕೋರಿ ಮಾತಾಡಿದರು. ಅಧ್ಯಕ್ಷತೆ ವಹಿಸಿದ ಶ್ರೀ। ಬಿ, ನಾರಾಯಣ ನಾಯಕ್‌ರವರು ಭಾರತದಲ್ಲೇ ನಮ್ಮ ಜಿಲ್ಲೆಯು ಬೇಂಕಿಂಗ್ ವ್ಯವಹಾರದಲ್ಲಿ ಮುಂದುವರಿದ ಜಿಲ್ಲೆಯೆಂದೂ, ಇದು ಪ್ರಗತಿಯ ಸಂಕೇತವೆಂದೂ ಹೇಳಿ, ಬಂಟವಾಳದ ಈ ಶಾಖೆಯು ಈ ಪಟ್ಟಣದ ಹಿತಾಸಕ್ತಿಗಳಿಗೆ ಪರಿಶ್ರಮಿಸಲೆಂದು ಹಾರೈಸಿದರು. ಆರಂಭದಲ್ಲಿ, ಕೊರ್ಪೊರೇಶನ್ ಬೇಂಕಿನ ಚೆಯರ್ಮೇನ್ ಶ್ರೀ। ಎನ್. ಎಸ್. ಪೈಯವರು ಸ್ವಾಗತಿಸುತ್ತ ಬೇಂಕಿನ ಈ ವರೆಗಿನ ಪ್ರಗತಿಯನ್ನು ಸಂಕ್ಷೇಪವಾಗಿ ವಿವರಿಸಿದರು. ಕೊನೆಯಲ್ಲಿ, ಬಂಟವಾಳ ಶಾಖೆಯ ಮೆನೇಜರ ಶ್ರೀ। ಪಿ. ಹರಿದಾಸ ಶೆಣೈಯವರು ವಂದನಾರ್ಪಣೆ ಮಾಡಿದರು,

ಶ್ರೀ।ಎಂ. ಜನಾರ್ಧನ ರಾವ್ ಇವರಿಗೆ ಹಾರ್ದಿಕ ವಿದಾಯ

ದ. ಕ. ಜಿಲ್ಲಾ ಸಹಕಾರೀ ಕೃಷಿ ಅಭಿವೃದ್ಧಿ ಸಂಘದಲ್ಲಿ ೧೩ ವರ್ಷಗಳ ಕಾಲ ಕಾರ್ಯದರ್ಶಿಯಾಗಿ ಸೇವೆಸಲ್ಲಿಸಿದ,-ಈಗ ಕೊರ್ಪೊರೇಶನ್ ಬೇಂಕಿನಲ್ಲಿ ಆಫೀಸರಾಗಿ ನೇಮಕಗೊಂಡು ಸಹಕಾರೀ ಸಂಘದಿಂದ ಬೀಳ್ಕೊಳುವ ಶ್ರೀ। ಎಂ. ಜನಾರ್ದನರಾವ್‌ರವರಿಗೆ, ತಾ. ೨೭ನೇ ಮಂಗಳವಾರ ಸಾಯಂಕಾಲ ದ. ಕ. ಜಿಲ್ಲಾ ಕೇಂದ್ರ ಸಹಕಾರೀ ಬೇಂಕಿನ "ಮೊಳಹಳ್ಳಿ ಶಿವರಾವ್ ಸ್ಮಾರಕ ಭವನ"ದಲ್ಲಿ, ದ. ಕ. ಜಿಲ್ಲಾ ಕೇಂದ್ರ ಸಹಕಾರಿ ಬೇಂಕ್, ದ. ಕ. ಜಿಲ್ಲಾ ಸಹಕಾರಿ ಯೂನಿಯನ್ ಮತ್ತು ದ. ಕ. ಜಿಲ್ಲಾ ಸಹಕಾರಿ ಕೃಷಿ ಅಭಿವೃದ್ಧಿ ಸಂಘಗಳು ಸೇರಿ ವಿದಾಯ ಸತ್ಕಾರವನ್ನೇರ್ಪಡಿಸಿದ್ದವು. ಸಹಕಾರಿ ಯೂನಿಯನಿನ ಅಧ್ಯಕ್ಷ ಶ್ರೀ। ಎಸ್, ಡಿ. ಸಾಮ್ರಾಜ್ಯ, ದ. ಕ. ಜಿಲ್ಲಾ ಕೇಂದ್ರ ಸಹಕಾರಿ ಬೇಂಕಿನ ಅಧ್ಯಕ್ಷ ಶ್ರೀ। ಏರ್ಯ ಲಕ್ಷ್ಮೀನಾರಾಯಣ ಆಳ್ವ, ಜಿಲ್ಲಾ ಕೇಂದ್ರ ಸಹಕಾರಿ ಬೇಂಕಿನ ಕಾರ್ಯದರ್ಶಿ ಶ್ರೀ। ಕೆ. ಪಿ. ಜಗನ್ನಾಥರಾವ್, ಜಿಲ್ಲಾ ಸಹಕಾರಿ ಕೃಷಿ ಅಭಿವೃದ್ಧಿ ಸಂಘದ ಉಪಾಧ್ಯಕ್ಷ ಶ್ರೀ। ಕೆ. ಗಣಪತಿ ಭಟ್, ವಿಧಾನ ಸಭಾ ಸದಸ್ಯ ಶ್ರೀ। ಯು. ಟಿ. ಫರೀದ್ ಮೊದಲಾದವರು ಶ್ರೀ। ಜನಾರ್ಧನರಾವ್‌ರವರ ಪ್ರಾಮಾಣಿಕ ಸೇವೆಯನ್ನು ಶ್ಲಾಘಿಸಿ ಮಾತಾಡಿದರು.

ರೋಟರಿ ಕ್ಲಬ್ಬಿನಿಂದ ದೀಪಾವಳಿ ಆಚರಣೆ

ಮಂಗಳೂರು ಉತ್ತರ ರೋಟರಿ ಕ್ಲಬ್ಬಿನವರು, ತಾ. ೨೭-೧೦-'೭೬ರ ಸಾಪ್ತಾಹಿಕ ಸಭೆಯನ್ನು "ದೀಪಾವಳಿ ದಿನ"ವಾಗಿ ಆಚರಿಸಿದರು. ಛದ್ಮವೇಶ ಸ್ಪರ್ಧೆ, ರೋಟರಿ ಮಹಿಳೆಯರ ರಂಗವಲ್ಲಿ ಸ್ಪರ್ಧೆ, ರೋಟರಿ ಬಾಲಕರ ವಿವಿಧ ಸಾಂಸ್ಕೃತಿಕ ಚಟುವಟಿಕೆಗಳಿದ್ದುವು. ಛದ್ಮವೇಷ ಸ್ಪರ್ಧೆಯಲ್ಲಿ ಶ್ರೀ। ಎಸ್. ಪಿ. ನಾಯಕ್ ಮತ್ತು ಶ್ರೀ। ಎಸ್. ನಾರಾಯಣ ರಾವ್‌ರವರಿಗೆ ಅನುಕ್ರಮವಾಗಿ ಪ್ರಥಮ ಮತ್ತು ಪ್ರೋತ್ಸಾಹಕ ಬಹುಮಾನಗಳು ದೊರೆತುವು. ರಂಗವಲ್ಲಿ ಸ್ಪರ್ಧೆಯಲ್ಲಿ ಶ್ರೀಮತಿ ಪಿ. ಕೆ. ಗೋಪಿನಾಥ ಶೆಣೈಯವರಿಗೆ ಪ್ರಥಮ ಮತ್ತು ಶ್ರೀಮತಿ ಎಂ. ಡಿ. ಕುಡ್ವಾರವರಿಗೆ ಪ್ರೋತ್ಸಾಹಕ-ಹೀಗೆ ಬಹುಮಾನಗಳು ಕೊಡಲ್ಪಟ್ಟುವು. ರೋಟರಿ ಬಾಲಕರಿಗೆ— ಉದಯ ಕುಮಾರ ಮತ್ತು ಕುಮಾರಿ ರಾಧಾ ನಾಯಕರು ಪ್ರಥಮ ಬಹುಮಾನ, ಕುಮಾರಿ ಶ್ಯಾಮಲಾ ಮತ್ತು ಬೇಬಿ ದೀಪ್ತಿ ಇವರು ಪ್ರೋತ್ಸಾಹಕ ಬಹುಮಾನ ಪಡೆದರು.

——

ಪ್ರಪಂಚದಲ್ಲಿರುವ ಒಳ್ಳೆಯ ಆಲೋಚನೆಗಳೆಲ್ಲಾ ನಾವು ಹಕ್ಕುದಾರರು,— ಅದನ್ನು ಸ್ವೀಕರಿಸಲು ನಾವು ಅಣಿಯಾದಾಗ,

o o o o

"ಇವತ್ತು ಯಾವ ದಿನ?" ಎಂದು, ಮಹಾಭಕ್ತನಾದ ಹನುಮಂತನನ್ನು ಕೇಳಿದಾಗ, "ದೇವರೇ ನನ್ನ ನಿತ್ಯದಿನ, ಮತ್ತಾವುದನ್ನೂ ನಾನು ಲೆಕ್ಕಿಸುವುದಿಲ್ಲ"-ಎಂದು ಹೇಳಿದನು.

—ವಿವೇಕಾನಂದ.

——

ಗುಣದಲ್ಲಿ ರ್ಘುನ್‌ಗೆ ಸಮನಿಲ್ಲ

ಒಗೆದರೆ ತಿಳಿವುದು ನಿಮಗೆಲ್ಲ

ಹೊಸ ರ್ಘುನ್ ಡಬ್ಬಲ್ ಪವರ್ ಡಿಟರ್ಜೆಂಟ್ ಪೌಡರು

ಮಾರುಕಟ್ಟೆಯಲ್ಲಿ ದೊರೆಯುವ ಡಿಟರ್ಜೆಂಟ್ ಪೌಡರುಗಳಿಂದ ನಿಮಗೆ ನಿರಾಸೆಯೆ? ಡಬ್ಬಲ್ ಪವರ್ ಹೊಸ ರ್ಘುನ್ ಉಪಯೋಗಿಸಿರಿ. ಸಮೃದ್ಧ ನೊರೆ, ಹೊಳೆಯುವ ಬಿಳುಪು ಬಣ್ಣದ ಬೆಡಗು. ಹೊಸ ರ್ಘುನ್ ಮಲಿನತೆಗೆ ಮಾರಿ, ಬಟ್ಟೆಗಳೂ ಸುರಕ್ಷಿತ.

ಹೊಸ ಡಬ್ಬಲ್ ಪವರ್ ಡಿಟರ್ಜೆಂಟ್ ಪೌಡರಿಗೆ ಸರಿಸಾಟಿಯಾದ ಬೇರೆ ಯಾವುದೇ ಪೌಡರುಗಳಿಲ್ಲ. ಇದು ನಿಮ್ಮ ಕುಟುಂಬದ ಎಲ್ಲಾ ಬಟ್ಟೆಗಳಿಗೂ ಉಪಯುಕ್ತ; ಹಾಗೂ ಹೆಚ್ಚಿನ ಉಳಿತಾಯ.

ಹೊಸ ಡಬ್ಬಲ್ ಪವರ್ ರ್ಘುನ್ ಅರ್ಧ ಬಕೇಟು ನೀರಿಗೆ ಬರೇ ಒಂದು ಚಮಚ ಸಾಕು!

ಇದು ಉಳಿತಾಯವಲ್ಲವೇ ?

ಪ್ರತಿ 500 ಗ್ರಾಂ ಡಬ್ಬಿ ಕೊಳ್ಳುವಾಗ ರೂ. 2/- ಬೆಲೆಬಾಳುವ ಪ್ಲಾಸ್ಟಿಕ್ ಡಬ್ಬಿ ಉಚಿತ. ಪಾಲಿಥೀನ್ ಬ್ಯಾಗ್‌ಗಳಲ್ಲಿ ಕೊಂಡಾಗ ಮತ್ತೂ ಹೆಚ್ಚಿನ ಉಳಿತಾಯ.

ರ್ಘುನ್

ಉಪಯೋಗಿಸಿರಿ—ತೊಟ್ಟ ಬಟ್ಟೆಗಳಿಂದ ಹರ್ಷ ಪಡೆಯಿರಿ
ಶೀಘ್ರ ಕೊಳೆನಾಶಕ....ಉಜ್ವಲ ಹೊಳಪುದಾಯಕ.

ಯೂನಿಯನ್ ಹೋಮ್ ಪ್ರಾಡಕ್ಟ್ಸ್ ಪ್ರೈವೇಟ್ ಲಿಮಿಟೆಡ್, ಮಂಗಳೂರು.



DEEPAVALI GREETINGS FROM

MAKERS OF

FINEST JEWELLERY AND DIAMOND-SETTINGS

S. L. SHET DIAMOND HOUSE

JEWELLERS AND DIAMOND MERCHANTS

HAMPANKATTA-MANGALORE-575 001.

★

Phones: Showroom: 3242.
Res : 3272.

NEARLY THREE DECADES OF UNPARALLELED SERVICE.

PLEASE VISIT OUR AIR-CONDITIONED SHOWROOMS.